صلاة التراويح

ಸಲಾತುತರಾವೀಹ್

تحرير

اَلشَّيخ اَبُو اَدنان مُحَمَّد مُنير قَمَر

ترجمة

اَلفَاضِل رَفيق مَدَني سَاسْتَان

اَللُّغَة الكَنَّادِيَة

صلاة التراويح

ಸ್ವಲಾತುತ್ತರಾವೀಹ್

ರಮಳಾನ್ ತಿಂಗಳ ಚಂದ್ರ ದರ್ಶಣವಾದರೆ ಅಥವಾ ಸಾಕ್ಷಿಗಳ ಆಧಾರದಲ್ಲಿ ಸ್ಥಿರವಾದರೆ ಆ ರಾತ್ರಿ ರಮಳಾನ್ ತಿಂಗಳ ಪ್ರಥಮ ರಾತ್ರಿಯಾಗಿರುತ್ತದೆ ಅಲ್ಲದೇ ಕ್ಲಪ್ತಸಮಯಕ್ಕೆ ಚಂದ್ರದಶ್ರಣ ವಾದರೆ ಅಥವಾ ಸಾಕ್ಷಿಗಳ ಆದಾರದಲ್ಲಿ ನಿಶ್ಚಿತಗೊಂಡರೆ ಆದಿನದ ರಾತ್ರಿ ಇಶಾ ನಮಾಜಿನ ನಂತರ ತರಾವೀಹ್ ಪ್ರಾರಂಭವಾಗುತ್ತದೆ.

ಸ್ವಲಾತುತ್ತರಾವೀಹ್‌ನ ಶ್ರೇಷ್ಠತೆಃ

ರಮಳಾನಿನ ರಾತ್ರಿಯ (ಖಿಯಾಮುಲ್ಲೈಲ್) ನ ಮಹತ್ವದ ಕುರಿತು ನಮಗೆ ಅಬೂಹುರ್ರೈರಾ ಉಲ್ಲೇಖಿತ ಹದೀಸ್ ಪ್ರವಾದಿ ಸ.ರವರು ಹೇಳುತ್ತಾರೆ:

عَنْ أَبِي هُرَيْرَةَ أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ قَالَ : " مَنْ قَامَ رَمَضَانَ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ[1]

"ಯಾರಾದರೂ ಅಲ್ಲಾಹನಲ್ಲಿ ವಿಶ್ವಾಸ ಹಾಗೂ ಶುದ್ಧ ಮನಸ್ಸಿನಿಂದ ಅಲ್ಲಾಹನ ತ್ರಪ್ತಿಗಾಗಿ ರಮಳಾನಿನ ರಾತ್ರಿಗಳಲ್ಲಿ ನಮಾಜು (ಖಿಯಾಮ್) ಮಾಡಿದರೆ ಅವನ ಪೂರ್ವ ಎಲ್ಲಾ ದೋಷಗಳನ್ನು ಮನ್ನಿಸಲಾಗುವುದು"

ಕೆಲವು ಹದೀಸ್‌ಗಳಲ್ಲಿ (مَا تَقَدَّمَ مِنْ ذَنْبِهِ) ನಂತರ(وماتأخر) ಎಂದೂ ಪೂರ್ವ ಹಾಗೂ ನಂತರದ ದೋಷಗಳನ್ನೂ ಮನ್ನಿಸಲಾಗುವುದೆಂದು ಮುಸ್ನದ್ ಅಹ್ಮದ್ ನಲ್ಲಿ

[1] ಬುಖಾರಿ–37,ಫತುಹುಲ್ ಬಾರಿ 4/250, ಮುಸ್ಲಿಂ–759 ಶರಹುನ್ನವವಿ 3/4/39–40, ಫತಹುರಬ್ಬಾನಿ ತರ್ತಿಬುಲ್ ಮುಸ್ನದ್ 9/319–320,ಮಿಶ್ಕಾತ್ 1/610, ಸ್ವಹೀಹುಲ್ ಜಾಮಿಅ 3/5/334, ಇರ್ವಾವುಲ್ ಗಲೀಲ್ 4/14.

ಉತ್ತಮ ಶ್ರಂಖಲೆಯೊಂದಗೆ ಈ ವಾಕ್ಯ ಬಂದಿದೆ ಎಂದು ಇಮಾಮ್ ಮುಂಝಿರೀ ಹೇಳಿರುವರು.[2]

ಸ್ವಲಾತುತ್ತರಾವೀಹ್ ನ ವಿಧಿ:

ಖಿಯಾಮು ರಮಳಾನ್ ಆಥವಾ ತರಾವೀಹ್ ನಿರ್ವಹಿಸುವುದು ಕಡ್ಡಾಯವಲ್ಲ ಹೊರತು ಸುನ್ನತ್ ಆಗಿರುತ್ತದೆ, ಅಲದೇ ಈ ವಿಶಯದಲ್ಲಿ ನಾಲ್ಕು ಇಮಾಮರಲ್ಲಿ ಅಭಿಪ್ರಾಯವ್ಯೆತ್ಯಾಸಗಳಿಲ್ಲ ಅವರೆಲ್ಲರೂ (ಮುತ್ತಫಿಕ್) ಏಕ ಅಭಿಪ್ರಾಯ ಹೊಂದಿದವರಾಗಿರುವರು. ಕೆಲವರು ಸುಳ್ಳುಮಾತುಗಳನ್ನು ಫತ್ವಾಗಳನ್ನೂ ಹೊರಡಿಸುವವರು ಹೇಳುತ್ತಾರೆ ಯಾರು ತರಾವೀಹ್ ನಿರ್ವಹಿಸುವುದಿಲ್ಲವೋ ಅವರ ಉಪವಾಸವಿಲ್ಲ ಎಂದು ಅಂತವರು ಈ ಮಾತಿನಿಂದ ಹಿಂತಿರುಗಬೇಕಾಗಿದೆ. ರಮಳಾನ್ ತಿಂಗಳ ದಿನ ಮತ್ತು ರಾತ್ರಿ ಅನುಗ್ರಹೀತವೂ ಮಹತ್ವವಿರುವವೂ ಆಗಿವೆ ಆದುದರಿಂದ ಆ ತಿಂಗಳಲ್ಲಿ ದಾನ, ಉಪವಾಸ ತೊರೆಸುವಿಕೆ, ಕುರ್ ಆನ್ ಪಠಣ, ನವಾಫಿಲ್ ಗಳನ್ನೂ ಉತ್ತಮ ಕಾರ್ಯಗಳನ್ನು ಸಾದಯವಿದ್ದಷ್ಟು ಅಧಿಕಗೊಳಿಸುವುದು ಒಳೆಯದಾಗಿದೆ., ಯಾರಾದರೂ ಕಾರಾಣಂತರ ಗಳಿಂದ ಸ್ವಲಾತುತ್ತರಾವೀಹ್ ನಿರ್ವಹಿಸದೇ ಇದ್ದಲ್ಲಿ ಅವನು ಉಪವಾಸ ಹಿಡಿಯಬಹುದಾಗಿದೆ ಅಲ್ಲದೇ ಅವನ ಉಪವಾಸದಲ್ಲಿ ಯಾವುದೇ ರೀತಿಯ ಕೊರೆತೆಗಳು ಸಂಭವಿಸಲಾರದು.

ಪ್ರಥಮ ಪುರಾವೆ:

ಸ್ವಲಾತುತ್ತರಾವೀಹ್ ನ ನಿರ್ವಹಣೆಯ ವಿಶಯದಲ್ಲಿ ತೀರ್ವತೆಯನ್ನು ತೋರದೇ ಲಘುವಾದ ನಿಯಮ ಕೈಗೆತ್ತಿಕೊಳ್ಳುವುದರಲ್ಲಿ ಖೈರ್ ಮತು ಬರ್ಕತ್ ವಿರುವುದು ಅಲ್ಲದೇ ಸುನ್ನತಾದ ರೀತಿ ಸ್ವಹೀಹ್ ಬುಖಾರಿಯಲ್ಲಿ ಮತ್ತು ಸ್ವಹೀಹ್ ಮುಸ್ಲಿಂ ನಲ್ಲಿ ಸುನನ್ ಅರ್ಬಾ ಹಾಗೂ ಮುಸ್ನದ್ ಅಹಮದ್ ನಲ್ಲಿ ಉಲ್ಲೇಖಿತ ಗೊಂಡಿರುವುದು.

---

[2] ಬುಖಾರಿ–37, ಫತುಹುಲ್ ಬಾರಿ 4/250, ಮುಸ್ಲಿಂ–759 ಶರಹುನ್ನವವಿ 3/4/39–40, ಫತಹುರಬ್ಬಾನಿ ತರ್ತಿಬುಲ್ ಮುಸ್ನದ್ 9/319–320, ಮಿಶ್ಕಾತ್ 1/610, ಸ್ವಹೀಹುಲ್ ಜಾಮಿಅ 3/5/334, ಇರ್ವಾವುಲ್ ಗಲೀಲ್ 4/14. ಬುಲೂಗುಲ್ ಅಮಾನಿ ಶರಹು ಫತಹುರಬ್ಬಾನಿ 9/220.

عَنْ أَبِي هُرَيْرَةَ، قَالَ كَانَ رَسُولُ اللَّهِ صلى الله عليه وسلم يُرَغِّبُ فِي قِيَامِ رَمَضَانَ مِنْ غَيْرِ أَنْ يَأْمُرَهُمْ بِعَزِيمَةٍ ثُمَّ يَقُولُ " مَنْ قَامَ رَمَضَانَ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ ". [3]

ಪ್ರವಾದಿ ಸ. ರಮಳಾನಿನರಾತ್ರಿಗಳಲ್ಲಿ ನಮಾಜು (ತರಾವೀಹ್) ನಿರ್ವಹಿಸಲು ಉಪದೇಶಿಸುತಿದ್ದರು ಆದರೆ ಪ್ರವಾದಿ ಸ.ಅದನ್ನು (بِعَزِيمَةٍ) ಕಡ್ಡಾಯ ವಾಗಿ ನಿರ್ವಹಿಸಬೇಕೆಂದು ಹೇಳದೇ "ಯಾರಾದರೂ ಅಲ್ಲಾಹನಲ್ಲಿ ವಿಶ್ವಾಸ ಹಾಗೂ ಶುದ್ಧ ಅಲ್ಲಾಹನ ತ್ರಪ್ತಿಗಾಗಿ ರಮಳಾನಿನ ರಾತ್ರಿಗಳಲ್ಲಿ ನಿಂತರೆ (ಖಿಯಾಮ್) ಮಾಡಿದರೆ ಅವನ ಪೂರ್ವ ಎಲ್ಲಾ ದೋಷಗಳನ್ನು ಮನ್ನಿಸಲಾಗುವುದು"

ಹಾಫಿಳ್ ಇಬ್ನ ಹಜರ್ ಅಸ್ಕಲಾನಿ ಹೇಳುತ್ತಾರೆ ಸುನನು ನಸಾಯಿ ಯಲ್ಲಿ ಉಲ್ಲೇಖ ವಿರುವಂತೆ ಕತೀಬಾಃ ಸುಫ್ಯಾನ್ ರವರ ಮಾರ್ಗವಾಗಿ ಬಂದ ಹದೀಸ್ ನಲ್ಲಿ (مَا تَقَدَّمَ مِنْ ذَنْبِهِ) ನಂತರ(وماتأخر) ಎಂದೂ "ಪೂರ್ವ ಹಾಗೂ ನಂತರದ ದೋಷಗಳನ್ನೂ ಮನ್ನಿಸಲಾಗುವುದೆಂದು" ಸೇರಿಸಿದ್ದಾಗಿ ಉಲ್ಲೇಖಿಸಲಾಗಿದೆ ಹಾಗೂ ಅವರು ಮಾತಿನಂತೆ ಮುಸ್ನದ್ ಅಹ್ಮದನಲ್ಲಿ ಬಂದ ವರದಿಯಂತೆ ಉಲ್ಲೇಖಿಸಲಾಗಿದೆ. (ಇವರ ಈ ಸೂಚನೆ ಮುಂಚಿತವಾಗಿ ಹೇಳಿದಂತೆ ಇಮಾಮ್ ಮುಂಝಿರಿಯ ಉತ್ತಮ ಶ್ರಂಖಲೆಗೆ ಒತ್ತುನೀಡುತ್ತದೆ.)

ಹಾಫಿಳ್ ಮೌಸೂಫ್ ರಹಿಮಹುಲ್ಲಾ ಬರೆಯುತ್ತಾರೆ ಪೂರ್ವ ಹಾಗೂ ನಂತರದ ದೋಷಗಳ ವಿಶಯದಲ್ಲಿ ಬಹಳಷ್ಟು ಹದೀಸ್ ಗಳು ಬಂದಿವೆ ಅವುಗಳನ್ನು ಒಂದು ಪ್ರತ್ಯೇಖ ಗ್ರಂಥದಲ್ಲಿ ಸೇರಿಸಿರುವೆನು.[4]

ಒಂದು ಶಂಸಯ ನಿವಾರಣೆ:

---

[3] ಫತುಹುಲ್ ಬಾರಿ 4/250, ಮುಸ್ಲಿಂ ಶರಹುನ್ನವವಿ 3/6/40, ಅಲ್ ಮುಂತಖಾ ಮಅನ್ನ್ಯಲ್ 2/3/49, ಮಿಶ್ಕಾತ್ 1/405, ಅಲ್ ಫತಹುರಬ್ಬಾನಿ 9/220–221. ಸುನನ್ ನಸಾಯೀ 2192,2198, ಸುನನ್ ಅಬೀ ದಾವೂದ್ 1371, ಜಾಮಯೀ ತುರ್ಮಿಝೀ 808,

[4] ಫತುಹುಲ್ ಬಾರಿ 4/251–252

ಇಲ್ಲಿ ಒಂದು ಶಂಸಯ ಮೂಢುವುದೇನೆಂದರೆ ಈ ಹದೀಸಿನ ವಾಕ್ಯಗಳಲ್ಲಿ (وماتأخر) ಎಂದು ಇದೆ ಅಂದರೆ ನಂತರ ಬರುವ ದೂಷಗಳನ್ನೂ ಮನ್ನಿಸುತ್ತದೆಂದು ಇದು ಹೇಗೆ ಸಾದ್ಯ? ಯಾಕೆಂದರೆ ಮಘ್ಫಿರತ್ ಆಗುವುದು ಯಾವಾಗ ದಾಸನಲ್ಲಿ ದೋಷಗಳು ಸಂಭವಿಸಿದಾಗ, ದೋಷವೇ ಇಲ್ಲದಿರುವಾಗ ಮುಂಬರುವ ದ್ೋಷಗಳನ್ನು ಮನ್ನಿಸುವುದಾದರೂ ಹೇಗೆ? ಇದಕ್ಕೆ ಉತ್ತರವಾಗಿ ಹಾಫಿಳ್ ಇಬ್ನ್ ಹಜರ್ ರಹಿಮಹುಮುಲ್ಲಾಃ ಸ್ವಹೀಹುಲ್ ಬುಖಾರಿಯ ಶರಹ್ ಫತಹುಲ್ ಬಾರಿಯಲ್ಲಿ ಉತ್ತರಿಸುತ್ತಾ ವೆತ್ಯಸ್ತ ರೂಪದಲ್ಲಿ ಸಂಶಯ ನಿವಾರಣೆ ಗೊಳಿಸಿರುವರು. ಮೌಸೂಫ್ ರಹಿಮಹುಲ್ಲಾಹ್ ಬರೆಯುತ್ತಾರೆ:

1. ಇದು ಕಿನಾಯತ್ ಆಗಿರುತ್ತದೆ ಅವರು ಮಹಾಪಾಪಗಳಿಂದ ದೂರವಿರುವರು ನಂತರ ಇವರಿಂದ ಯಾವುದೇ ರೀತಿಯ ಮಹಾ ಪಾಪಗಳು ಸಂಭವಿಸಲಾರದು.
2. ಇವರಿಂದ ಯಾವುದೇ ರೀತಿಯ ದೋಷಗಳು ಸಂಭವಿಸಿದಲ್ಲಿ ಅವರನ್ನು ಮನ್ನಿಸಲಾಗುವುದು. ಮಾವರದಿ; ಮತ್ತು ಇತರ ಉಲಮಾಅರು ಅರಫಾದಿವಸದ ಉಪವಾಸದಿಂದ ಅವನ ಪೂರ್ವ ಮತ್ತು ನಂತರ ವಿರುವ ದೋಷಗಳನ್ನು ಮನ್ನಿಸಲಾಗುದೆನ್ನುವುದಕ್ಕೆ ಇದೇ ಆಧಾರವನ್ನು ಮುಂದಿಟ್ಟಿದ್ದಾರೆ.[5]
3. ಮುಂದೆ ಸಂಭವಿಸುವ ದೋಷಗಳ ಮನ್ನಣೆಯ ಉದ್ದೇಶ ಇವರಿಂದ ಯಾವುದೇ ರೀತಿಯ ಕೃತ್ಯಸಂಭವಿಸಿದರೆ ಅದರಬಗ್ಗೆ ಅವರನ್ನು ಶಿಕ್ಷಿಸಲಾಗುವುದಿಲ್ಲ!. ಅಹ್ಲುಲ್ ಬದ್ರಿನ ಸ್ವಹಾಬರ ಬಗ್ಗೆ ಪ್ರವಾದಿ ಸ.ರವರು ಹೀಗೆಂದಿರುವರು.

قَالَ " إِنَّهُ قَدْ شَهِدَ بَدْرًا، وَمَا يُدْرِيكَ لَعَلَّ اللَّهَ أَنْ يَكُونَ قَدِ اطَّلَعَ عَلَى أَهْلِ بَدْرٍ فَقَالَ اعْمَلُوا مَا شِئْتُمْ، فَقَدْ غَفَرْتُ لَكُمْ ".[6]

ಅಲ್ಲಾಹನು ಅಹ್ಲ್ ಬದ್ರಿನವರ ಇಖ್ಲಾಸ್, ಮತ್ತು ಅವರ ಕರ್ಮಗಳನ್ನು ನೋಡಿ ಹೇಳಿದನು: ಇಂದಿನ ಬಳಿಕ ನೀವು ಏನು ಬೇಕಾದರೂ ಮಾಡಿರಿ ನಿಮ್ಮ ಮೇಲೆ ಸ್ವರ್ಗವು ಕಡ್ಡಾಯ ಗೊಳಿಸಲಾಗಿದೆ.ಅಥವಾ ಹೀಗೆ ಹೇಳಿದನು ನಿಮ್ಮನ್ನು ಮನ್ನಿಸಲಾಗಿರುವುದು'

[5] ಫತುಹುಲ್ ಬಾರಿ 4/252
[6] ಫತುಹುಲ್ ಬಾರಿ 7/305

ಈ ಹದೀಸಿನಲ್ಲಿರುವ ಉದ್ದೇಶ ನಂತರವಿರುವ ನಿಮ್ಮ ಯಾವುದೇ ಕರ್ಮಗಳ ಬಗ್ಗೆ ನಿಮ್ಮನ್ನು ಹಿಡಿಯಲಾಗುವುದಿಲ್ಲ ಅಂದರೆ ಯಾವುದೇ ರೀತಿಯ ಕರ್ಮಗಳನ್ನು ಮಾಡಿದರೂ ಶಿಕ್ಷೆ ನೀಡಲಾಗದು, ಇದು ಅವರ ಬಹುಮಾನ ಹಾಗು ಆದರತೆಗಾಗಿ ಹೇಳಲಾಗಿದೆ ಮತ್ತು ಅವರು ಮಾಡಿದ ಇಸ್ಲಾಮಿನ ಮೊದಲ ಯುದ್ಧದಲ್ಲಿ ಸತ್ಯ ಮತು ಮಿಥ್ಯೆಯ ಬೇರ್ಪಡಿಸಲು ಮಾಡಿರುವ ಕರ್ಮಗಳ ಬದಲು ಅಲ್ಲಾಹನು ನಂತರ ಬರುವ ಎಲ್ಲಾ ದೋಷಗಳಿಗೆ ಮನ್ನಣೆ ನೀಡಿರುವನು[7]

ದ್ವಿತೀಯ ಪುರಾವೆ:

ಸ್ವಲಾತುತ್ತರಾವೀಹ್ ಸುನ್ನತ್ ಎನ್ನುವುದಕ್ಕಿರುವ ಇನ್ನೊಂದು ಪುರಾವೆ.ಸ್ವಹೀಹ್ ಬುಖಾರಿ,ಮುಸ್ಲಿಂ, ಅಬೂ ದಾವೂದ್,ನಸಾಯಿ,ಮತ್ತು ಇಬ್ನ್ ಮಾಜಃ ದಲ್ಲಿರುವ ಉಮ್ಮುಲ್ ಮುಮಿನೀನ್ ಆಯಿಶಾ ಸಿದ್ದೀಖಃ ರಳಿಯಲ್ಲಾಹು ಅನ್ ಹಾ ರವರಿಂದ ಉಲ್ಲೇಖ ಹದೀಸ್:

أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ صَلَّى ذَاتَ لَيْلَةٍ فِي الْمَسْجِدِ فَصَلَّى بِصَلَاتِهِ نَاسٌ ، ثُمَّ صَلَّى مِنْ الْقَابِلَةِ ، فَكَثُرَ النَّاسُ ، ثُمَّ اجْتَمَعُوا مِنْ اللَّيْلَةِ الثَّالِثَةِ أَوْ الرَّابِعَةِ ، فَلَمْ يَخْرُجْ إِلَيْهِمْ رَسُولُ اللَّهِ صَلَّى اللَّهُ عَلَيْهِ وَسَلَّمَ ، فَلَمَّا أَصْبَحَ قَالَ : (قَدْ رَأَيْتُ الَّذِي صَنَعْتُمْ ، وَلَمْ يَمْنَعْنِي مِنْ الْخُرُوجِ إِلَيْكُمْ إِلا أَنِّي خَشِيتُ أَنْ تُفْرَضَ عَلَيْكُمْ) وَذَلِكَ فِي رَمَضَانَ[8].

ನಬೀ ಸಲ್ಲಲ್ಲಾಹು ಅಲೈಹಿವಸಲ್ಲಮ್ ರು ನಮಾಜು(ತರಾವೀಹ್)ಮಸೀದಿಯಲ್ಲಿ ನಿರ್ವಹಿಸಿದರು, ಅವರೊಂದಿಗೆ ಬಹಳ ಜನರು ನಮಾಜು ನಿರ್ವಹಿಸಿದರು, ಮರುದಿನವೂ ಪ್ರವಾದಿ ಸ.ರವರು ನಮಾಜು(ತರಾವೀಹ್) ನಿರ್ವಹಿಸಿದಾಗ ಜನರ ಸೇರುವಿಕೆ ಅಧಿಕವಾಗಲಾರಂಭಿಸಿತು, ಮೂರನೇ ರಾತ್ರಿಯೂ ಜನರು ಸೇರಿದರು ಪ್ರವಾದಿ ಸ. ಮನೆಯಿಂದ ಹೊರಗೆ ಆಗಮಿಸಲೇ ಇಲ್ಲ. ಪ್ರಭಾತವಾದಗ ಹೇಳಿದರು ರಾತ್ರಿ ನೀವು ಅಲ್ಲಿ ಸೇರಿರುವುದನ್ನು ನಾನು ನೋಡಿರುವೆನು ಆದರೆ (ರಾತ್ರಿಯ ನಮಾಜು) ನಿಮ್ಮ

[7] ಫತುಹುಲ್ ಬಾರಿ 7/305–306, ನ್ಯಲುಲ್ ಅವುತಾರ್ 2/3/50

[8] ಮುಸ್ಲಿಂ 3/6/41–42, ಅಲ್ ಮುಂತಕ ಮಅ ಅನ್ನ್ಯಲ್ 3/4/51, ಫಿಕ್ಹ್ ಸುನ್ನಃ 1/206

ಮೇಲೆ ಕಡ್ಡಾಯವಾಗುವುದೆನ್ನುವ ಭಯ ನನ್ನನ್ನು ಹೊರಡುವುದಕ್ಕೆ ವಿರೋಧಿಸಿತು. ಮತ್ತು ಈ ಘಟನೆ ರಮಳಾನ್ ತಿಂಗಳಲ್ಲಾಗಿತ್ತು ನಡೆದಿರುವುದು.

ಸ್ವಹೀಹುಲ್ ಬುಖಾರಿ ಮತ್ತು ಇತರ ಹದೀಸ್ ಗ್ರಂಥಗಳಲ್ಲಿ ಆಯಿಶಾ ರ. ರಿಂದ ಉಲ್ಲೇಖವಿರುವ ಇನ್ನೊಂದು ಹದೀಸಿನಲ್ಲಿ ಪ್ರವಾದಿ ಸ. ಮೂರು ರಾತ್ರಿಗಳಲ್ಲಿ ಸ್ವಲಾತುತ್ತರಾವೀಹ್ ನಿರ್ವಹಿಸಿರುವ ವಿವರ ಲಭಿಸುತ್ತದೆ.

فَلَمَّا كَانَتِ اللَّيْلَةُ الرَّابِعَةُ عَجَزَ الْمَسْجِدُ عَنْ أَهْلِهِ، حَتَّى خَرَجَ لِصَلاَةِ الصُّبْحِ، فَلَمَّا قَضَى الْفَجْرَ أَقْبَلَ عَلَى النَّاسِ، فَتَشَهَّدَ ثُمَّ قَالَ " أَمَّا بَعْدُ، فَإِنَّهُ لَمْ يَخْفَ عَلَىَّ مَكَانُكُمْ، وَلَكِنِّي خَشِيتُ أَنْ تُفْتَرَضَ عَلَيْكُمْ فَتَعْجِزُوا عَنْهَا ". فَتُوُفِّيَ رَسُولُ اللَّهِ صلى الله عليه وسلم وَالأَمْرُ عَلَى ذَلِكَ[9]

ನಾಲ್ಕನೇ ರಾತ್ರಿಯಾದಾಗ ಜನ ಜಂಗುಳಿಯಿಂದ ಮಸ್ಜಿದ್ ನಬವೀ ಬಡವಾಯಿತು ಪ್ರವಾದಿ ಸ.(ಆಯಿಶಾ ರ.ರವರ ಹುಜರಾ ದಿಂದ ಹೊರಗೆ ಬರಲೇ ಇಲ್ಲ) ಪ್ರಭಾತವಾದಾಗ ಹೊರ ಬಂದು ನಮಾಜಿನಿಂದ ವಿರಮಿಸಿದಾಗ ಜನರ ಮುಂದೆ ತಿರುಗಿ ಶಹಾದತ್ತಿನ ನಂತರ ಹೇಳಿದರು ನಿಮ್ಮ ಬಗ್ಗೆ ನಾನು ಅರಿಯದೇ ಇರಲಿಲ್ಲ ಆದರೆ ನನಗೆ ಸಂದೇಹವಿದ್ದದ್ದು ನಿಮ್ಮ ಮೇಲೆ (ತರಾವೀಹ್ ನಮಾಜು ಕಡ್ಡಾವಾಗುವುದೋ ಎಂದಾಗಿತ್ತು ಮತ್ತು ನೀವು ಅದನ್ನು ನಿರ್ವಹಿಸಲು ಆಶಕ್ತರಾಗುವಿರಿ.(ಆದುದರಿಂದ ನಾನು ಹೊರ ಬರಲೇ ಇಲ್ಲ) ಮತ್ತು ಪ್ರವಾದಿ ಸ. ರವರ ಮರಣದ ವರೆಗೆ ತರಾವೀಹ್ ನಮಾಜು ಇದೇ ರೀತಿ ಇತ್ತು. (ಅಂದರೆ ಜಮಾತಾಗಿ ನಿರ್ವಹಿಸುವ ಪದ್ಧತಿ ಇರಲಿಲ್ಲ ಒಬ್ಬೊಬ್ಬರು ಒಂದೊಂದು ಇಮಾಮಿನ ಹಿಂದೆ ನಿರ್ವಹಿಸುತಿದ್ದರು ಉಮರ್ ರ. ರವರ ಕಾಲದ ವರೆಗೆ)

ಸ್ವಹೀಹ್ಯನ್ ಮತ್ತು ಇತರ ಹದೀಸ್ ಗ್ರಂಥಗಳಲ್ಲಿ ಝೈದ್ ಬಿನ್ ಸಾಬಿತ್ ರ.ರವರಿಂದ ಇದೇ ರೀತಿಯ ಇನ್ನೊಂದು ಹದೀಸ್ ನೋಡಲು ಸಾದ್ಯ ಆದರೆ ಇದರಲ್ಲಿ ಮೂರು ಅಥವಾ ನಾಲ್ಕು ರಾತ್ರಿಯ ವಿಷಯವಿಲ್ಲ ಹೊರತು.(فصلي فيها ليالي) ಎನ್ನುವ ವಚನಗಳಿವೆ

---

[9] ಫತುಹುಲ್ ಬಾರಿ 4/251

ರಸೂಲುಲ್ಲಾಹಿ ಸಲ್ಲಲ್ಲಾಹು ಅಲ್ಯಹಿವಸಲ್ಲಮ್ ರು ಮಸೀದಿಯಲ್ಲಿ ನಿರ್ಮಿಸಿದ ಹುಜರಾ ದಲ್ಲಿ ನಮಾಜು (ತರಾವೀಹ್)ನಿರ್ವಹಿಸಿದರು (حتي اجتمع عليه الناس) ಎಲ್ಲಿಯವರೆಗೆಂದರೆ ಜನರು ಪ್ರವಾದಿ ಸ.ರೊಂದಿಗೆ ನಮಾಜು ನಿರ್ವಹಿಸಲು ಸೇರಿದರು[10]

ಹಾಗೆಯೇ ಇದೇ ದಾಟಿಯ ಇತರ ಹದೀಸುಗಳಿಂದ ತಿಳಿದು ಬರುವುದೇನೆಂದರೆ ಸ್ವಲಾತುತ್ತರಾವೀಹ್ ಸುನ್ನತ್ ಆಗಿದೆ ವಾಜಿಬ್ ಅಲ್ಲ ಎಂದಾಗಿದೆ. ಇಮಾಮ್ ಶೌಕಾನಿ ರ. ಯಾವುದೇ ಅಭಿಪ್ರಾಯ ಹೇಳದೇ ಈ ಮಾತನ್ನು ಹೇಳಿರುವರು[11] ಹಾಗೂ ಇಮಾಮ್ ನವವೀ ಇದರ ಬಗ್ಗೆ ಒಮ್ಮತಾಭಿಪ್ರಾಯ ವ್ಯಕ್ತಪಡಿಸಿರುವರು[12]

ಸಾಮೂಹಿಕ ಸ್ವಲಾತುತ್ತರಾವೀಹ್ ನಿರ್ವಹಣೆ:

ಸ್ವಲಾತುತ್ತರಾವೀಹ್ ಅನುಮದನೀಯ ಮಾತ್ರವಲ್ಲ ಅದು ಸುನ್ನತ್ತೂ ಆಗಿದೆ ಇದಕ್ಕೆ ಆಧಾರ ಹಿಂದಿನ ಹದೀಸಿನಲ್ಲಿ ನಾವು ನೋಡಿರುವೆವು.ಪ್ರತ್ಯೇಖವಾಗಿ ಅಬೂಹುರೈರಾ ರ.ರವರ ಹದೀಸಿನಲ್ಲಿ .

(كان رسول الله صلى الله عليه وسلم يُرغب في قيام رمضان، من غير أن يأمرهم بعزيمة،)

'ಪ್ರವಾದಿ ಸ. ರವರು ರಮಳಾನಿನ ರಾತ್ರಿಗಳಲ್ಲಿ ನಮಾನಿನ ಕಲ್ಪಿಸುತ್ತಿದ್ದರು ಆದರೆ ಪ್ರವಾದಿ.ಸ.ರವರು (ತರ್ಗೀಬ್) ನಿರ್ಬಂಧವಾಗಿ ಕಲ್ಪಿಸುತ್ತಿರಲಿಲ್ಲ'

ಇಮಾಮ್ ನವವೀ ಶರಹುಲ್ ಮುಸ್ಲಿಂ ನಲ್ಲಿ ಬರೆದಿರುವಂತೆ ಅಹ್ಲುಲ್ ಇಲ್ಮಿನ ವಕ್ತಾರರಲ್ಲಿ ಸ್ವಲಾತುತ್ತರಾವೀಹ್ ಮುಸ್ತಹಿಬ್ ಹಾಗೂ ಸುನ್ನತ ಎಂದು ಒಮ್ಮತಾಭಿಪ್ರಾಯವಿದೆ, ಆದರೆ ಇದನ್ನು ಮಸೀದಿಯಲ್ಲಿ ಇಮಾಮ ರೊಂದಿಗೆ ನಿರ್ವಹಿಸಬೇಕೋ ಅತವಾ ತನ್ನ ಮನೆಯಲ್ಲಿಯೇ ನಿರ್ವಹಿಸದರೆ ಶ್ರೇಷ್ಟವೋ ಎನ್ನುವುದರ ಬಗ್ಗೆ ಅಭಿಪ್ರಾಯ ವೆತ್ಯಾಸ ಕಂಡುಬರುತ್ತಿವೆ ಇಮಾಮ್ ಮಾಲಿಕ್, ಅಬೂ

---

[10] ಮಿಶ್ಕಾತ್ 1/405

[11] ನೈಲುಲ್ ಅವುತಾರ್ 2/3/49

[12] ಶರಹುಲ್ ಮುಸ್ಲಿಂ ನವವೀ 3/6/40

ಯೂಸುಫ್, ಮತ್ತು ಕೆಲವು ಶಾಫಿಯಃ ರಹಿಮಹುಲ್ಲಾಃ ಹೇಳಿರುವರು ಸ್ವಲಾತುತ್ತರಾವೀಹ್ ಒಬ್ಬೊಂಟಿಗನಾಗಿ ತನ್ನ ಮನೆಯಲ್ಲಿ ನಿರ್ವಹಿಸುವುದು ಶ್ರೇಷ್ಠವೆಂದಿದ್ದಾರೆ ಮತ್ತು ಇಮಾಮ್ ಶಾಫಿಯೀ ಮತ್ತವರ ಶಿಶ್ಯಂದಿರ ಒಂದು ದೊಡ್ಡ ಸಮೂಹವೇ ಹಾಗೂ ಇಮಾಮ್ ಅಹ್ಮದ್ ಬಿನ್ ಹಂಬಲ್,ಇಮಾಮ್ ಅಬೂಹನೀಫಃ, ಇಮಾಮ್ ಇಬ್ನುಲ್ ಮುಬಾರಕ್, ಇಮಾಮ್ ಇಸ್ಹಾಕ್ ಬಿನ್ ರಾಹವ್ಯಹಿ ಇನ್ನೂ ಇತರ ಮಾಲಿಕೀಯರ ಬಳಿ ಸ್ವಲಾತುತ್ತರಾವೀಹ್ ಮಸೀದಿಯಲ್ಲಿ ಸಾಮೂಹಿಕ ನಿರ್ವಹಿಸುವುದು ಶ್ರೇಷ್ಠವಾಗಿದೆ.[13]

ಒಂದನೇ ವಿಭಾಗದ (ಇಮಾಮ್ ಮಾಲಿಕ್, ಅಬೂ ಯೂಸುಫ್, ಮತ್ತು ಕೆಲವು ಶಾಫಿಯೀ ರಹಿಮಹುಮುಲ್ಲಾಹ್) ಪುರಾವೆ ಬುಖಾರಿ, ಮುಸ್ಲಿಂ, ಅಬೂದಾವೂದ್, ನಸಾಯೀ, ಮುಅಜಮತ್ತಬರಾನಿ ಕಬೀರ್, ಮುಸ್ನದ್ ಅಹ್ಮದ್ ಮತ್ತು ಸ್ವಹೀಹ್ ಅಬೀ ಅವಾನಃ , ದಲ್ಲಿ ಝೈದ್ ಇಬ್ನ್ ಸಾಬಿತ್ ರ.ರವರಿಂದ ಉಲ್ಲೇಖ ಪ್ರವಾದಿ ಸ.ರವರು ಹೇಳುತ್ತಾರೆ:

(أفضل الصلاة صلاة المرء في بيته إلا المكتوبة")

’ಕಡ್ಡಾಯ ನಮಾಜಿನ ಹೊರತು ಮನುಷ್ಯ ತನ್ನ ಮನೆಯಲ್ಲಿ ನಿರ್ವಹಿಸುವ ಸುನ್ನತ್ ನಮಾಜಾಗಿದೆ ಶ್ರೇಷ್ಠವಾಗಿರುವುದು’[14]

ಹೀಗಿರುವಾಗ ಎರಡನೇ ವಿಭಾಗ (ಜುಮ್ಹೂರ್ ಅಹುಲುಲ್ ಇಲ್ಮ್ , ಇಮಾಮ್ ಶಾಫಿಯೀ ಮತ್ತವರ ಶಿಶ್ಯಂದಿರ ಒಂದು ದೊಡ್ಡ ಸಮೂಹವೇ ಹಾಗೂ ಇಮಾಮ್ ಅಹ್ಮದ್ ಬಿನ್ ಹಂಬಲ್,ಇಮಾಮ್ ಅಬೂಹನೀಫಃ, ಇಮಾಮ್ ಇಬ್ನುಲ್ ಮುಬಾರಕ್, ಇಮಾಮ್ ಇಸ್ಹಾಕ್ ಬಿನ್ ರಾಹವ್ಯಹಿ ಇನ್ನೂ ಇತರ ಮಾಲಿಕೀ) ಇವರ ಪುರಾವೆ ಸ್ವಹೀಹುಲ್ ಬುಖಾರಿ, ಇಮಾಮ್ ಮಾಲಿಕರ ಮುಅತ್ತಾ , ಇಬ್ನ ಅಬೀಶ್ಯಬಾ

---

[13] ತುರ್ಮಿಝೀ, ತುಹ್ಫಾ–3/532, ಶರಹುನ್ನವವೀ–3/6/39–40, ನಲುಲ್ ಅವುತಾರ್–2/3/50, ಫತಹುಲ್ ಬಾರಿ–4/252

[14] ಶರಹುನ್ನವವೀ, ಸ್ವಹೀಹುಲ್ ಜಾಮಿಅ್–1/1/366, ಅನ್ಯಲುಲ್ ಅವುತಾರ್, ಫತಹುಲ್ ಬಾರಿ–4/353

ಮತ್ತು ತ್ವಬಕಾತ್ ಇಬ್ನ ಸಅದ್ ನಲ್ಲಿ ವರದಿ. ಅಬ್ದುಲ್ ರಹ್ಮಾನ್ ಇಬ್ನ್ ಅಬ್ದುಲ್ ಖಾರಿ ಯವರಿಂದ ಉಲ್ಲೇಖ ಹದೀಸ್ ಮೌಕೂಫ್

(خَرَجْتُ مَعَ عُمَرَ بْنِ الْخَطَّابِ . رضى الله عنه . لَيْلَةً فِي رَمَضَانَ، إِلَى الْمَسْجِدِ، فَإِذَا النَّاسُ أَوْزَاعٌ مُتَفَرِّقُونَ يُصَلِّي الرَّجُلُ لِنَفْسِهِ، وَيُصَلِّي الرَّجُلُ فَيُصَلِّي بِصَلاَتِهِ الرَّهْطُ فَقَالَ عُمَرُ إِنِّي أَرَى لَوْ جَمَعْتُ هَؤُلاَءِ عَلَى قَارِئٍ وَاحِدٍ لَكَانَ أَمْثَلَ. ثُمَّ عَزَمَ فَجَمَعَهُمْ عَلَى أُبَىِّ بْنِ كَعْبٍ، ثُمَّ خَرَجْتُ مَعَهُ لَيْلَةً أُخْرَى، وَالنَّاسُ يُصَلُّونَ بِصَلاَةِ قَارِئِهِمْ، قَالَ عُمَرُ نِعْمَ الْبِدْعَةُ هَذِهِ، وَالَّتِي يَنَامُونَ عَنْهَا أَفْضَلُ مِنَ الَّتِي يَقُومُونَ. يُرِيدُ آخِرَ اللَّيْلِ، وَكَانَ النَّاسُ يَقُومُونَ أَوَّلَهُ[15]) .

'ನಾನು ಒಮ್ಮೆ ಉಮರ್ ಇಬ್ನುಲ್ ಖತ್ತಾಬ್ ರ.ರವರೊಂದಿಗೆ ರಮಳಾನಿನ ರಾತ್ರಿಯಲ್ಲಿ ಹೊರಟಾಗ ಜನರು ವಿಭಾಗಿಗಳಾಗಿ ನಮಾಜು ಮಾಡುತ್ತಿದ್ದರು, ಕೆಲವರು ಒಬ್ಬೊಂಟಿಗನಾಗಿ ನಮಾಜು ಮಾಡುತ್ತಿದ್ದರೆ ಕೆಲವರು ಕೆಲವರ ಹಿಂದೆ ನಿಂತು ನಮಾಜು ಮಾಡುವುದಾಗಿ ನೋಡಿದಾಗ ಉಮರ್ ರ. ಹೇಳಿದರು: ನನಗೆ ತೋರುತ್ತದೆ ನಾನು ಇವರೆಲ್ಲರನ್ನು ಒಂದು ಇಮಾಮಿನ ಹಿಂದೆ ನಮಾಜು ಮಾಡುವವರಾಗಿ ಸೇರಿಸಿದರೆ ಅದು ಉತ್ತಮವಾದೀತು. ನಂತರ ದೃಢವಾಗಿ ತನ್ನ ನಿಲುವನ್ನು ಕಾರ್ಯರೂಪಕ್ಕೆ ತಂದು ಉಬಯಿ ಇಬ್ನ್ ಕಅಬ್ ರ. ಸಾರಥ್ಯದಲ್ಲಿ ನಮಾಜು ನಿರ್ವಹಿಸಲು ಎಲ್ಲಾ ಜನರನ್ನು ಸೇರಿಸಲಾಯಿತು.

ಇನ್ನೊಂದು ರಾತ್ರಿಯಲ್ಲಿ ನಾನು ಉಮರ್ ರ.ಜೊತೆ ಹೊರಟಾಗ ಜನರು ಒಂದು ಖಾರಿಯ (ಖುರ್ ಆನ್ ಪಠಿಸುವ ಒಬ್ಬ ಇಮಾಮಿನ) ಹಿಂದೆ ನಮಾಜು ನಿರ್ವಹಿಸುತಿರುವುದನ್ನು ನೋಡಿದ ಉಮರ್.ರ. ಹೀಗೆಂದರು 'ಈ ಹೊಸ ಅಂದಾಜು ಒಳ್ಳೇದಾಗಿದೆ. ಮಲಗಿರುವವರು ಈಗ ನಮಾಜು ಮಾಡುವುದಕಿಂತ ಶ್ರೇಷ್ಠರು ಉದ್ದೇಶ

[15] ಫತಹುಲ್ ಬಾರಿ –4/250, ಸ್ವಲಾತುತ್ತರಾವೀಹ್ ಅಲ್ಬಾನಿ ಉರ್ದು ಪು.55–56, ಇಬ್ನ್ ಅಬೀ ಶೈಬಾ (نعمت البدعة هذه) ಈ ವಾಕ್ಯಗಳಿಲ್ಲ. ಇಮಾಮ್ ಮಾಲಿಕ್ ಮುಅತ್ತ–6/249.

ರಾತ್ರಿಯ ಕೊನೆಯ ಘಳಿಗೆಯಲ್ಲಿ ನಮಾಜು ಮಾಡುವವರಾಗಿರುವರು, ಜನರು ರಾತ್ರಿಯ ಆರಂಭದಲ್ಲೇ ನಮಾಜು ನಿರ್ವಹಿಸುತ್ತಿದ್ದರು.

ಈ ಮೌಕೂಫಾದ ಹದೀಸಿನ ಆದಾರದಲ್ಲಿ ಎರಡನೇ ವಿಭಾಗ ದ ಉಲಮಾಅರು ತರಾವೀಹ್ ನಮಾಜು ಮಸೀದಿಯಲ್ಲಿ ನಿರ್ವಹಿಸುವುದು ಶ್ರೇಷ್ಠವೆಂದು ಕರಾರು ಮಾಡಿರುವರು. ಮತ್ತು ತರಾವೀಹ್ ನಮಾಜು ಇಮಾಮ್ ಜಮಾಅತ್ತಿನೊಂದಿಗೇ ನಿರ್ವಹಿಸುವ ಪದ್ದತಿ ಮುಸಲ್ಮಾನರಲ್ಲಿ ಜಾರಿಯಲ್ಲಿದೆ, ಏಕೆಂದರೆ ಈ ನಮಾಜು ಈದ್ ನಮಾಜಿನಂತೆ ಶಆಯಿರ್‌ನ (ಇಸ್ಲಾಮೀ ಲಾಂಚನದ)ಲ್ಲಿ ಸೇರಿದ್ದಾಗಿದೆ. ಆದುದರಿಂದ ಈದ್ ನಮಾಜಿನಂತೆ ತರಾವೀಹ್ ನಮಾಜನ್ನೂ ಇಮಾಮ್ ಜಮಾತ್ತಿನೊಂದಿಗೆ ನಿರ್ವಹಿಸಬೇಕಾಗಿರುವುದು ಶ್ರೇಷ್ಠವಾಗಿರುತ್ತದೆ ಮತ್ತು ಇದೇ ಅಹ್ಲುಸುನ್ನತೀ ವಲ್ ಜಮಾಅಃ ಆಗಿದೆ.

ಉಮರುಲ್ ಫಾರೂಕ್ ರ. ಇಮಾಮ್ ಜಮಾಅತ್ತಿನೊಂದಿಗೆ ತರಾವೀಹ್ ನಮಾಜನ್ನು ನಿರ್ವಹಿಸಲು ಹೆಚ್ಚು ಒತ್ತುಕೊಡುತಿದ್ದರು ಯಾರ್ಥಾತವಾಗಿ ಪ್ರವಾದಿ ಸ. ರವರ ಈ ನಮಾಜನ್ನು ಇಮಾಮ್ ಜಮಾಅತ್ತಾಗಿ ನಿರ್ವಹಿಸಿದ ಕಾರಣದಿಂದಾಗಿದೆ. ಮತ್ತು ನಿರಂತರ ಇಮಾಮ್ ಜಮಾಅತ್ತಾಗಿ ನಮಾಜು ತರಾವೀಹ್ ನಿರ್ವಹಿಸುವುದರಿಂದ ಹಿಂಜರಿದಿದ್ದಿ ಕಡ್ಡಾಯವಾಗುವುದೆಂಬ ವಿಚಾರದಿಂದಾಗಿತ್ತು ಪ್ರವಾದಿಸ.ರವರ ಕಾಲದ ನಂತರ ಆ ವಿಚಾರ ಬಾಕಿಯಿಲ್ಲದಿರುವುದರಿಂದ ಉಮರ್ ರ. ರವರ ಬಳಿ ಇಮಾಮ್ ಜಮಾಅತ್ತಾಗಿ ನಿರ್ವಹಿಸುವುದು ಶ್ರೇಷ್ಠವೆಂದಾದಾಗ ಉಮರ್ ರ. ರವರು ಜನರನ್ನು ಸೇರಿಸಿ ಒಬ್ಬ ಇಮಾಮಿನ ಹಿಂದೆ ತರಾವೀಹ್ ನಮಾಜು ನಿರ್ವಹಿಸಲು ಆಜ್ಞೆ ಹೊರಡಿಸಿದರು. ಇದರಲ್ಲಿ ಒಂದು ವಹದತ್ ಉಮ್ಮತ್(ಉಮ್ಮತ್ತಿನ ಐಕ್ಯ) ಮತ್ತು ಹೆಚ್ಚು ಜನರಿಗೆ ಒಂದೇ ಇಮಾಮಿನ ಹಿಂದೆ ನಿಂತು ಒಮ್ಮೇಲೆ ತರಾವೀಹ್ ನಮಾಜು ಮುಗಿಸುವ ಅವಸರವೂ ದೊರಕುತ್ತದೆ ಹಾಗೂ ಉಮರ್ ರ. ಒಬ್ಬ ನಮಾಜು ಮಾಡುವುದಕ್ಕಿಂತ ಜನರೊಂದಿ ಸೇರಿ ಇಮಾಮ್ ಜಮಾತ್ತಾಗಿ ತರಾವೀಹ್ ನಿರ್ವಹಿಸುವುದು ಶ್ರೇಷ್ಠವೆಂದು ಕರಾರು ಮಾಡಿರುವುದು ಪ್ರವಾದಿ ಸ.ರವರ ಇತ್ತಿಬಾಅ (ಅನುಸರಣೆ)ಮಾಡುವುದಾಗಿದೆ. ಹಾಫಿಳ್ ಇಬ್ನ್ ಹಜರ್ ರಹಿಮಹುಲ್ಲಾಹ್ ಇಬ್ನು ತೀಮಿಯಾ ರಂತ ಇತರರು ಹದೀಸಿನ ಟಿಪ್ಪಣಿಯಿಂದ ವರದಿ ಮಾಡುತ್ತಾರೆ ಇಮಾಮ್ ಬುಖಾರಿ ರಹಿಮಹುಮುಲ್ಲಾಹ್ ಈ ಉಮರ್ ರ. ರವರ ಅಸರ್ ಹದೀಸಿನ ನಂತರ

ಆಯಿಶಾ ಸಿದ್ಧೀಖಃ ರಳಿಯಲ್ಲಾಹು ಅನ್ಹಾ ರವರ ಹದೀಸ್ ವರದಿ ಮಾಡುತ್ತಾರೆ ಅದರಲ್ಲಿ ಅವರು ವಿವರಿಸುತ್ತಾರೆ.

عن عائشه رضي الله عنها.{ أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ صَلَّى ذَاتَ لَيْلَةٍ فِي الْمَسْجِدِ فَصَلَّى بِصَلَاتِهِ نَاسٌ ... وَذَلِكَ فِي رَمَضَانَ}.

ನಿಶ್ಚಯವಾಗಿಯೂ ಪ್ರವಾದಿ ಸ. ರವರು ಮಸ್ಜಿದ (ನ್ನಬವಿಯಲ್ಲಿ) ಜನರೊಂದಿಗೆ (ಇಮಾಮ್ ಜಮಾಅತ್ತಾಗಿ) ರಾತ್ರಿಯಲ್ಲಿ (ತರಾವೀಹ್)ನಮಾಜು ನಿರ್ವಹಿಸಿದ್ದರು... ಅದು ರಮಳಾನಿನಲ್ಲಾಗಿತ್ತು.[16]

ಹೀಗಿರುವಾಗ ಇಮಾಮ್ ಬುಖಾರಿ ರಹಿಮಹುಲ್ಲಾಹ್ ಈ ಹದೀಸನ್ನು ಅಸರ್ ಉಮರುಲ್ ಫಾರೂಕ್ ರ ಕೂಡಲೇ ವರದಿ ಮಾಡಿರುವುದರ ಉದ್ದೇಶವೂ ಅದಾಗಿರ ಬಹುದು ಏಕೆಂದರೆ ಉಮರ್ ಫಾರೂಕ್ ರ. ರವರು ಪ್ರವಾದಿ ಸ.ರವರ ಕರ್ಮಗಳಿಂದ ಇಮಾಮ್ ಜಮಾಅತ್ (ತರಾವೀಹ್) ಶ್ರೇಷ್ಠವೆಂದು ಹಿಡಿದಿರುವುದಾಗಿದೆ ಮತ್ತು ಆಯಿಷಾ ರ.ರವರ ಹದೀಸಿನಿಂದಲೂ ಆ ಕರ್ಮ ಉಲ್ಲೇಖಿತಗೊಂಡಿದೆ.[17]

ಮಿಥ್ಯೆ ಪ್ರಮಾಣದ ನಿವಾರಣೆ:

ಉಮರ್ ರ.ರವರ نِعْمَ الْبِدْعَةُ هَذِهِ 'ಉತ್ತಮ ಆರಂಭ' ಎಂದಿದಕ್ಕೆ ಕೆಲವರು ಬಿದ್‌ಅತ್ ನ ದೊಡ್ಡ ಒಂದು ಅದ್ಯಾಯವೇ ರಚಿಸಿದ್ದಾರೆ ಅಷ್ಟೇ ಅಲ್ಲ ಅದರಿಂದ ಒಂದು ಉಸೂಲ್ ಕೂಡ ರಚಿಸಿಕೊಂಡಿದ್ದಾರೆ ಉಮರ್ ರ. ರವರು 'ಬಿದ್‌ಅತ ಹಸನಃ' ಹೇಳಿದಂತೆ, ಇನ್ನು ಬಿದ್‌ಅತ್ ಹಸನಃ ಮತ್ತು ಬಿದ್‌ಅತ್ ಸಯ್ಯಿಅಃ ದ ವಿಭಾಗಗಳ ನಂತರ ತಾವು ಮಾಡಿಕೊಂಡಂತಹಾ ಬಿದ್‌ಅತ್ ಗಳನ್ನು ಅನುವದನೀಯವೆಂದು ಹೇಳಿಕೊಂಡು ಜನ ಸಾಮನ್ಯರೆಡೆಯಲ್ಲಿ ಹಲವಾರು ಹೊಸ ಹೊಸ ಆಚಾರಗಳನ್ನು ರಚಿಸಿಕೊಂಡಿರುವುದು ಸತ್ಯಕ್ಕೆ ದೂರವಾದದ್ದಾಗಿದೆ.

ಒಂದನೇಯದಾಗಿ:

---

[16] ಬುಖಾರಿ –4/250

[17] ಫತಹುಲ್ ಬಾರಿ–4/252, ಸ್ವಲಾತುತ್ತರಾವೀಹ್ (ಉರ್ದು) ಅಲ್ಬಾನಿ ಪು.33–39.

ಈ ವಿಷಯದಲ್ಲಿ ಒಂದನೇಯದಾಗಿ ಬಿದ್‌ಅತ್ತಿನ ಈ ವಿಭಾಗಳು ತಪ್ಪಾಗಿವೆ ಹೊರತು ಪ್ರವಾದಿ ಸ.ರವರು ಹೇಳಿರುವಂತೆ ಎಲ್ಲಾ ಬಿದ್‌ಅತ್ ಪಥಭ್ರಷ್ಟವಾಗಿದೆ ಎಲ್ಲಾ ಪಥಭ್ರಷ್ಟತೆ ನರಕಕ್ಕಾಗಿದೆ, ಸ್ವಹೀಹ್ ಮುಸ್ಲಿಂ, ಸುನನ್ ಅರಬಅಹು, ಮುಸ್ನದ್ ಅಹ್ಮದ್, ಬೈಹಖೀ, ದಾರಿಮೀ, ಮತ್ತು ಮುಸ್ತದ್ರಿಕ್ ಹಾಕಿಮ್, ಎಲ್ಲಾ ಗ್ರಂಥದಲ್ಲಿ ಪ್ರಖ್ಯಾತ ಕುತುಬ ಮಸ್ನೂನಃ (ಪ್ರವಾದಿ ಸ., ಖುಲಫಾವುರ್ರಾಶಿದೀನ್, ಸ್ವಹಾಬ, ತಾಬೀಊ, ತಾಬಿವುತ್ತಾಬಿಊ, ಅಯಿಮ್ಮತುಲ್ ಮುಜ್ತಹಿದೀನ್, ತಮ್ಮ ಮಜ್ಲಿಸ್ ಗಳಲ್ಲಿ ಕುತ್ಬಾ ಮತ್ತು ಪ್ರವಚನಗಳನ್ನು ನೀಡುವ ಮುನ್ನ ಈ ಖುತ್ಬಾವನ್ನು ಓದುವವರಾಗದ್ದರು ಇಂದನವರೆಗೂ ಉಲಮಾ ಉಮ್ಮಃ ಕೂಡ ಜುಮಾ ಮತ್ತು ಇತರ ಖುತ್ಬಾ ಗಳಲ್ಲಿ ಓದುತಿದ್ದಾರೆ) ಇದರ ಕೊನೆಯ ವಾಕ್ಯಗಳಲ್ಲಿ ಪ್ರವಾದಿ ಸ.ರವರ ಮಾತುಗಳು ಇವೆ:

وَشَرُّ الْأُمُورِ مُحْدَثَاتُهَا وَكُلُّ مُحْدَثَةٍ بِدْعَةٌ وَكُلُّ بِدْعَةٍ ضَلَالَةٌ

'ಎಲ್ಲಾ ಕೆಡುಕು ಆಚಾರಗಳು ದೀನಿನಲ್ಲಿ ಸೇರಿಸಿರುವ ನೂತನಾಚಾರವಾಗಿದೆ ಎಲ್ಲಾ ನೂತನಾಚಾರ ಬಿದ್‌ಅತ್ ಪಥಭ್ರಷ್ಟವಾಗಿದೆ.

ಮತ್ತು ಸುನನ್ ನಸಾಯಿ, ಸ್ವಹೀಹ್ ಇಬ್ನ್ ಖುಝೈಮಾ, ದಲ್ಲಿ ಈ ವಾಕ್ಯವಿದೆ: [18] وَكُلَّ ضَلَالَةٍ فِي النَّارِ 'ಎಲ್ಲಾ ಪಥಭ್ರಷ್ಟತೆ ನರಕಕ್ಕಾಗಿದೆ,[19]

ಹೀಗಿರುವಾಗ ಎಲ್ಲಾ ಬಿದ್ ಅತ್ತಿನಿಂದ ದೂರವಿರಲು ಸ್ವಹೀಹ್ ಅಬೂದಾವೂದ್, ತುರ್ಮಿಝೀ, ಇಬ್ನ್ ಮಾಜಃ, ಮುಸ್ನದ್ ಅಹ್ಮ ದ್, ಸ್ವಹೀಹ್ ಇಬ್ನ್ ಹಿಬ್ಬಾನ್, ಮತ್ತು ಸುನನು ದಾರಿಮೀ ಯಲ್ಲಿ ಪ್ರವಾದಿ ಸ.ರವರ ಉಲ್ಲೇಖ ಏದೆ:

---

[18] **ಮಿಷ್ಕಾತ್–1/15 ತಕ್ರೀಜ್ ಸ್ವಲಾತುರ್ರಸೂಲ್ ಸ.44–46**

[19] **ಮಿಷ್ಕಾತ್–1/15 ಶೈಖ್ ಅಲ್ಬಾನಿ ರ. ಇದರ ಸನದ್ (ಶ್ರಂಖಲೆ) ಸ್ವಹೀಹ್ ಎಂದಿದ್ದಾರೆ.**

((مَنْ يَعِشْ مِنْكُمْ بَعْدِي فَسَيَرَى اخْتِلَافًا كَثِيرًا فَعَلَيْكُمْ بِسُنَّتِي وَسُنَّةِ الْخُلَفَاءِ الْمَهْدِيِّينَ الرَّاشِدِينَ تَمَسَّكُوا بِهَا وَعَضُّوا عَلَيْهَا بِالنَّوَاجِذِ وَإِيَّاكُمْ وَمُحْدَثَاتِ الْأُمُورِ فَإِنَّ كُلَّ مُحْدَثَةٍ بِدْعَةٌ وَكُلَّ بِدْعَةٍ ضَلَالَةٌ))

ನಿಮ್ಮಲ್ಲಿ ಯಾರಾದರೂ ನನ್ನ ಬಳಿಕ ಜೀವಿಸಿರುವುದಾದರೆ ಬಹಳಷ್ಟು ಅಭಿಪ್ರಾಯ ವೆತ್ಯಾಸಗಳನ್ನು ಅವನು ಕಾಣುವನು, ಅ ಸಮಯದಲ್ಲಿ ತಮಗೆ ನನ್ನ ಚೆರ್ಯೆ ಮತ್ತು ಖುಲಾಫಾವುರ್ರಾಷಿದೀನರ ಚರ್ಯೆಯನ್ನು ಬಿಗಿದಪ್ಪಿಕೊಳ್ಳಿ ದವಡೆಹಲ್ಲಿನಿಂದ ಬಿಗುವಾಗಿ ಅದುಮಿಕೊಳ್ಳಿ, ಮತ್ತು ಜಾಗ್ರತೆ! ದೀನಿನಲ್ಲಿ ನಿರ್ಮಿಸಿದಂತಹಾ ಹೊಸ ಆಚಾರಗಳಿಂದ ದೂರವಿರಿ; ಎಲ್ಲಾ ನೂತನಾಚಾರಗಳು ಪಥಭ್ರಷ್ಟತೆ ಯಾಗಿದೆ.[20]

ಇದರಿಂದ ವ್ಯಕ್ತವಾಗುವ ಅಂಶ ಬಿದ್ ಅತ್ ಗಳಿಗೆ ಹಸನ ಸಯ್ಯಿಅ ಎನ್ನುವ ಹಾಗೆ ವಿಭಾಗಗಳಿದೆ ಎನ್ನುವುದು ಸರಿಯಲ್ಲ ಹೊರತು ಪ್ರವಾದಿ ಸ.ರವರು (وَكُلَّ) ಎನ್ನುವ ಪದದಿಂದ ಎಲ್ಲಾ ನೂತನಾಚಾರಗಳಿಗೆ ಪಥಭ್ರಷ್ಟತೆಯೆಂದು ಬೊಟ್ಟುಮಾಡಿ ಅವುಗಳೆಲ್ಲವೂ ನರಕಕ್ಕೆಂದು ಕರಾರು ಮಾಡಿದ್ದಾರೆ.

ಎರಡನೇಯದಾಗಿ:

ಇನ್ನು ಉಮರುಲ್ ಫಾರೂಕ್ ರ.ರವರ ಬಿದ್ ಅತುಲ್ ಹಸನಃ ಎನ್ನುವುದನ್ನು ಪುರಾವೆಯಾಗಿಸುವುದು ಸರಿಯಲ್ಲ ಅದಕ್ಕಿರುವ ಎರಡನೇ ಪುರಾವೆ ಉಮರುಲ್ ಫಾರೂಕ್.ರ. ರವರ (بِدْعَة) ಎನ್ನುವುದನ್ನು ಉಪಯೋಗಿಸಿರುವುದು ಸ್ವಹೀಹಾದ ಅರ್ಥದಲ್ಲಲ್ಲ ಹೊರತು (مُشاكَلة) (ಒಂದುಪದವನ್ನು ಇನ್ನೊಂದು ಅರ್ಥದಲ್ಲಿ ಹೇಳುವುದಕ್ಕೆ ಹೇಳುವುದಾಗಿದೆ ಮುಷಾಕಿಲಃ) ವಾಗಿದೆ ಇದು ಅರಬರ ದ್ಯನಂದಿನ ಆಡುವ ಮಾತಿನಲ್ಲಿ ನಡೆದು ಬಂದ ಬಂದ ವಾಕ್ಯ ಪ್ರಯೋಗವಾಗಿದೆ. ಖುರ್ ಆನ್ ನಲ್ಲಿ ಇಂತಹಾ ಪ್ರಯೋಗಗಳು ಬಹಳಷ್ಟು ದೊರಕುತ್ತವೆ ಸೂರತುಲ್ ಬಕರ ದ ನೂರ

[20] ಸಂಗ್ರಹ: ರಿಯಾಳುಸ್ಸಲಿಹೀನ್ ಪು.87, ಮುರಾಜಅ ಅಲ್ ಅರ್ನ್ನಾವೂತ್.

ಮುವ್ವತ್ತೇಳನೇ ಆಯಾತಿನಲ್ಲಿ ಹೇಳಲಾಗಿದೆ: ﴿ صِبْغَةَ اللَّهِ وَمَنْ أَحْسَنُ مِنَ اللَّهِ صِبْغَةً ﴾ 'ಅಲ್ಲಾಹನ ಬಣ್ಣ (ದೀನುಲ್ ಇಸ್ಲಾಂ) ಮತ್ತು ಯಾರದ್ದಾಗಿವೆ ಅಲ್ಲಾಹನಿಗಿಂತ ಉತ್ತಮ ಬಣ್ಣ?' ಇಲ್ಲಿ ﴿ صِبْغَةَ ﴾ ಇಲ್ಲಿ ಬಣ್ಣವಾಗಿದೆ ಭಾಷಾರ್ಥದಲ್ಲಿ ಯತಾರ್ಥ ಅರ್ಥ ವಾಗಿದ್ದರೂ ಇಸ್ಲಾಂ ದೀನ ಆಗಿದೆ ಉದ್ದೇಶ.

ಇದೇ ರೀತಿಯಾಗಿದೆ ಉಮರುಲ್ ಫಾರೂಕ್ ರ.ವರವ ಬಿದ್ ಎನ್ನುವ ಮಾತಿನಲ್ಲಿರುವ ಉದ್ದೇಶ: 'ಕಳೆದ ದಿವಸಗಳಲ್ಲಿ ಇಲ್ಲದ್ದನ್ನು ಪುನರಾರಂಭಿಸುವುದು' ಅಂದರೆ ಸ್ವಲಾತುತ್ತರಾವೀಹ್ ಮುಂಚೆ ಇಲ್ಲವಾದದ್ದೊಂನ್ನು ಹೊಸದಾಗಿ ರಚಿಸಿರುವುದೆಂದರ್ಥವಲ್ಲ. ಉಮರುಲ್ ಫಾರೂಖ್ ರ.ರವರಿಗಿಂತ ಮುಂಚೆ ಇತ್ತು ಪ್ರವಾದಿ ಸ.ರವರು ಅದನ್ನು ನಿರ್ವಹಿಸಿದ್ದರು ಕೆಲವುದಿನಗಳು ನಿರ್ವಹಿಸಿ ನಿಲ್ಲಿಸಿದ್ದರು ಅದರಿಂದ ಅದು ಇಲ್ಲವೆಂದಲ್ಲ ಕಾರಣ ಅದನ್ನು ಪ್ರವಾದ ಸ.ಕಾಲದ ನಂತರ ಜನರು ಒಂದೊಂದು ಇಮಾಮರ ಹಿಂದೆ ನಮಾಜು (ತರಾವೀಹ್) ನಿರ್ವಹಿಸುತಿದ್ದರು ಉಮರುಲ ಫಾರೂಕ್ ರ. ರವರ ಆಡಳಿತ ಕಾಲದ ಅರ್ಧದವರೆಗೆ ಇದರ ಬಗ್ಗೆ ಹದೀಸಿನಲ್ಲಿ:

(وَيُصَلِّي الرَّجُلُ فَيُصَلِّي بِصَلاتِهِ الرَّهْطُ) ಮತ್ತು ಒಬ್ಬ ನಮಾಜು(ತರಾವೀಹ್) ನಿರ್ವಹಿಸದನು ಅಂತೆಯೇ ಕೆಲವರು ಗುಂಪಾಗಿ ನಮಾಜು(ತರಾವೀಹ್) ನಿರ್ವಹಿಸುತ್ತಿದ್ದರು.ಎನ್ನುವ ಮಾತಿನಿಂದ ತಿಳಿಯುತ್ತದೆ ಒಬ್ಬ ಒಬ್ಬೊಂಟಿಗನಾಗಿ ನಮಾಜು ಮಾಡಿದರೆ ಕೆಲವು ಗುಂಪಾಗಿ ನಮಾಜು ಮಾಡುತಿದ್ದರೆಂದು ಹೊರತು ಎಲ್ಲಾರೂ ಒಂದೇ ಇಮಾಮಿನ ಹಿಂದೆ ನಮಾಜ್(ತರಾವೀಹ್) ನಿರ್ವಹಿಸುತಿರಲ್ಲಿಲ್ಲ ಆಯಿಷಾ ರ.ವರವ ಉಲ್ಲೇಖದಿಂದ ಮನದಟ್ಟಾಗುತ್ತದೆ: ಆದ್ದರಿಂದ ಸ್ವಲಾತುತ್ತರಾವೀಹ್ ನ ಜಮಾತ್ ಬಿದ್ ಅತೆನ್ನುವ ಅರ್ಥದಲ್ಲಿ ಅದನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ ಅವು ಬಿದ್ ಅತ್ ಆಗಬೇಕಾದರೆ ಈ ನಮಾಜ್ (ತರಾವೀಹ್)ಗೂ ಪ್ರವಾದಿ ಸ.ರವರಿಗೂ ಯಾವುದೇ ರೀತಿಯ ಸಂಭಂದವಿಲ್ಲವೆಂದಾದರೆ ಮಾತ್ರ. ಆದರೆ ಇವು ಹಾಗಲ್ಲ ಬಹಳಷ್ಟು ಗ್ರಂಥಗಳಲ್ಲಿ ವರದಿಯಾಗಿರುವುದಲ್ಲದೇ ಸ್ವಹೀಹ್ ಬುಖಾರಿಯಲ್ಲಿ ಸುನ್ನತೆಂದು ಸಾಬೀತಾಗಿದೆ. ಉಮರುಲ್ ಫಾರೂಕ್ ರ.ವರರ ಬಿದ್ ಅತ್ ಎನ್ನು ಪದ

(مُشْكِلة) (ಒಂದುಪದವನ್ನು ಇನ್ನೊಂದು ಅರ್ಥದಲ್ಲಿ ಹೇಳುವುದಕ್ಕೆ ಹೇಳುವುದಾಗಿದೆ ಮುಷಾಕಿಲಃ) ವಾಗಿದೆ[21]

ರತಾವೀಹ್ ನಮಾಜಿನ ರಕಆತ್:

ಸ್ವಲಾತುತ್ರರಾವೀಹ್ ನ ರಕಆತ್ ಎಷ್ಟಾಗಿದೆ? ನಿಮ್ಮ ಮುಂದಿರು ಲೆಕ್ಕ ಕೆಲವರು ಎಂಟು ರಕಾತ್ ಮತು ಮೂರು ವಿತ್ರ್‌ನೊಂದಿ ಹನ್ನೊಂದು ತರಾವೀಹ್ ನಿರ್ವಹಿಸುತ್ತಾರೆ, ಕಲವರು ಹತ್ತು ತರಾವೀಹ್ ಮತ್ತು ಮೂರು ವಿತ್ರ್ ನೊಂದಿಗೆ ಒಟ್ಟಗೆ ಹದಿಮೂರು ರಕ ಆತ್ ನಿರ್ವಹಿಸುತ್ತಾರೆ ಇನ್ನು ಕಲವರು ಇಪ್ಪತ್ತು ಮತ್ತು ಮೂರು ವಿತ್ರ್ ನೊಂದಿಗೆ ಇಪ್ಪತ್ತಮೂರು ನಿರ್ವಹಿಸುತ್ತಾರೆ .

ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ ಫತಹುಲ್ ಬಾರಿಯಲ್ಲಿ , ಮತ್ತು ಅಲ್ಲಾಮ ಐನೀ ಹನಫೀ ಉಮ್ದತುಲ್ ಕಾರಿಯಲ್ಲಿ ಇಮಾಮ್ ಶೌಖಾನೀ ಅನ್ನೈಲುಲ್ ಅವುತಾರ್ ನಲ್ಲಿ ,ಅಲ್ಲಾಮ ಮುಬಾರಕ್ ಪುರಿ ತುಹ್ಫತುಲ್ ಅಹ್ವಝ್ ನಲ್ಲಿ ಇತರ ಕರ್ಮಶಾಸ್ತ್ರ ಪಂಡಿತರು ಮತ್ತು ಅಹ್ಲುಲ್ ಇಲ್ಮಿನ ವಕ್ತಾರರು ತಮ್ಮ ತಮ್ಮ ಗ್ರಂಥದಲ್ಲಿ ಖಿಲಾಫತ್ ಉಮರುಲ್ ಫಾರೂಕ್ ರ ಕಾಲದನಂತರದ ಬೇರೆ ಬೇರೆ ಜನರ ವೆತ್ಯಸ್ತ ರಕ ಆತ್ ಗಳನ್ನು ವರದಿಮಾಡಿರುವರು. ಇದರಲ್ಲಿ ವಿತ್ರ್ ನೊಂದಿಗೂ ವಿತ್ರ್ ಅಲ್ಲದೇಯೂ ಹನ್ನೊಂದು, ಮತ್ತು ಹದಿಮೂರು ರಕಆತ್‌ನ ಉಲ್ಲೇಖವಿದೆ ಇನ್ನು ಸ್ವಲಾತುತ್ತರಾವೀಹ್ ಮಾತ್ರ ಹದಿನಾರು, ಇಪ್ಪತ್ತು, ಇಪ್ಪತ್ತಾ ನಾಲ್ಕು, ಇಪ್ಪತೆಂಟು, ಮುವ್ವತ್ತಾ ನಾಲ್ಕು, ಮುವ್ವತ್ತಾರು, ಮುವ್ವತ್ತೆಂಟು, ಮುವ್ವತ್ತೊಂಬತ್ತು, ನಲವತ್ತು, ನಲವತ್ತೊಂದು, ನಲವತ್ತಾರು, ನಲವತ್ತೇಳು, ನಲವತ್ತೊಂಬತ್ತೂ ವರದಿಯಾಗಿದೆ.[22]

ಸಾಧರಣವಾ ಒಬ್ಬ ಈ ಲೆಕ್ಕಗಳನ್ನು ನೋಡಿ ಕೊನೆಯಲ್ಲಿ ಎಷ್ಟು ರಕ ಆತ್ ನಿರ್ವಹಿಸಬೇಕೆಂದು ಸ್ಥಂಭಿಸುವನು ಹಾಗದರೆ ನಿಜವಾಗಿ ಎಷ್ಟು ನಿರ್ವಹಿಸ ಬೇಕು ಈ ಅಭಿಪ್ರಾಯ ವೆತ್ಯಾಸದ ನಿಜಸ್ಥಿತಿಯೇನು?.

---

[21] ಶೈಕ್ ಮಹಮ್ಮದ್ ಮುನೀರ್ ಕಮರ್ ಹಫಿದಹುಲ್ಲಾಃ ರ 'ಕುಬೂಲಿಯತ್ ಅಮಲಿಯತ್ ಕಿ ಷರಾಯಿತ್ ಉರ್ದು ವಿನ ಅದ್ಯಾಯ: ಬಿದ್‌ಅತ್ ಕ ಇಜಮಾಲಿ ತಆರಿಫ್ ಪು.127–133 ಮತ್ತು ಪು.197–211

[22] ಫತಹುಲ್ ಬಾರಿ 4/253–254, ಉಮ್ದತುಲ್ ಖಾರಿ –4/7/178,204–205 – 6/11/126–127, ನ್ಯಲುಲ್ ಅವುತಾರ್–2/3/53, ತುಹ್ಫತುಲ್ ಅಹ್ವಝ್ –3/522–532, ಮಜಾಲಿಸು ಶಹರ್ ರಮಳಾನ್ ಶೈಖ್ ಉಸ್ಯಮೀನ್ ಪು.18–19

ಗಲ್ಫ್ ರಾಷ್ಟ್ರಗಳಲ್ಲಿ ಹದಿಮೂರು ರಕಅತ್ ನಿರ್ವಹಿಸುವ ಪದ್ದತಿ ಇದೆ ಇದರಲ್ಲಿ ಇಷಾ ನಮಾಜಿನ ಕೊನೆಯ ಲಘುವಾದ ಎರಡು ರಕಅತ್ ಸೇರಿ ಹದಿಮೂರು ಅಥವಾ ಸುಬಹಿ ನಮಾಜಿನ ಮೊದಲ ಎರಡು ರಕಅತ್ ಸೇರಿಸಿಯೋ ಅಥವಾ ತರಾವೀಹ್ ನ ಆರಂಭಿಕ ಎರಡು ರಕಅತ್ ಸೇರುತ್ತದೆ. ಇದರ ವಿವರಣೆ ಉಮ್ದತುಲ್ ಖಾರಿಯಲ್ಲಿ , ತುಹ್ಫತುಲ್ ಅಹ್ವಝ್, ಶರಹುಲ್ ಮುಸ್ಲಿಂ –3/6/21016, ಸ್ವಲಾತುತ್ತರಾವೀಹ್ ಅಶ್ಶೈಖ್ ಅಲ್ಬಾನಿ ಪು.–30–32 ಉರ್ದು, ಫತುಹುಲ್ ಮುಲ್ಹಿಮ್ ಮೌಲಾನ ಶಬ್ಬೀರ್ ಉಸ್ಮಾನೀ–6/288 ರಲ್ಲಿ ಸವಿಸ್ತಾರವಾಗಿ ನೋಡಬಹುದು.

ಭಾರತ ಪಾಕಿಸ್ತಾನ ಗಳಲ್ಲಿ ಬರೇ ಎರಡೆ ರೀತಿಯಲ್ಲಿರುವ ಹನ್ನೊಂದು ರಕಅತ್ ಮೂರು ವಿತ್ರ್ ನೊಂದಿಗೆ ಮತ್ತು ಇಪ್ಪತ್ತಮೂರು ರಕಅತ್ ಮೂರು ವಿತ್ರ್ ನೊಂದಿಗೆ ಸ್ವಲಾತುತ್ತರಾವೀಹ್ ನೋಡಲು ಸಾಧ್ಯವಾಗುವುದು ಹಾಗೂ ಈ ಎರಡು ರೀತಿಯ ನಮಾಜು ನಿರ್ವಹಿಸುವ ಉಲಮಾಅರು ಇಂದಿನವರೆಗೂ ವೆತ್ಯಸ್ತ ರೀತಿಯಲ್ಲಿ ತಮ್ಮ ತಮ್ಮ ಪುರಾವೆ ಗಳನ್ನು ಮಂಡಿಸುವಲ್ಲಿ ಬಹಳಷ್ಟು ಗ್ರಂಥ, ಕರೆಯೋಲೆ, ಲೇಖನಗಳನ್ನು ಬರೆದಿರುವರು ಮತ್ತು ಎರಡೂ ವಿಭಾಗಗಳು ತಮ್ಮ ತಮ್ಮ ಮಾತನ್ನು ಸ್ವೀಕರಿಸಿಸುವಲ್ಲಿ ಪೈಪೋಟಿಗಳನ್ನೂ ಮಾಡಿರುವರು. ಆದರೆ ಜನರೆಡೆಯಲ್ಲಿ ಇಂದಿಗೂ ಸ್ವಹೀಹ್ ರಕಅತ್ ಎಷ್ಟು ಮತ್ತು ಸುನ್ನತ್ ಯಾವುದು ಎನ್ನುವ ಪ್ರಶ್ನೆ ನಿಗೂಢವಾಗಿದೆಯಲ್ಲದೇ ಕರ್ಮಶಾಸ್ತ್ರ ಪಂಡಿತರ ಮಧ್ಯೆ ಇರುವ ಅಭಿಪ್ರಾಯ ವೆತ್ಯಾಸದ ಪರಿಸಮಾಪ್ತಿ ಏನು ಎನ್ನುವುದಾಗಿದೆ ಪ್ರಶ್ನೆ.?

ನಾವಿಲ್ಲಿ ಹನ್ನೊಂದರಿಂದ ಹಿಡಿದು ನಲವತ್ತೊಂಬತ್ತರ ವರೆಗಿರು ಉಲ್ಲೇಖ ಮತ್ತು ವರದಿಗಳನ್ನು ಇಟ್ಟು ಮಾತನ್ನು ಎಳೆಯಲು ಉದ್ದೇಶಿಸುವುದಿಲ್ಲ ಅಹ್ಲುಲ್ ಇಲ್ಮ್ ನ ಪಂಡಿತರು ಇದರ ಬಗ್ಗೆ ಬಹಳಷ್ಟು ಬರೆದಿರುವರು ಆದರೆ ನಮ್ಮ ಮುಂದಿರುವ ಒಂದೇ ಒಂದು ವಿಶಯವಾಗಿದೆ ಅದನ್ನು ನಾವು ಚರ್ಚೆಗೆ ತರುತ್ತಿರುವೆವು ಆ ವಿಶಯವೇನೆಂದರೆ ಪ್ರವಾದಿ ಸ.ರವರ ಹದೀಸ್ ಮತ್ತು ಆಸಾರು ಸ್ವಹಾಬಃ ರ ಬೆಳಕಿನಡಿಯಲ್ಲಿ ಸ್ವಲಾತುತ್ತರಾವೀಹ್ ನ ಸುನ್ನತ್ತಿನ ಲೆಕ್ಕ ಅಥವಾ ಮಸ್ನೂನ್ ರಕಅತ್ ಎಷ್ಟು ಎನ್ನುವ ವಿಶಯವಾಗಿದೆ.?

ಮೊದಲ ಹದೀಸ್:

ಈ ವಿಶಯದಲ್ಲಿ ಬಂದಿರುವ ಹದೀಸ್ ನೋಡಲುಸಿಗುವುದರಲ್ಲಿ ಮೊದಲ ಹದೀಸ್ ಸ್ವಹೀಹ್ ಬುಖಾರಿಯಲ್ಲಿಯ ಸ್ವಹೀಹ್ ಮುಸ್ಲಿಂ ಮತ್ತು ಅಬೂ ದಾವುದ್, ತುರಮಝೀ, ನಸಾಯೀ, ಮುಸ್ನದ್ ಅಹ್ಮದ್, ಅಬೀ ಅವಾನಃ, ಮುಅತ್ತಾ ಇಮಾಮ್ ಮಾಲಿಕ್, ಹಾಗೂ ಸುನನ್ ಬೈಹಖೀ ಯಲ್ಲಿ ಅಬೂ ಸಲಮ ಬಿನ್ ಅಬ್ದುಲ್ ರಹ್ಮಾನ್ ರ. ರವರು ವಿವರಿಸುತ್ತಾರೆ

(أَنَّهُ سَأَلَ عَائِشَةَ رَضِيَ اللَّهُ عَنْهَا : كَيْفَ كَانَتْ صَلاَةُ رَسُولِ اللَّهِ صَلَّى اللهُ عَلَيْهِ وَسَلَّمَ فِي رَمَضَانَ ؟ قَالَتْ : " مَا كَانَ يَزِيدُ فِي رَمَضَانَ وَلاَ فِي غَيْرِهِ عَلَى إِحْدَى عَشْرَةَ رَكْعَةً ، ...الخ)

ಅವರು ಉಮ್ಮುಲ್ ಮೂಮಿನೀನ್ ಆಯಿಶಾ ರ.ರವರಲಿ ಕೇಳಿದರು ರಮಾಳಾನಿನ (ರಾತ್ರಿಗಳಲ್ಲಿ) ಪ್ರವಾದಿ ಸ.ರವರ ನಮಾಜು ಹೇಗಿತ್ತು? ಅವರು ಉತ್ತರಿಸುತ್ತಾ ಹೇಳಿದರು 'ಪ್ರವಾಸಿ ಸ. ರಮಳಾನಿನಲ್ಲೋ ಇತರ ದಿವಸಗಲಲ್ಲೋ ಹನ್ನೊಂದು ರಕಅತ್ ಗಿಂತ ಹೇಚ್ಚು ನಿರ್ವಹಿಸುತ್ತಿರಲಿಲ್ಲ....[23]

ಇದರಲ್ಲಿ ಹನ್ನೊಂದು ರಕಅತ್ ಮೂರು ವಿತ್ರ್ ನೊಂದಿಗೆ ಇದರಲ್ಲಿ ತರಾವೀಹ್ ಎಂಟು ರಕಅತ್ ಆಗಿರುತ್ತದೆ ಇದೇ ಹದೀಸಿನ ವಾಕ್ಯಗಳಿಂದ

(...يُصَلِّي أَرْبَعَ رَكَعَاتٍ ، فَلاَ تَسْأَلْ عَنْ حُسْنِهِنَّ وَطُولِهِنَّ ، ثُمَّ يُصَلِّي أَرْبَعًا ، فَلاَ تَسْأَلْ عَنْ حُسْنِهِنَّ وَطُولِهِنَّ ، ثُمَّ يُصَلِّي ثَلاَثًا ، ... الخ)

ಪ್ರವಾದಿ ಸ. ನಾಲ್ಕು ರಕಅತ್ ನಿರ್ವಹಿಸುತ್ತಾರೆ ಅದರ ದೀರ್ಗತೆ ಮತ್ತು ಸೌಂಧರ್ಯ ಕೇಳಬೇಡಿ!. ನಂತರ ನಾಲ್ಕು ರಕಅತ್ ನಿರ್ವಹಿಸುತ್ತಾರೆ ಅದರ ದೀರ್ಗತೆ ಮತ್ತು

---

[23] **ಫತಹುಲ್ ಬಾರಿ –3/33 ಕಿತಾಬು ತಹಜ್ಜುದ್,ಬಾಬು ಕಿಯಾಮುನ್ನಬೀ ಸ. ಬಿಲ್ಲೈಲ್ ಫೀ ರಮಳಾನಿ ವ ಗೈರುಹು–4/251, ಮುಸ್ಲಿಂ ಶರಹುನವವಿ –3/6/17, ಕಿತಾಬು ಸ್ವಲಾತು ತರಾವೀಹ್ ಅಲ್ಬಾನಿ ಪು.30 ಉರ್ದು.**

ಸೌಂಧರ್ಯನೋಡಿದರೆ ಏನು ಹೇಳುವಿರಿ! ನಂತರ ಮೂರ ರಕಅತ್ (ವಿತ್ರ್) ನಿರ್ವಹಿಸುತಿದ್ದರು[24]

ಸ್ವಹೀಹ್ಯನ್ ಇತರರ ಈ ಹದೀಸಿನಿಂದ ಪ್ರವಾದಿ ಸ. ರವರ ಖಿಯಾಮುಲ್ಲೈಲ್, ಖಿಯಾಮು ರಮಳಾನ್, ಸ್ವಲಾತು ಲ್ಲೈಲ್, ತಹಜ್ಜುದ್, ಅಥವಾ ತರಾವೀಹ್ ನ ಲೆಕ್ಕ ಎಂಟು ರಕಅತ್ ಮೂರೂ ವಿತ್ರ್ ಮೊತ್ತ ಹನ್ನೊಂದು ರಕಅತ್ ಆಗಿತ್ತು. ಈ ಹದೀಸಿನಿಂದ ನಾಲ್ಕು ರಕಅತ್ ಒಂದು ಸಲಾಮಿನಿಂದ ನಿರ್ವಹಿಸಬಹುದೆನ್ನುವ ವಿಶಯವೂ ತಿಳಿಯುತ್ತದೆ. ಇದು ಜಾಯಿಝ್ ಆಗಿದೆ ಆದರೆ ಮುಸ್ತಹಿಬ್ ನಾಲ್ಕು ರಕಆತ್ ಎರಡು ಸಲಾಮಿನಿಂದ ಅಂದರೆ ಎರಡೆರಡಾಗಿ ನಿರ್ವಹಿಸವುದಾಗಿದೆ ಎಕೆಂದರೆ ಪ್ರವಾದಿ ಸ. ಸಾದಾರಣವಾಗಿ ತಿಳಿಯುವ ನಮಾಜು ಹೀಗೆ ಆಗಿದೆ ಸ್ವಹೀಹ್ ಮುಸ್ಲಿಂ ನಲ್ಲಿ ಉಲ್ಲೇಖವಿದೆ ಪ್ರವಾದಿ ಸ.ರವರು ಹೇಳುತ್ತಾರೆ: (صَلاَةُ اللَّيْلِ مَثْنَى مثنى،...) ರಾತ್ರಿಯ ಐಚ್ಛಕ ನಮಾಜು ಎರಡೆರಡಾಗಿರುವುವು.[25]

1. ಈ ಹದೀಸಿನ ಸಾರಾಂಶ ಇದುವೇ ಆಗಿರುತ್ತದೆ, ಮತ್ತು ಇಮಾಮ್ ನವವಿ ಇದೇ ಅಭಿಪ್ರಾಯ ತಾಳಿದ್ದಾರೆ ಇಮಾಮ್ ಶಾಫಿಯೀ ಯರೊಂದಿಗೆ ಇಮಾಮ್ ಇಬ್ನ್ ಬಾಝ್ ರಹಿಮಹುಲ್ಲಾಹ್ ರ ಬಳಿ ರತಾವೀಹ್ ಒಂದು ಸಲಾಮಿನಿಂದ ನಾಲ್ಕು ರಕಆತ್ ನಿರ್ವಹಿಸುವುದು ಜಾಯಿಝ್ ಅಲ್ಲ.[26]

ಇಮಾಮ್ ಇಬ್ನ್ ಬಾಝ್ ರಹಿಮಹುಲ್ಲಾಹ್ ತನ್ನದೊಂದು ಫತಾವ ದಲ್ಲಿ ನಾಲ್ಕು ರಕಆತ್ ನ ಹದೀಸಿನ ಉದ್ದೇಶ ಈ ರೀತಿಯಾಗಿದೆ ಎಂದು ಪ್ರವಾದಿ ಸ. ರವರು ಪ್ರತೀ ಎರಡು ರಕಆತ್‌ನಲ್ಲೇ ಸಲಾ ಹೇಳುತಿದ್ದರು ಹೊರತು ನಾಲ್ಕು ರಕಆತ್‌ನಲ್ಲಲ್ಲ ಎಂದು ಮುಂದುವರಿಸುತ್ತಾ (صَلاَةُ اللَّيْلِ مَثْنَى مثنى،...) ರಾತ್ರಿಯ ಐಚ್ಛಕ ನಮಾಜು ಎರಡೆರಡಾಗಿರುವುವು.[27] ಮತ್ತು ಸ್ವಹೀಹ್ ಬುಖಾರಿ ಹಾಗೂ ಮುಸ್ಲಿಂ ನಲ್ಲಿ ಆಯಿಶಾ ರ.ರವರ ಉಲ್ಲೇಖ.

---

[24] ಟಿಪ್ಪಣಿ 23 ನ್ನು ನೋಡಿ

[25] ಮುಸ್ಲಿಂ –/1/516–519, ತ್ವಬ್ರಾನಿ ಸ್ವಹೀಹ್ ಜಾಮಿನಿಂದ –/2/3/256

[26] ಫಿಕ್ಹ್ ಅಲಾ ಮಝಾಹಿಬುಲ್ ಅರ್ಬ್ಬಾ , ಶರಹುಲ್ ಮುಸ್ಲಿಂ –3/6/30

[27] ನೋಡಿರಿ ಟಿಪ್ಪಣಿ 25

كان رسول الله صلى الله عليه وسلم يصلي من الليل عشر ركعات يسلم من كل اثنتين ثم يوتر بواحدة[28]

'ಪ್ರವಾದಿ ಸ. ರವರು ರಾತ್ರಿ ನಮಾಜುಗಳನ್ನು ಎರಡೆರಡಾಗಿ ಹತ್ತು ರಕ ಆತ್ ನಿರ್ವಹಿಸುತಿದ್ದರು ಕೊನೆಯಲ್ಲಿ ಒಂದು ರಕ ಆತ್ ವಿತ್ರ್ ನಿರ್ವಹಿಸುತಿದ್ದರು'.

2. ಇದೇ ರೀತಿಯಲ್ಲಿ ಬಹಳಷ್ಟು ಹದೀಸುಗಳು ಇವೆ ಅಲ್ಲದೇ ಒಂದು ಇನ್ನೊಂದನ್ನು ವಿವರಿಸುತ್ತದೆ[29]

ಒಂದು ಸಂಶಯ ನಿವಾರಣೆ:

ಇಲ್ಲಿ ತರ್ಕಿಸುವವರು ಹೇಳುವಂತೆ ಇದು ಪ್ರವಾದಿ ಸ.ರವರ ಕಿಯಮುಲ್ಲೈಲ್ ಅಥವಾ ತಹಜ್ಜುದ್ ನಮಾಜಿನ ಬಗ್ಗೆಯಾಗಿದೆ ಹೊರತು ತರಾವೀಹ್ ನಮಾಜಿನ ವಿಶಯದಲ್ಲಲ್ಲಾ ಎಂದು

3. ಈ ತರ್ಕಕ್ಕಿರುವ ಉತ್ತರ ಅಥವಾ ಈ ಸಂಶಯ ನಿವಾರಣೆ ಈ ರೀತಿಯಾಗಿದೆ; ಪ್ರಶ್ನೆಕೇಳುವ ವ್ಯಕ್ತಿ ಕೇಳಿದ್ದೂ ಆಯಿಶಾ ರ.ರವರ ಉತ್ತರವೂ ಕಿಯಾಮು ರಮಳಾನಿನ ರಾತ್ರಿಯ ನಮಾಜಿ(ತರಾವೀಹ್)ನ ಬಗ್ಗೆಯಾಗಿತೆಂದು ಈ ಹದೀಸಿನಿ ವಾಕ್ಯಗಳಿಂದಲೇ ವ್ಯಕ್ತವಾಗುತ್ತದೆ, ಮತ್ತು ರಮಳಾನ್ ತಿಂಗಳಲ್ಲಿ ನಿರ್ವಹಿಸುವ ಸ್ವಲಾತುತರಾವೀಹ್ ಇತರ ರಾತ್ರಿಗಳಲ್ಲಿ ನಡಸುವ ಕಿಯಾಮುಲ್ಲೈಲ್ ಅಥವಾ ತಹಜ್ಜುದ್ ಒಂದೇ ಆಗಿರುತ್ತದೆ ಎನ್ನುವುದರಲ್ಲಿ ಅಹ್ಲುಲ್ ಇಲ್ಮಿನ ವಕ್ತಾರರಲ್ಲಿ ಅಭಿಪ್ರಾಯವೆತ್ಯಾಸಗಳಿಲ್ಲ ಕಾರಣ ರಮಳಾನ್ ತಿಂಗಳಲ್ಲಿ (ತರಾವೀಹ್)ನಮಾಜು ಹೊರತು ರಾತ್ರಿ ತಹಜ್ಜುದ್ ನಿರ್ವಹಿಸಿರುವಬಗ್ಗೆ ಪ್ರವಾದಿ.ಸ.ರವರಿಂದ ಸ್ಥಿರವಾಗಿ ಬಂದಿಲ್ಲ ಇದರ ವಿಶಯವನ್ನು ವ್ಯಕ್ತವಾಗಿ ಯಲ್ಲಿ ಅಲ್ಲಾಮ ಮುಮ್ತಾರ‍ುಝ್ ಹನಫೀ ಅಲ್ಲಾಮ ಅನ್ವರ್ ಷಾ ಕಷ್ಮೀರೀ

[28] ಮುಸ್ಲಿಂ ಕಿತಾಬು ಸ್ವಲಾತುಲ್ ಮುಸಾಫಿರೀನ ವ ಕಸ್ರಿಹಾ, ಅದದು ರಕ ಆತು ನಬೀಯ್ಯೀ –1216, ಅಬೀ ದಾವೂದ್–1137, ಇಮಾಮ್ ಅಹ್ಮದ್–24155.

[29] ಫತಾವ ಸಿಯಾಂ ಇಬ್ನ್ ಬಾಝ್ ಪು.87 ಸಂಯೋಜನೆ ಮೊಹಮ್ಮದ್ ಅಲ್ ಮುಸ್ನದ್.

ರಹಿಮಹುಮುಲ್ಲಾಹ್ ತಮ್ಮ ಗ್ರಂಥವಾದ ಫ್ಯಲುಲ್ ಬಾರಿ ಮತ್ತು ತಕ್ರೀರು ತುರಮಝೀ ಯಲ್ಲಿ ತಿಳಿಸಿರುವರು[30]

ತರಾವೀಹ್, ಖಿಯಾಮುರಮಳಾನ್, ಖಿಯಾಮುಲ್ಲ್ಯಲ್, ಸ್ವಲಾತುಲ್ಲ್ಯಲ್, ಮತ್ತು ತಹಜ್ಜುದ್:

ಒಂದೇ ನಮಾಜಿನ ಐದು ಹೆಸರು ನಾಮಗಳಾಗಿವೆ, ವರುಷದ ಹನ್ನೆರಡುತಿಂಗಳಲ್ಲಿ ನಿರ್ವಹಿಸುವ ಇತರ ಮೂರು ನಾಮಗಳಲ್ಲಿ ಬರುವ ನಮಾಜ್ ರಮಳಾನ್ ತಿಂಗಳಲ್ಲಿ ಕಿಯಾಮು ರಮಳಾನ್, ತರಾವೀಹ್ ಎನ್ನುವ ನಾಮದಲ್ಲಿ ನಿರ್ವಹಿಸಲ್ಪಡುತ್ತದೆ. ಪ್ರವಾದಿ ಸ. ರವರು ಕೊನೆಯ ಮೂರು ರಾತ್ರಿಗಳಲ್ಲಿ ನಿರ್ವಹಿಸಿದ ತರಾವೀಹ್ ನಮಾಜಿನ ನಂತರ ರಾತ್ರಿಯಲ್ಲಿ ತಹಜ್ಜುದ್ ನಿರ್ವಹಿಸಿರುವ ಯಾವುದೇ ಪುರಾವೆ ಹದೀಸುಗಳಲ್ಲಿ ದೊರಕುವುದಿಲ್ಲ ಹೊರತು ಸ್ವಹಾಬರ ಉಲ್ಲೇಖಗಳಿಂದ ಪ್ರವಾದಿ ಸ. ರವರ (ತರಾವೀಹ್)ನಮಾಜು ನಿರ್ವಹಿಸಿದ ನಂತರ ಇತರ ರಕಅತ್ ಗಳನ್ನು ನಿರ್ವಹಿಸಲು ಸಮಯವೇ ಇಲ್ಲವೆಂದಾಗಿತ್ತು ಇದೇ ಕಾರಣದಿಂದ ಇಮಾಮ್ ಬುಖಾರಿ ಖಿಯಾಮುಲ್ಲ್ಯಲ್,ಅಥವಾ ತಹಜ್ಜುದ್ ನ ಹನ್ನೊಂದು ರಕಅತ್ತಿನ ಹದೀಸನ್ನು ತರಾವೀಹ್ ನ ಆದ್ಯಾಯದಲ್ಲಿ ತಂದಿರುವುದಾಗಿದೆ

ಪುರಾವೆ:

1. ತರಾವೀಹ್ ನಮಾಜನ್ನು ಪ್ರವಾದಿ ಸ. ರವರು ತಹಜ್ಜುದಿನ ಸ್ಥಾನದಲ್ಲಿ ನಿರ್ವಹಿಸಿರುವುದೂ ಅಲ್ಲದೇ ಅದರ ಬಳಿಕ ಬೇರೆ ತಹಜ್ಜುದ್ ನಿರ್ವಹಿಸಿದ್ದಾಗಿ ಎತ್ತಿ ತೋರಿಸುವ ಹದೀಸಿನ ಪುರಾವೆ ಅಬೂ ಝರ್ರ್ ಗಿಫ್ಫಾರ್ ರ. ಹೇಳುತ್ತಾರೆ: 'ನಾವು ಪ್ರವಾದಿ ಸ.ರೊಂದಿಗೆ ವ್ರತ ಆಚರಿಸಿದೆವು ಇಪ್ಪತ್ತಾಮೂರು ದಿವಸದ ವರೆಗೆ ಪ್ರವಾದಿ ಸ.ರವರು ರಾತ್ರಿ ನಮಾಜು ಮಾಡಿಸಲಿಲ್ಲ ಮತ್ತಿರುವ ರಾತ್ರಿಗಳಲ್ಲಿ ನಮಾಜು ನಿರ್ವಹಿಸಲು ಆರಂಭಿಸಿದಾಗ ನೀಳವಾದ (ಖುರ್ ಆನ್) ಪಾರಾಯಣದೊಂದಿಗೆ ರಾತ್ರಿಯ ಮೊದಲ ಹಂತವೇ ಮುಗಿದು ಹೋಗಿತ್ತು, ಮತ್ತು ಎರಡನೇ ರಾತ್ರಿಯಲ್ಲಿ ನಿರ್ವಹಿಸಿದ (ತರಾವೀಹ್)ನಮಾಜಿನಲ್ಲಿ ರಾತ್ರಿಯ ಅರ್ಧಭಾಗ ಕಳೆದು ಹೋಗಿತ್ತು ......

[30] ಅಲ್ ಉರುಪ್ ಷಝೀ–ಪು.309. ಫ್ಯಝುಲ್ ಬಾರಿ –2/420, ಸ್ವಲಾತುತರಾವೀಹ್ ಅಲ್ಬಾನಿ ಉರ್ದು ಪು.32–34.

ಹಾಗೂ ಮೂರನೇ ರಾತ್ರಿ (ತರಾವೀಹ್) ನಮಾಜ್ ನಿರ್ವಹಿಸುವಾಗ ಎಷ್ಟು ನೀಳವಾಗಿ (ಖುರ್ ಆನ್) ಪಾರಾಯಣ ಮಾಡಿರುವವರೆಂದರೆ:

فَقَامَ حَتَّى تَخَوَّفْنَا أَنْ يَفُوتَنَا الْفَلاَحُ ، قَالَ : قُلْتُ : وَمَا الْفَلاَحُ ؟ قَالَ : السَّحُورُ[31]

'ಎಲ್ಲಿಯವರೆಗೆಂದರೆ ನಾವು ಭಯಬೀತರಾದೆವು ಎಲ್ಲಿ ಫಲಾಹ್ ನಮ್ಮಿಂದ ಕಳೆದು ಹೋಗುದೋ ಎಂದು; ನಾನು ಕೇಳಿದೆ ಫಲಾಹ್ ಎಂದರೇನು? ಅವರು ಹೇಳಿದರು ಸಹ್ರೀ ಊಟವಾಗಿದೆ'.

ಈ ವಾಕ್ಯ ಸ್ವಹೀಹ್ ಇಬ್ನ್ ಖುಝೈಮಾರದ್ದಾಗಿದೆ ಅವರು ಇದನ್ನು ಸ್ವಹೀಹ್ ಸನದ್ ಎಂದು ಹೇಳಿದ್ದಾರೆ, ಡಾಕ್ಟರ್ ಮುಸ್ತಫಾ ಅಅಳಮೀ ಇದನ್ನು ಸ್ವಹೀಹ್ ಎಂದಿದ್ದಾರೆ ಅಲ್ಲಾಮ ಅಲ್ಬಾನಿ ತನ್ನ ಸ್ವಹೀಹ್ ನಲ್ಲಿ ಇದನ್ನು ಸೇರಿಸಿದ್ದಾರೆ[32]

2. ಪ್ರವಾದಿ ಸ.ರವರು ಮೂರುದಿನಗಳಲ್ಲಿ ತರಾವೀಹ್ ನಮಾಜು ನಿರ್ವಹಿಸಿದರು ನಂತರ ಅದನ್ನು ನಿಲ್ಲಿಸಿಕೊಂಡರು ಇದರ ಕಾರಣ ಕೆಲವು ಹದೀಸ್ ಗಳಲ್ಲಿ ವಿವರಿಸಲಾಗಿದೆ:

((وَلَكِنِّي خَشِيتُ أَنْ تُفْرَضَ عَلَيْكُمْ صَلاَةُ اللَّيْلِ فَتَعْجِزُوا عَنْهَا[33]))

'ಆದರೆ ನಿಮ್ಮ ಮೇಲೆ ರಾತ್ರಿನಮಾಜನ್ನು (ಅಲ್ಲಾಹನು) ಕಡ್ಡಾಯ ಗೊಳಿಸುವನೋ ಅವುಗಳನ್ನು ನಿಮಗೆ ನಿರ್ವಹಿಸಲು ಅಸಾದ್ಯವೋ ಎಂದು ನಾನು ಭಯಗೊಂಡೆನು'. ಕೆಲವು ವರದಿ ಗಳಲ್ಲಿ ಹೀಗೂ ಇದೆ:

خَشِيتُ أَنْ تُفْرَضَ عَلَيْكُمْ قيام هذا الشهر[34]

---

[31] **ಅಬೂ ದಾವೂದ್–1362, ತುರಮುಝೀ–787, ಸ್ವಹೀಹ್ ಇಬ್ನ್ ಮಾಜ–2538, ಸ್ವಹೀಹ್ ಇಬ್ಬ್ ಖುಝೈಮಾ–3/338–2206**

[32] **ಟಿಪ್ಪಣಿ 31 ರಲ್ಲಿ**

[33] **ಫತುಹುಲ್ ಮುಲ್ಹಿಮ್ –2/322**

[34] **ಫತುಹುಲ್ ಮುಲ್ಹಿಮ್**

'ನಿಮ್ಮ ಮೇಲೆ ರಾತ್ರಿನಮಾಜನ್ನು (ಅಲ್ಲಾಹನು) ಈ ತಿಂಗಳಲ್ಲಿ ಕಡ್ಡಾಯ ಗೊಳಿಸುವನೋ ಎಂದು ನಾನು ಭಯಗೊಂಡೆನು'. ಈ ರಾತ್ರಿಗಳಲ್ಲಿ ಯಾವ ನಮಾಜಿನ್ನು ಜಮಾತಾಗಿ ನಿರ್ವಹಿಸಿರುವರೋ ಅವು ತರಾವೀಹ್ ಆಗಿತ್ತೆಂದು ಬಂದ ಹದೀಸುಗಳಿಂದ ಒಮ್ಮತಾಭಿಪ್ರಾಯವಿದೆ ಹಾಗೂ ಸ್ವಹೀಹಾದ ಈ ಹದೀಸುಗಳ ಕೆಲವು ವಾಕ್ಯಗಳು 'ಸ್ವಲಾತುಲ್ಲೈಲ್' 'ಖಿಯಾಮು ಹಾದ ಶಹರ್' ಎಂದೂ ನೋಡಲು ಸಾದ್ಯ. ಆದುದರಿಂದ ರಮಳಾನಿನ ತರಾವೀಹ್ ನಮಾಜ್ ಸ್ವಲಾತುಲ್ಲೈಲ್ ಮತ್ತು ತಹಜ್ಜುದ ಕೂಡ ಆಗಿರುತ್ತದೆ.

3. ಉಮರುಲ್ ಫಾರೂಖ್ ರ. ರವರೂ ಸಹ ತರಾವೀಹ್ ಮತ್ತು ತಹಜ್ಜುದ್ ಒಂದೇ ಎನ್ನವವರಲ್ಲಿ ಸೇರಿದವರಾಗಿದ್ದಾರೆ ಜನರ ರಾತ್ರಿಯ ಮೊದಲ ಹಂತದಲ್ಲಿ ತರಾವೀಹ್ ನಿರ್ವಹಿಸುತಿದ್ದರು ಉಮರ್ ರ. ರವರು ರಾತ್ರಿಯ ಕೊನೆಯ ಹಂತದಲ್ಲಿ ನಿರ್ವಹಿಸುತ್ತದ್ದರು ಆದರೆ ಒಂದೇ ಸಲ (ತಹಜ್ಜುದ ಬೇರೆ ನಿರ್ವಹಿಸಲಿಲ್ಲ) [35]

4. ಅಲ್ಲಾಮ ಕಷ್ಮೀರೀ ಹನಫೀ ರಹಿಮಹುಲ್ಲಾ ಇಮಾಮ್ ಮೊಹಮ್ಮದ್ ಬಿನ್ ನಸ್ರ ಮುರವ್ವಝೀ ಯವರಿಂದ ಉದ್ದರಿಸುತ್ತಾ ಬರೆಯುತ್ತಾರೆ ಕೆಲವು ಉಲಮಾವು ಸ್ಲಫ್ ರ ಮಾತು ಯಾವೊಬ್ಬನು ತರಾವೀಹ್ ನಿರ್ವಹಿಸಿದ ಬಳಿಕ ಅವನು ತಹಜ್ಜುದ್ ನಿರ್ವಹಿಸಬಾರದು ಇನ್ನು ಕೆಲವು ಉಲಮಾಅರು ಮುತಲಕ್ ನಫಿಲ್ ನಮಾಜ್ ಮಾಡಬಹುದೆಂದಿದ್ದಾರೆ ಮುಂದೆ ಬರೆಯುತ್ತಾ ಹೇಳುತ್ತಾರೆ ಉಲಮಾಅ ಸ್ಲಫ್ ರ ಈ ಅಭಿಪ್ರಾಯ ಅವರ ಬಳಿ ಎರಡು ನಮಾಜ್ ಒಂದೇ ಆಗಿದೆ ಎನ್ನುವುದಕ್ಕೆ ಪುರಾವೆ ಯಾಗಿರುತ್ತದೆ.[36]

ತಹಜ್ಜುದ್ ಮತ್ತು ತರಾವೀಹ್ ನ ವೆತ್ಯಾಸ ಸ್ಥಿರಪಡಿಸಲು ಮಾಡಿರುವ ಪ್ರಯತ್ನಗಳ ಸಂಕ್ಷಿಪ್ತ ನೋಟ:

ಈ ಮೇಲೆ ಉದ್ಧರಿಸಿದ ಹದೀಸುಗಳ ಪುರಾವೆ ಗಳನ್ನು ಕೂಲಂಕಷವಾಗಿ ಚಿಂತಿಸಿದಾಗ ತಹಜ್ಜುದ್ ಮತ್ತು ತರಾವೀಹ್ ಎರಡೂ ನಮಾಜಿನ ಒಂದೇ ನಾಮಗಳಾಗಿವೆ

---

[35] ಫ್ಯಲುಲ್ ಬಾರಿ–2/429

[36] ಫ್ಯಲುಲ್ ಬಾರಿ–2/420

ಎನ್ನುವುದಾಗಿದೆ. ಹೀಗಿರುವಾಗ ಕೆಲವರು ಬಹಳ ಕಸರತ್ತಿನಿಂದ ಎರಡು ನಮಾಜನ್ನು ವೆತ್ಯಸ್ತ ನಮಾಜುಗಳಾಗಿವೆ ಎನ್ನುವುದನ್ನು ದೃಢಪಡಿಸಲು ಕೆಲವು ವಾಕ್ಯಗಳನ್ನು ತಿರುಚಿ ಬಹಳ ಪ್ರಯತ್ನಗಳನ್ನು ಮಾಡಲಾಗಿದೆ. ಇದರ ಬಗ್ಗೆ ಉತ್ತರವಾಗಿ ಡಾಕ್ಟರ್: ಮುಕ್ತದೀ ಹಸನ್ ಅಝ್ಹರೀ(ಜಾಮಿಆ ಸಲಫಿಅ ಬನಾರಸ್) ಬರೆಯುತ್ತಾರೆ.

1. ತರಾವಿಹ್ ನಮಾಜು ರಾತ್ರಿಯ ಮೊದಲ ಹಂತದಲ್ಲಿ ನಿರ್ವಹಿಸುವುದಾದರೆ ತಹಜ್ಜುದ್ ರಾತ್ರಿಯ ಕೊನೆಯ ಘಳಿಗೆಯಲ್ಲಿ ನಿರ್ವಹಿಸುವುದಾಗಿದೆ ಅವರು ಎತ್ತಿ ತೋರಿಸುವ ಒಂದನೇ ವೆತ್ಯಾಸ.

ಅದರೆ ಇದ ಸತ್ಯಕ್ಕೆ ದೂರವಾಗಿದೆ. ತಹಜ್ಜುದ್ ಮತ್ತು ತರಾವೀಹ್‌ನ ಸಮಯವು ಒಂದೇ ಆಗಿದೆ ಅಂದರೆ ಇಷಾ ನಮಾಜಿನ ನಂತರ ಸುಬಹಿ ನಮಾಜಿನ ವರೆಗೆ ಈ ವಿಷಯದಲ್ಲಿ ಆಯಿಶಾ ರ. ರವರ ಒಂದು ಉಲ್ಲೇಖವಿದೆ:

كَانَ النَّبِيُّ . صلى الله عليه وسلم . يُصَلِّي مَا بَيْنَ أَنْ يَفْرُغَ مِنْ صَلاَةِ الْعِشَاءِ إِلَى الْفَجْرِ إِحْدَى عَشْرَةَ رَكْعَةً

'ಪ್ರವಾದಿ ಸ. ರವರು ಇಶಾ ನಮಾಜಿನಿಂದ ವಿರಮಿಸಿದ ನಂತರ ಪಜರ್ ನಮಾಜಿನ ವರೆಗೆ ಹನ್ನೊಂದು ರಕಅತ್ ನಿರ್ವಹಿಸುತಿದ್ದರು'.[37] ಬೇರೊಂದು ವರದಿಯಂತೆ ಅವರು ಈರೀತಿ ತಿಳಿಸಿರುವರು: 'ಪ್ರವಾದಿ ಸ.ರವರು ಕೆಲವೊಮ್ಮೆ ರಾತ್ರಿಯ ಮೊದಲಹಂತದಲ್ಲಿ, ರಾತ್ರಿಯ ಮದ್ಯಹಂತದಲ್ಲಿ, ರಾತ್ರಿಯ ಕೊನೆಯ ಹಂತಗಳಲ್ಲಿಯೂ ಹೀಗೆ ರಾತ್ರಿಯ ಎಲ್ಲಾ ಹಂತಗಳಲ್ಲೂ ತಹಜ್ಜುದ್ ನಿರ್ವಹಿಸಿದ್ದರು'[38]

ಅನಸ್ ರ.ರವರ ಉಲ್ಲೇಖ: ನಾವು ಪ್ರವಾದಿ ಸ.ರವರನ್ನು ರಾತ್ರಿ ಯಾವ ಹಂತದಕಲ್ಲೂ ಮಲಗಿರುವುದನ್ನು ನೋಡಬೇಕಾದಲ್ಲಿ ಅವರು ಮಲಗಿರುವುದನ್ನು ನೋಡುತಿದ್ದೆವು ಹಾಗೆ ನಮಾಜು ನಿರ್ವಹಿಸುವವರಾಗಿ ನೋಡಬೇಕಾದಲ್ಲಿ ನಮಾಜು ನಿರ್ವಹಿಸುವುವರಾಗಿ ನೋಡುತಿದ್ದೆವು'.[39] ಅಂದರೆ ಪ್ರವಾದಿ ಸ. ತಹಜ್ಜುದ್ ನಮಾಜಿಗಾಗಿ ರಾತ್ರಿ ಇಂಥಹದ್ದೇ

---

[37] **ಸುನನ್ ಇಬ್ನ್ ಮಾಜ –5/1420, ಮುಸ್ಲಿಂ, ಸುನನು ನಸಾಯೀ –1749**

[38] **ಸ್ವಹೀಹುಲ್ ಮುಸ್ಲಿಂ–2551 ಹಾಗು ಇತರರು.**

[39] **ನಸಾಯೀ , ಅಲ್ಲಾಮ ಅಲ್ಬಾನಿ ಯವರು ಇದನ್ನು ಸ್ವಹೀಹ್ ಎಂದಿದ್ದಾರೆ ಮತ್ತು ಸ್ವಹೀಹ್ ಬುಖಾರಿಯಲ್ಲು ನೋಡಲು ಸಾದ್ಯ ವೆಂದಿದ್ದಾರೆ, ನೋಡಿರಿ ಹಾಷಿಯತು ಮಿಶ್ಕಾತ್–1/379,**

ಸಮಯವೆಂದು ನಿಗದಿಪಡಿಸಿಕೊಂಡಿಲ್ಲ ಹೊರತು ಒಂದು ದಿನ ತಹಜ್ಜುದ್ ಮಾಡಿದ ಸಮಯದಲ್ಲಿ ಕೆಲವೊಮ್ಮೆ ಆಸಮಯದಲ್ಲಿ ಮಲಗುತ್ತಲೂ ಇದ್ದರು ಹಾಗೆ ನಿರಂತರವಾಗಿ ಪ್ರವಾದಿ ಸ. ರವರನ್ನು ನೋಡಬೇಕಾದರೆ ಅವರು ನಮಾಜಿನಲ್ಲೂ ಇರುತಿದ್ದರು ಕೆಲಮೊಮ್ಮೆ ಮಲಗುತ್ತಲೂ ಇದ್ದರು.

ತರಾವೀಹ್ ನಮಾಜು ಇದೇ ರೀತಿಯಾಗಿದೆ ರಾತ್ರಿಯಾ ಯಾವ ಹಂತದಲ್ಲೂ ನಿರ್ವಹಿಸಬಹುದು ನಿಗದಿತ ಸಮಯವೆಂದಿಲ್ಲ. ಮೊದಲ ಹಂತದಲ್ಲೊ, ಮದ್ಯಭಾಗದಲ್ಲೋ ಕೊನೆಯಹಂತದಲ್ಲೋ ನಿರ್ವಹಿಸಬಹುದಾದದ್ದಾಗಿದೆ. ಉಮರ್ ರ. ರವರು ರಾತ್ರಿಯ ಕೊನೆಯಲ್ಲಿ ನಿರ್ವಹಿಸುತಿದ್ದರು, ಪ್ರವಾದಿ ಸ.ರವರು ಮೂರನೇ ರಾತ್ರಿ ಹಾಗೂ ಸ್ವಹಾಬ ರ. ರವರು ನಂತರ ಸಹರೀ ಸನ್ನಿಹತವಾಗುವ ತನಕ ತರಾವೀಹ್ ನಿರ್ವಹಿಸುತ್ತಿದ್ದರು.

2. ತರಾವೀಹ್ ಮತ್ತು ತಹಜ್ಜುದ್ ನಲ್ಲಿರುವ ಇನ್ನೊಂದು ವೆತ್ಯಾಸಗಳನ್ನು ತೋರಿಸುವುದೇನೆಂದರೆ ತರಾವೀಹ್ ಜಮಾತಾಗಿ ನಿರ್ವಹಿಸಲಾಗುತ್ತದೆ ಆದರೆ ತಹಜ್ಜುದ್ ಹಾಗೆ ನಿರ್ವಹಿಸಲಾಗುವುದಿಲ್ಲ.

ಆದರೆ ಇದು ಸ್ವಹೀಹ್ ಅಲ್ಲ; ಎರಡೂನಮಾಜನ್ನು ಜಮಾತಾಗಿಯು ಜಮಾಅತ್ ಅಲ್ಲದೆಯೂ ನಿರ್ವಹಿಸ ಬಹುದಾಗಿದೆ ತಹಜ್ಜುದ್ ನಮಾಜಿನಲ್ಲಿ ಪ್ರವಾದಿ ಸ.ರವರೊಂದಿ ಇತರು ಜೊತೆಯಾಗಿ ನಮಾಜ್ ಮಾಡಿರುವ ಘಟಣೆ ನೋಡಲು ಸಾದ್ಯವಾಗುತ್ತದೆ. ಅಬ್ದುಲ್ಲಾಹ್ ಇಬ್ನ್ ಮಸೂದ್, ಅಬ್ದುಲ್ಲಾ ಬಿನ್ ಅಬ್ಬಾಸ್ ರ, ಹುಝ್ಯಫಾ ರ.,ಮತ್ತು ಜಾಬಿರ್ ರ. ಪ್ರವಾದಿ ಸ.ರೊಂದಿಗೆ ಸೇರಿ ಜಮಾಅತ್ತಾಗಿ ತಹಜ್ಜುದ್ ನಿರ್ವಹಿಸಿದ ಘಟನೆ ಹದೀಸ್ ಗಳಲ್ಲಿ ಬಂದಿವೆ.[40]

ತರಾವೀಹ್ ನಮಾಜು ಸಹ ಪ್ರವಾದಿ ಸ.ರವರು ಬರೇ ಮೂರು ರಾತ್ರಿಗಳಲ್ಲಿ ನಿರ್ವಹಿಸಿರುವುದಾಗಿದೆ ಮತ್ತು ಉಮ್ಮತ್ತರ ಮೇಲೆ ಕಡ್ಡಾಯ ಗೊಳ್ಳುವ ಸಂದೇಹದಿಂದ ಅದನ್ನು ಅಲ್ಲಿಗೇ ನಿಲ್ಲಿಸಿದ್ದರು ಹಾಗೂ ಮನೆಯಲ್ಲಿ ನಿರ್ವಹಿಸಲು ಅದೇಶವಿತ್ತರು ಇದೇ ಮುಂದುವರಿಯುತ್ತಾ ಉಮರುಲ್ ಫಾರೂಕ್ ರ. ರವರ ಖಿಲಾಫತ್ತಿನ ಅರ್ಧಭಾಗದವರೆಗೂ ಮುಂದುವರಿಯಿತು.[41] ಅಂದರೆ ಪ್ರವಾದಿ ಸ.ರವರ ಅದೇಶದಂತೆ

40 ಸ್ವಹೀಹುಲ್ ಮುಸ್ಲಿಂ–160–164.
41 ಸ್ವಹೀಹುಲ್ ಬುಖಾರಿ /147–197

ಸ್ವಹಾಬ ರಳಿಯಲ್ಲಾಹು ಅನಹುಂ ತಮ್ಮ ತಮ್ಮ ಮನೆಗಳಲ್ಲಿ ಸ್ವಲಾತುತರಾವೀಹ್ ನಿರ್ವಹಿಸುತಿದ್ದರು ಮತ್ತು ಮಸ್ಜಿದುನಬವಿಗೆ ಬರುವ ಸ್ವಹಾಬರು ಒಬ್ಬೊಬ್ಬರಾಗಿಯೂ ಕೆಲವೊಬ್ಬರ ಹಿಂದೆ ಕೆಲವು ಜನರು ನಿಂತು ಸಹಾ ಸ್ವಲಾತುತರಾವೀಹ್ ನಿರ್ವಹಿಸುತಿದ್ದರು. ಒಂದೇ (ತರಾವೀಹ್) ನಮಾಜು ಒಂದೇ ಮಸೀದಿಯಲ್ಲಿ ಬೇರೆ ಬೇರೆ ಗುಂಪುಗಳಾಗಿ ನಿರ್ವಹಿಸುವುದನ್ನು ನೋಡಿದ ಉಮರ್ ರ. ಎಲ್ಲರನ್ನೂ ಒಂದೇ ಇಮಾಮರ ಹಿಂದೆ ನಿಲ್ಲಿಸುವುದು ಉತ್ತಮವೆಂದ ಅದೇಶವಿತ್ತರು ಯಾಕೆಂದರೆ ಅವಾಗ ಅದು ಕಡ್ಡಾಯವಾಗುವು ಸಂದೇಹವಿಲ್ಲವಾಗಿತ್ತು ಹಾಗೂ ಪ್ರವಾದಿ ಸ.ರವರು ಜಮಾಅತ್ತಾಗಿ ನಿರ್ವಹಿಸಬೇಕೆನ್ನುವ ಆಗ್ರಹವೂ ಪೂರ್ಣವಾಯಿತು. ಆದರೆ ಸ್ವತಃ ಉಮರ್ ರಳಿಯಲ್ಲಾಹು ಅನಹು ಈ ಜಮಾಅತ್ತುಗಳಲ್ಲಿ ಸೇರಿ (ತರಾವೀಹ್)ನಮಾಜು ನಿರ್ವಹಿಸುತ್ತಿರಲಿಲ್ಲ ಹೊರತು ರಾತ್ರಿಯ ಕೊನೆಯ ಹಂತದಲ್ಲಿ ತರಾವೀಹ್ ನಿರ್ವಹಿಸುವುದು ಉತ್ತಮವೆನ್ನುವವರಲ್ಲಾಗಿದ್ದರು.

ತರಾವೀಹ್ ಗಾಗಿ ಇಮಾಮ್ ಜಮಾಅತ್ ಅತ್ಯಗತ್ಯ ಅಥವಾ ಜರೂರಿಯಾಗ ಬೇಕೆಂದಿಲ್ಲ ಹೊರತು ಇಮಾಮ್ ಜಮಾಅತ್ತಿನೊಂದಿಗೂ ಒಬ್ಬೊಂಟಿಗನಾಗಿಯೂ ನಿರ್ವಹಿಸಬಹುದಾಗಿದೆ ಇದೇ ವಿಧಿ ತಹಜ್ಜುದ್ ನಮಾಜಿಗೂ ಅನ್ವಯಿಸುತ್ತದೆ.

ಇನ್ನು ಯಾವುದೇ ನಮಾಝ್ ಒಂದುಕಾಲದಲ್ಲಿ ಜಮಾಅತ್ತಾಗಿ ಮಾಡಿದ್ದರೆ ಇನ್ನೊಂದು ಕಾಲದಲ್ಲಿ ಜಮಾಅತ್ ಅಲ್ಲದೇ ಮಾಡಿದ್ದರೆ ಅದೆರೆಡು ಬೇರೆ ಬೇರೆ ನಮಾಝ್ ಗಳಾಗಲು ಸಾದ್ಯವಿಲ್ಲ ಅದೇ ರೀತಿ ವಿತ್ರ್ ನಮಾಝ್ ಹನ್ನೊಂದು ತಿಂಗಳು ಜಮಾಅತ್ ಅಲ್ಲದೇ ನಿರ್ವಹಿಸಿ ರಮಳಾನಿನಲ್ಲಿ ಜಮಾಅತ್ ಆಗಿ ನಿರ್ವಹಿಸಿದಲ್ಲಿ ಹನ್ನೊಂದು ತಿಂಗಳು ವಿತ್ರ್ ಆಗಿಯೂ ರಮಳಾನಿನಲ್ಲಿ ಆ ನಮಾಝ್ ವಿತ್ರ್ ಅಲ್ಲದೇ ಬೇರೆ ಯಾವುದೋ ನಮಾಝ್ ಆಗಲು ಸಾದ್ಯವೇ?

3. ತಹಜ್ಜುದ್ ಮತ್ತು ತರಾವೀಹ್ ನ ಮೂರನೇ ವೆತ್ಯಾಸವನ್ನು ಹೀಗೆ ಹೇಳುತ್ತಾರೆ: ತಹಜ್ಜುದ್ ನ ನಸ್ಸ್ ಖರ್ ಆನಿನಿಂದ ಸ್ಥಿರವಾಗಿದ್ದಾಗಿದೆ:

﴿ وَمِنَ اللَّيْلِ فَتَهَجَّدْ بِهِ نَافِلَةً لَكَ ﴾[42]

[42] ಬನೀ ಇಸ್ರಾಯೀಲ್ 79

‘ರಾತ್ರಿಯ ಕೆಲವು ಸಮಯಗಳಲ್ಲಿ ತಹಜ್ಜುದಿನ ನಮಾಝಿನಲ್ಲಿ (ಖುರ್ಆನ್ ಓದಿರಿ) ಮತ್ತು

﴿ قُمِ اللَّيْلَ إِلَّا قَلِيلا ﴾[43]

‘ರಾತ್ರಿಯಲ್ಲಿ ಸ್ವಲ್ಪ ಸಮಯಖಿಯಾಮ್(ನಮಾಝ್)ನಿರ್ವಹಿಸಿರಿ’

(وَسَنَنْتُ لَكُمْ قِيَامَهُ) [44]

‘ರಮಳಾನಿನ ಖಿಯಾಮ್(ನಮಾಝ್) ನಾನು ನಿಮಗೆ ಐಚ್ಚಿಕ ಗೊಳಿಸಿರುವೆನು’

ಆದರೆ ಈ ಪುರಾವೆಗಳು ಮಿಥ್ಯೆಗಳ ಮೇಲೆ ಹೊಂದಿಕೊಂಡಿದೆ. ಈ ಎರಡು ಆಯಾತ್ ಗಳಲ್ಲಿ ಖಿಯಾಮುಲ್ಲೈಲ್ ಮತ್ತು ತಹಜ್ಜುದ್ ಒಂದೆ ನಮಾಝಿನ ಎರಡು ನಾಮಗಳೆಂದು ಸ್ಪಷ್ಟವಾಗುತ್ತದೆ. ಮತ್ತು ಖಿಯಾಮುಲ್ಲೈಲ್ ನ ಐಚ್ಚಿಕತೆ ಖುರ್ ಆನಿನ ನಸ್ಸ್ ನಿಂದ ವ್ಯಕ್ತಾವಾಗುದೇನೆಂದರೆ ರಮಳಾನ್ ಮತ್ತು ಇತರ ದಿವಸಗಳಗೂ ತಹಜ್ಜುದ್ ಅನ್ವಯವಾಗುತ್ತದೆ. ಈ ವಿಷಯದ ಸ್ಪಷ್ಟತೆ ಈ ಹದೀಸಿನಿಂದ ಮನದಟ್ಟಾಗುತ್ತದೆ.

جعَلَ اللَّهُ صِيَامَهُ فَرِيضَةً ، وَقِيَامَ لَيْلِهِ تَطَوُّعًا ،[45]

‘ಅಲ್ಲಾಹನು ಈ (ರಮಝಾನಿನ) ಉಪವಾಸವನ್ನು ಕಡ್ಡಾಯಗೊಳಿಸಿರುವನು ಮತ್ತು ಇದರ ರಾತ್ರಿ ನಮಾಝುನ್ನು ಐಚ್ಚಿಕಗೊಳಿಸಿರುವನು.’

(وَسَنَنْتُ لَكُمْ قِيَامَهُ)

ಈ ಹದೀಸಿ ಉಪಯೋಗ ಯೋಗ್ಯವಾದರೂ ಇದರಲ್ಲಿ ತರಾವೀಹ್ ನ ಪದವಿಲ್ಲ ಹೊರತು ‘ಖಿಯಾಮಹು’ ಖಿಯಾಮು ರಮಳಾನಿನ ಪದವನ್ನು ನೋಡಬಹುದು

---

43 ಮುಝ್ಝಮ್ಮಿಲ್ 2

44 ನಸಾಯೀ, ಈ ಹದೀಸ್ ಳಯೀಫ್ ಆಗಿರುತ್ತದೆ ವಿವರ ಮುಂದೆ ದೊರಕುವುದು.

45 ಸುನನುಲ್ ಕುಬ್ರಾ –ಬೈಹಕೀ ಸನದ್ ಳಯೀಫ್ ಅಲ್ಲಾಮ ಅಲ್ಬಾನಿ ಹಾಷಿಯತು ಮಿಶ್ಕಾತಿನಲ್ಲಿ ಬರೆದಿರುವರು –1/613

ಹೀಗಿರುವಾಗ ಖುರುಆನಿನ ನಸ್ಸ್ ಖಿಯಾಮು ರಮಳಾನಿಗೆ ಅನ್ವಸಿದೆ; ಇನ್ನು ಖಿಯಾಮು ರಮಳಾನಿನ ಹೆಸರೇ ತರಾವೀಹ್ ಆಗಿದ್ದಲ್ಲಿ ಖುರ್ ಆನಿನ ನಸ್ಸ್ ತರಾವೀಹ್ ಗಿಲ್ಲವೆಂದು ಯಾರಿಗೆ ತಾನೆ ಹೇಳಲು ಸಾದ್ಯ; ಮೊತ್ತದಲ್ಲಿ ತರಾವೀಹ್ ನ ನಸ್ಸ್ ಖುರ್ ಆನಿನಿಂದಲೇ ಆಗಿರುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ.

(وَسَنَنْتُ لَكُمْ قِيَامَهُ)

ಇನ್ನು ಈ ಹದೀಸನ್ನು ನೋಡುವುದಾದರೆ ಇದು ಅತ್ಯಂತ ಬಲಹೀನತೆಯಾಗಿರುವ ಹದೀಸ್ ಆಗಿರುವುದು ಇದರ ಒಬ್ಬ ರಾವಿ ನಳ್ರ್ ಬಿನ್ ಶೈಬಾನ್ ಇಬ್ನ್ ಮುಯೀನ್ ರಿಂದ ವರದಿ ಮಾಡಿರುವುದು ಹದೀಸ್ ನ ದುರ್ಭಲತೆಗೆ ಕನ್ನಡಿಯಾಗಿದೆ. ಇಮಾಮ್ ಬುಖಾರಿ , ಇಮಾಮ್ ದಾರಕುತ್ನೀ ಇವರ ಹದೀಸ್ ಅನ್ನು ಳಯೀಫ್ ಎಂದು ಘೋಷಿಸಿದ್ದಾರೆ.[46] ಮತ್ತು ಈ ಹದೀಸ್ ಹಿಂದಿನ ಹದೀಸಿಗೆ ವೈರುದ್ಯವಾಗಿದೆ ಇನ್ನು ಹೊರತು ಇದನ್ನು ಸ್ವೀಕರಿಸಿದರೂ ಇದರ ಯತಾರ್ಥ ವಿಶ್ಲೇಷಕ ಅಲ್ಲಾಹನಾಗಿದ್ದಾನೆ ಅಲ್ಲದೇ ಪ್ರವಾದಿ ಸ.ರವರಿಂದ ಶಾಸನಗೊಂಡದ್ದೆಂದು ಪರಿಗಣಿಸಿಯಲ್ಲ. ಸರ್ವೇಸಾಮಾನ್ಯ ಪ್ರವಾದಿ ಸ.ರವರು ತಹಜ್ಜುದಿಕಿಂತ ಹೆಚ್ಚು ಪ್ರಾದಾನ್ಯತೆ (ತರಾವೀಹ್) ಕಲ್ಪಸಿದರೆಂದು ಮಾತ್ರ. ಅದರ ಮಹತ್ವ ಮತ್ತು ಸುಕೃತವನ್ನು ವಿವರಿಸಿದರು ರಕಅತ್ತಿನ ಗನನೆ ಮತ್ತು ನಮಾಜಿನ ರೀತಿ ನಿಯಮ ಮತ್ತು ಇತರ ವಿವರಣೆಗಳನ್ನು ತಿಳಿಸಿದ್ದರು.

ನೆನಪಿಡಬೇಕಾದುದರಲ್ಲಿ ಖಿಯಾಮು ಲೈಲತ್ತುಲ್ ಕದರಿನ ಶಾಸನ ಮತ್ತು ಐಚ್ಚಿಕತೆಯ ವಿಷಯದಲ್ಲಿ ಖಿಯಾಮು ರಮಳಾನಿಗಿಂತೆ ವಿಭಿನ್ನವಾಗಿರುವುದು ಎನ್ನುವುದೂ ಒಂದಾಗಿದೆ. ಆದರೆ ಯಾರೂ ಖಿಯಾಮು ಲೈಲತುಲ್ ಕದ್ರಿನ ನಮಾಜ್ ಸಾಧಾರಣ ರಮಳಾನಿನ ರಾತ್ರಿಯಲ್ಲಿ ನಿರ್ವಹಿಸುವ ನಮಾಜಿಗಿಂತ ವಿಭಿನ್ನವಾಗಿದೆ ಎಂದು ಹೇಳುವುದಿಲ್ಲ. ಇದೇ ರೀತಿ (ತರಾವೀಹ್)ಖಿಯಾಮು ರಮಳಾನಿನ ನಮಾಜು ತಹಜ್ಜುದಿನ ನಮಾಜಿಗಿಂತ ಬೇರೆಯಾಗುವುದೂ ಇಲ್ಲ.

ಇದರ ಬಗ್ಗೆ ಮೌಲಾನ ಅನ್ವರ್ ಷಾಹ್ ಕಸ್ಮೀರಿ ಯವರ ಒಂದು ಸಂಪೂರ್ಣ ವಿವರಣೆ ಓದಿರಿ.

[46] ತಹ್ಝೀಬ್ ಅತ್ತಹ್ಝೀಬ್–10/438, ಮೀಝಾನುಲ್ ಇಅತಿದಾಲ್–3/234–43

قال عامة علمأء ان التراويح وصلاة الليل نوعان مختلفان والمختار عندي انهما واحد وان اختلفت صفتهما،... وجعل اختلاف الصفات دليلا علي اختلاف نوعيهما ليس بجيد عندِي بل كانت تلك صلواة واحدة اذاتقدمت سميت باسم التراويح واذا تأخرت سميت بإسم التهجد – ولا بدع في تسميتها بإسم عندتغاير الوصفين فأنه لاحرج في التغاير الاسمي إذا اجتمعت عليه الامة وإنما يثبت تغاير النوعين اذا اثبت عن النبي صلي الله عليه وسلم أنه صلي التهجد مع إقامته بالتراويح[47]

"ಸಾಧಾರಣವಾಗಿ ಹನಫೀಯರು ಹೇಳುವುದಾಗಿದೆ ತರಾವೀಹ್ ಮತ್ತು ತಹಜ್ಜುದ್ ಎರಡು ಬೇರೆ ಬೇರೆ ವಿಭಾಗವಾಗಿವೆ ಎಂದು ಆದರೆ ಇವೆರಡರೆ ವಿಶೇಷಣಗಳಲ್ಲಿ ವೆತ್ಯಾಸಗಳಿದ್ದರೂ ಇವೆರಡೂ ನನ್ನ ಬಳಿ ಒಂದೇ ಆಗಿರುತ್ತದೆ ಹಾಗೂ ವಿಶೇಷಣಗಳ ವಿತ್ಯಾಸವನ್ನು ವಿಭಾಗಿಯ ವೆತ್ಯಾಸ ವಾಗಿಸುವುದು ಸರಿಯಲ್ಲವೆನ್ನುವುದಾಗಿದೆ ನನ್ನ ತೀರ್ಮಾಣ. ವಾಸ್ತವದಲ್ಲಿ ಇವೆರಡೂ ನಮಾಜುಗಳು ಒಂದೇ ಆಗಿವೆ ರಾತ್ರಿಯ ಮೊದಲ ಹಂತದಲ್ಲಿ ನಿರ್ವಹಿಸಿದರೆ ಇದರ ನಾಮ ತರಾವೀಹ್ ಎಂದೂ ರಾತ್ರಿಯ ಕೊನೆಯಲ್ಲಿ ನಿರ್ವಹಿಸಿದರೆ ಇದರ ನಾಮ ತಹಜ್ಜುದ್ ಎಂದಾಗಿದೆ. ಮತ್ತು ಇವರಡರ ವಿಶೇಷಣಗಳಲ್ಲಿ ವೆತ್ಯಾಸಗಳಿದ್ದೂ ಇದರಿಂದಾಗಿ ವೆತ್ಯಾಸವಾದರೂ ಆಶ್ಚರ್ಯವೇನು? ಹಾಂ ಇನ್ನು ಇವೆರಡು ವಿಭಾಗಿಳಾಗಿ ಸಾಬೀತಾಗ ಬೇಕಾದರೆ ಪ್ರವಾದಿ ಸ.ರಿಂದ ತರಾವೀಹ್ ನ ನಂತರ ತಹಜ್ಜುದ್ ನಿರ್ವಹಿಸಿದ್ದಾಗಿ ಸಾಬೀತಾಗ ಬೇಕು."

ಮೌಲಾನ ಅನ್ವರ್ ಷಾಹ್ ರ ವಿವರಣೆ ತಾವು ತಿಳಿದುಕೊಂಡಹಾಗೆ ಅವರ ಬಗ್ಗೆ ಅಶ್ರಫ್ ಅಲೀ ತಾನ್ವೀ ಹೇಳಿರುವ ವಿಷಯವನ್ನೂ ತಿಳಿದುಕೊಳ್ಳಿ. ಅಶ್ರಫ್ ಅಲೀ ತಾನ್ವೀ ಹೇಳುತ್ತಾರೆ: 'ಇವರ ಸಾಮಿಪ್ಯ ಈ ಉಮ್ಮತ್ತಿಗೆ ಇಸ್ಲಾಮಿನ ಸತ್ಯತೆಯ ಪುರಾವೆ ಮತ್ತು ಸಂಕ್ಷಿಪ್ತ ಪವಾಡವಾಗಿದೆ'[48]

---

47 ಫ್ಯಲುಲ್ ಬಾರಿ –2/420

48 ಆಲ್ ಫುರ್ ಖಾನ್ ಬರೇಲೀ ಸಫರ್.–ಹಿಜ್ರೀ 1372

ಹೆಚ್ಚು ಮನಶಾಂತಿಗಾಗಿ ಮೌಲಾನ ರಷೀದ್ ಅಹ್ಮದ್ ಗಂಗೋಹಿ ಯವರ ವಿವರಣೆಯನ್ನೂ ತಿಳಿದುಕೊಳ್ಳಿ:

بر اہل علم پوشدہ نیست کے قیام رمضان اور قیام اللیل فی الواقع یک نماز است کہ در رمضان برائے تیسیر مسلمین در اول شب مقرر کردہ شد وہنوز عزیمت دراداائش اٰخر شب است...... نزد ہمون قائل فرضیت تہجد بر اٰن حضرت صلي الله عليه وسلم تراویح نفس تہجد است علی التحقیق....... وبررائے کسے کہ تہجد را بر اٰنحضرت صلی اللہ علیہ وسلم منسوخ کوید چنانچھ قول حضرت عائشہ رضی اللہ عنہا ہست رواہ مسلم فی صحیح پس مواظبت تہجد دلیل سنت موکدۃ خواہد بود ودلائل قولیہ ناظر استحباب مکر تہجد رمضان کہ تراویح ست بدلیل قول سنت مؤکدۃ خواہد ماند واللہ اعلم[49]

ಖಿಯಾಮು ರಮಳಾನ್(ತರಾವೀಹ್) ಖಿಯಾಮುಲ್ಲೈಲ್ (ತಹಜ್ಜುದ್) ಯಾತಾರ್ಥದಲ್ಲಿ ಎರಡೂ ಒಂದೇ ನಮಾಝ್ ಆಗಿವೆ ಎನ್ನುವುದು ಅಹ್ಲುಲ್ ಇಲ್ಮಿನ ವಕ್ತಾರರಲ್ಲಿ ಗೌಪ್ಯವಾದಂತಹಾ ವಿಷಯವಲ್ಲ ಮುಸಲ್ಮಾನರ ಸಹೂಲತ್ತಿಗಾಗಿ ರಾತ್ರಿಯ ಮೊದಲ ಹಂತದಲ್ಲಿ ನಿರ್ವಹಿಸುವ ತರಾವೀಹ್‌ಯನ್ನು ರಾತ್ರಿಯ ಕೊನೆಯ ಹಂತದಲ್ಲಿ ನಿರ್ವಹಿಸುವಲ್ಲಿರುವ ಶ್ರೇಷ್ಟತೆ ಇಂದಿಗೂ ಬಾಕಿಯಿದೆ. ಪ್ರವಾದಿ ಸ.ರವರ ಪರವಾಗಿ ತಹಜ್ಜುದ್ ಕಡ್ಡಾಯ ಎನ್ನುವವರ ಬಳಿ ತರಾವೀಹ್ ತಹಜ್ಜುದ್ ಆಗಿದೆ. ಆಯಿಶಾ ರ. ರವರ ಹದೀಸಿನ ಆಧಾರದಲ್ಲಿ ಪ್ರವಾದಿ ಸ.ರವರಿಗೆ ತಹಜ್ಜುದಿನ ಕಡ್ಡಾಯವನ್ನು ನೀಗಿಸಲಾಗಿದೆ ಎನ್ನುವವರ ಬಳಿ ತಹಜ್ಜುದ್ ಸುನ್ನತ್ ಮುಅಕ್ಕಿದ ಎನ್ನುವುದು ಪುರಾವೆಯಾಗಿದೆ. ಮತ್ತು ಹದೀಸ್ ಖೌಲೀ ಉತ್ತಮಕ್ಕೆ ಪುರಾವೆಯಾಗುತ್ತದೆ. ಆದರೆ ರಮಳಾನಿನ ತಹಜ್ಜುದ್ ಸ್ವತಃ ತರಾವೀಹ್ ಆಗಿದೆ. ಖೌಲೀ ಪುರಾವೆಯಿಂದ ಸುನ್ನತ್ ಮುಅಕ್ಕಿದವಾಗಯೇ ಇರುವುದು. ಅಲ್ಲಾಹನು ಹೆಚ್ಚು ಬಲ್ಲವನು.

---

[49] ಲತ್ವಾಯಿಫ್ ಖಾಸಿಮೀಯ ಪು.–13–17 ಮೂರನೇ ಭಾಗ

ಮೊತ್ತದಲ್ಲಿ ರಮಳಾನಿನ ತಹಜ್ಜುದಿನ ಹೆಸರು ತರಾವೀಹ್ ಆಗಿದೆ. ಆದುದರಿಂದಲೇ ಆಯಿಶಾ ರ.ರವರ ಹದೀಸಿನಲ್ಲಿ ಪ್ರವಾದಿ ಸ.ರವರು ರಮಳಾನ್ ಆಗಲಿ ಇತರದಿನಗಳಲ್ಲಾಗಲಿ ಹನ್ನೊಂದಕ್ಕಿಂತ ಹೆಚ್ಚು ನಮಾಝ್ ನಿರ್ವಹಿಸಲಿಲ್ಲ. ಇದರಿಂದ ಯಾವುದೇ ಸಂಶಯಕ್ಕೆ ಎಡೆಇಲ್ಲದೇ ತರಾವೀಹ್ ನಮಾಜಿನ ರಕಅತ್ತಿನ ಲೆಕ್ಕ ಹನ್ನೊಂದಾಗಿತ್ತೆಂದು ಸುನ್ನತ್ತಿನಿಂದ ಸಾಬೀತಾಗುತ್ತದೆ.

ಎರಡನೇ ಹದೀಸ್:

ಮುಅಜಮುತ್ತಬ್ರಾನಿ ಸ್ವಗೀರ್, ಖಿಯಾಮುಲ್ಲೈಲ್ ಮುರವಝೀ, ಸ್ವಹೀಹ್ ಇಬ್ನ್ ಹಿಬ್ಬಾನ್ ಮತ್ತು ಸ್ವಹೀಹ್ ಇಬ್ನ್ ಖುಝೈಮಾ ದಲ್ಲಿ ಜಾಬಿರ್ ಇಬ್ನ್ ಅಬ್ದುಲ್ಲಾ ರ. ಹದೀಸ್ ತರಾವೀಹಿನ ರಕಅತ್ತಿನ ಸುನ್ನತ್ತಾದ ಕರ್ಮವನ್ನು ವಿವರಿಸುತ್ತದೆ.

"صَلَّى بِنَا رَسُولُ اللَّهِ صَلَّى اللَّهُ عَلَيْهِ وَآلِهِ وَسَلَّمَ فِي شَهْرِ رَمَضَانَ ثَمَانِ رَكَعَاتٍ وَأَوْتَرَ "،

"ಪ್ರವಾದಿ ಸ.ರವರು ರಮಳಾನ್ ತಿಂಗಳಲ್ಲಿ ನಮಗೆ ಎಂಟು ರಕಅತ್(ತರಾವೀಹ್) ನಮಾಜನ್ನು ಮಾಡಿಸಿದರು ನಂತರ ವಿತ್ರ್ ಮಾಡಿಸಿದರು".[50]

ಸ್ವಹೀಹೈನಿನ ಈ ಹದೀಸ್ ಸಾಬೀತು ಪಡಿಸುತ್ತಿದೆ ಮತ್ತು ಪ್ರತ್ಯಕ್ಷದರ್ಶಿಯ ಸಾಕ್ಷಿಕೂಡ ಇದರಲ್ಲಿ ಅಲ್ಲದೇ ಜಾಬಿರ್ ರ.ರವರ ಈ ಹದೀಸಿನಲ್ಲಿ ಮುಂದೆ ಸಂಪೂರ್ಣ ಸಂಭವವನ್ನು ವಿವರಿಸುತ್ತಾ ನಂತರದ ದಿನದಲ್ಲಿ ನಾವೆಲ್ಲ ಸೇರಿ ಪ್ರವಾದಿ ಸ.ರವರನ್ನು ಕಾಯುತಿದ್ದೆವು ಆದರೆ ಪ್ರವಾದಿ ಸ.ರವರ ಮಸೀದಿಗೆ ಆಗಮಿಸಲಿಲ್ಲ ಸುಬಹಿಗೆ ಅವರಲ್ಲಿ ಕೇಳಲಾದಾಗ:

(اِنِّي خَشِيتُ أَنْ تُفْرَضَ عَلَيْكُمْ)

'ನಿಮ್ಮ ಮೇಲೆ ಕಡ್ಡಾಯಗೊಳ್ಳುವುದೆಂಬ ಸಂದೇಹ ನನಗಿರುವುದರಿಂದ'

---

[50] ಸ್ವಹೀಹ್ ಇಬ್ನ್ ಖುಝೈಮಾ–2/137, ಇದನ್ನು ನಾಸಿರುದ್ದೀನ್ ಅಲ್ಬಾನಿ ಯವರು ಸ್ವಹೀಹ್ ಎಂದಿದ್ದಾರೆ ತುಹ್ಫತುಲ್ ಅಹ್ವಝಿನಿಂದ–3/525, ಸ್ವಲಾತುತ್ತರಾವೀಹ್ ಪು.33–34, ಮುಕ್ತಸರ್ ಖಿಯಾಮುಲ್ಲೈಲ್ ಮುರವ್ವಿಝೀ ಪು.155. ಅತ್ತಲೀಖುಲ್ ಮಜ್ದ್, ಪು.138, ಅಲ್ ಮುರಾಅತ್.–1/299

ಅಲ್ಲಾಮ ಝುಹಬೀ ಮೀಝಾನುಲ್ ಇಅತಿದಾಲ್ ನಲ್ಲಿ ಈ ಹದೀಸನ್ನು ಹೇಳುತ್ತಾ ಮತ್ತು ನ್ಯೂನ್ಯತೆ ಮತ್ತು ಮಾರ್ಪಡಿಸುವ ನಂತರ ಇದರ ಸನದ್ ಮಾದ್ಯಮಿಕವಾಗಿದೆ[51] ಪ್ರವಾದಿ ಸ. ರವರ ತರಾವೀಹ್ ನಮಾಜಿನ ರಕಅತ್ ಹೇಳುವ ಸಲುವಾಗಿ ಇಬ್ನ್ ಹಜರ ಅಸ್ಕಲಾನಿ ಫತಹುಲ್ ಬಾರಿಯಲ್ಲಿ ನಕಲು ಗೊಳಿಸಿರುವರು ಮತ್ತು ಫತಹುಲ್ ಬಾರಿಯ (ಮುಕದ್ದಿಮ್)ಮುನ್ನುಡಿಯಲ್ಲಿ ಇವರು ಸ್ವತಃ ವಿವರಿಸುತ್ತಾ ಫತಹುಲ್ ಬಾರಿಯಲ್ಲಿ ಯಾವುದೇ ಹದೀಸನ್ನು ಪುರಾವೆಗೆ ತೆಗದುಕೊಂಡಲ್ಲಿ ಅದು ಸ್ವಹೀಹ್ ಅಥವಾ ಕನಿಷ್ಟಪಕ್ಷ ಹಸನ್ ದರ್ಜೆಯದ್ದಾಗಿರುವುದು. ಈ ರೀತಿಯಲ್ಲಿ ಈ ಹದೀಸ್ ಹಸನ್ ಆಗಿರುತ್ತದೆ.(ಅಲ್ಲಾಮ ಝುಹಬೀಯವರ ಮಾತಿನಂತೆ) ಮೌಲಾನ ಶೌಖ್ ನೀಮವೀ ತನ್ನ ಗ್ರಂಥ ಆಸಾರು ಸುನನ್ ನಲ್ಲಿ ಈ ಹದೀಸನಲ್ಲಿ ಬರುವ ಒಬ್ಬ ರಾವಿ (ವರದಿಗಾರ) ಈಸ ಇಬ್ನ್ ಜಾರಿಅ ರ ಬಗ್ಗೆ ಕೆಲವು ಮಾತುಗಳನ್ನು ನಕಲು ಮಾಡಿರುವರು. ಅಲ್ಲಾಮ ಅಬ್ದುರ್ರಹ್ಮಾನ್ ಮುಬಾರಕ್ ಪುರಿ ರಹಿಮಹುಲ್ಲಾಹ್, ಅಲ್ಲಾಮ ಝುಹಬೀ ರಹಿಮಹುಲ್ಲಾಹ್ ರಂತಹಾ (ಇಬ್ನ್ ಹಜರ ರ ಬಳಿ ನಖದೀ ರೀಜಾಲಿನ ಇಸ್ತಿಕರಾಅ ತಾಮ್. ಅಂದರೆ ಪರಿಗಣನೆಗೆ ತೆಗೆಯಲ್ಪಡದ ಟೀಕೆಗೆ ಒಳಪಟ್ಟವರಲ್ಲಿಸೇರಿದ) ಮುಹದ್ದಿಸರ ಬಳಿ ಇವರ ಮಾತಿಗೆ ಸ್ವೀಕಾರರ್ಹವಲ್ಲವೆಂದು ಹೇಳಲಾಗಿದೆ.[52]

ಮೂರನೇ ಹದೀಸ್:

ರಕಅತ್ತಿನ ಲೆಖ್ಖವನ್ನು ಸ್ಥಿರಗೋಳಿಸುವ ಸುನ್ನತ್ತಾದ ರಕಅತ್ತಿನ ಲೆಖ್ಖವನ್ನು ಸಂಭಂದವಿರುವ ಮೂರನೇ ಹದೀಸ್ ಮುಸ್ನದ್ ಅಬೀ ಯಅಲ, ಮುಅಜಮು ತ್ವಬರಾನಿ ಅವುಸತ್ ನಲ್ಲಿ ಜಾಬಿರ್ ರ.ರವರಿಂದ ವರದಿ ಅದರಲ್ಲಿ ಅವರು ವಿವರಿಸುತ್ತಾರೆ:

«جَاءَ أُبَيُّ بْنُ كَعْبٍ إِلَى رَسُولِ اللَّهِ – صَلَّى اللَّهُ عَلَيْهِ وَسَلَّمَ – فَقَالَ: يَا رَسُولَ اللَّهِ إِنَّهُ كَانَ مِنِّي اللَّيْلَةَ شَيْءٌ – يَعْنِي فِي رَمَضَانَ – قَالَ: " وَمَا ذَاكَ يَا أُبَيُّ؟ " قَالَ: نِسْوَةٌ فِي

51 ಮೀಝಾನುಲ್ ಇಅತಿದಾಲ್–3/311
52 ತುಹ್ಫತುಲ್ ಅಹ್ವಝ್–3/525

دَارِي قُلْنَ إِنَّا لَا نَقْرَأُ الْقُرْآنَ فَنُصَلِّي بِصَلَاتِكَ قَالَ: فَصَلَّيْتُ بِهِنَّ ثَمَانِيَ رَكَعَاتٍ وَأَوْتَرْتُ فَكَانَ سُنَّةَ الرِّضَا وَلَمْ يَقُلْ شَيْئًا»

ಉಬಯ್ಯೀ ಇಬ್ನ್ ಕಅಬ್ ಪ್ರವಾದಿ ಸ.ರವರ ಬಳಿ ಹಾಜರಾಗಿ ಹೇಳುತ್ತಾರೆ ಓ ಅಲ್ಲಾಹನ ರಸೂಲರೇ ನಿನ್ನೆ (ರಮಳಾನಿನ) ರಾತ್ರಿ ನನ್ನಿಂದ ಒಂದು ಸಂಭವ ನಡೆಯಿತು! ಪ್ರವಾದಿ ಸ.ರವರು ಕೇಳಿದರು 'ಅದೇನು ಉಬಯ್ಯೀ?' ಅವರು ಹೇಳಿದರು ನನ್ನ ಮನೆಯ ಹೆಂಗಸರು ನನ್ನಲಿ 'ನಾವು ಹೆಚ್ಚು ಖುರ್ ಆನ್ ಓದಲರಿಯದವರು ಆದುದರಿಂದ ನಾವು ನಿಮ್ಮ ಹಿಂದೆ (ತರಾವೀಹ್) ನಮಾಜು ನಿರ್ವಹಿಸುವೆವು (ಉಬಯ್ಯೀ) ಹೇಳಿದರು: ನಾನು ಅವರಿಗೆ ಎಂಟು ರಕಅತ್ (ತರಾವೀಹ್)ನಮಾಜು ಮತ್ತು ವಿತ್ರ್ ನಿರ್ವಹಿಸಿದೆ. ಇದು ಪ್ರವಾದಿ ಸ.ರವರ ಸುನ್ನತ್ ರಿಳಾ(ತೃಪ್ತಿ) ತಕ್ರೀರೀ ಹದೀಸ್ ಆಗಿರುತ್ತದೆ, ಯಾಕೆಂದರೆ ಪ್ರವಾದಿ ಸ.ರವರು ಇದರ ಬಗ್ಗೆ ಯಾವ ಪ್ರತಿಕ್ರಿಯೆಯನ್ನು ನೀಡಲಿಲ್ಲ[53]

ಈ ಹದೀಸ್ ಮಜ್ಮಾ ಝುವಾಯಿದ್ ನಲ್ಲಿ ಅಲ್ಲಾಮಃ ಹ್ಯತಮೀಯವರ ಮಾತಿನಂತೆ ಹಸನ್ ಆಗಿರುತ್ತದೆ ಹಾಗೆಯೇ ಈ ಹದೀಸಿನ ಪದಗಳಲ್ಲಿ ಮನದಟ್ಟಾದ ಹಾಗೆ ಯಾವ ಕೆಲಸದಲ್ಲಿ ಪ್ರವಾದಿ ಸ.ರವರಿಗೆ ಮನದಟ್ಟಾಗಿ ಮಾತನಾಡದಿರುವುದೋ, ಯಾವ ಕೆಲಸವನ್ನು ಸ್ವತಃ ನೋಡಿ ಸುಮ್ಮನಿರುವುದೋ ಆಗಿದ್ದಲ್ಲಿ ಅದು ಪ್ರವಾದಿ ಸ.ರವರ ಅಪ್ಪನೆಯ ಪುರಾವೆಯಾಗಿದೆ,

ಇನ್ನು ಉಬಯ್ಯೀ ಇಬ್ನ್ ಕಅಬರ ಪ್ರವರ್ತಿಯನ್ನು(ಎಂಟು ರಕಅತ್ ತರಾವೀಹ್ ಮತ್ತು ವಿತ್ರ್ ಅನ್ನು) ಕಂಡು ಪ್ರವಾದಿ ಸ.ರವರು ಸುಮ್ಮನಾಗದೇ ವಿರೋಧಿಸುತಿರುತಿದ್ದರು ಕಾರಣ ಒಂದು ಕೆಡುಕನ್ನು ಕಂಡು ಅದನ್ನು ವಿರೋಧಿಸದೇ ಸುಮ್ಮನಾಗುವುದು ನುಬುವ್ವತ್ತಿಗೆ ವಿರುದ್ಧವಾದ ತಿಯರಿಯಾಗಿದೆ.

ನಾಲ್ಕನೇ ಹದೀಸ್:

---

[53] ತುಹ್ಫತುಲ್ ಅಹ್ವಝ್-3/525-256, ಮಜ್ಮಅ ಝುವಾಯಿದ್-3/74, ಫತುಹುರ್‍ರಬ್ಬಾನಿ-5/15, ಖಿಯಾಮುಲ್ಲ್ಯಲ್ ಮುರವ್ವಝೀ ಪು:155 ಮತ್ತು ಅದರ ಕೊನೆಯಲ್ಲಿ 'ಪ್ರವಾದಿ ಸ.ರವರು ಸುಮ್ಮನಾದರು ಅಂದರೆ ಅದು ಅವರ ಮೌನ ಸಮ್ಮತದ ನಿಶಾನೆಯಾಗಿತ್ತುಸ

ಈ ವಿಷಯದ ನಾಲ್ಕನೇ ಹದೀಸ್ ಇಮಾಮ್ ಮಾಲಿಕರ ಮುಅತ್ತ, ಬ್ಯಹಖೀ ಯವರ ಸುನನುಲ್ ಕುಬ್ರಾ , ಮುಸನ್ನಿಫ್ ಇಬ್ನ್ ಅಬೀ ಶ್ಯಬಾ, ಮತ್ತು ಸುನನ್ ಸಯೀದ್ ಬಿನ್ ಮನ್ಸೂರ್ ನಲ್ಲಿ ಸಾಯಿಬ್ ಇಬ್ನ್ ಯಝೀದ್ ರಹಿಮಹುಲ್ಲಾಹ್ ವಿವರಿಸುತ್ತಾರೆ:

أَمَرَ عُمَرُ بْنُ الْخَطَّابِ –رَضِيَ اللَّهُ عَنْهُ أُبَيَّ بْنَ كَعْبٍ –رَضِيَ اللَّهُ عَنْهُ– وَتَمِيمًا الدَّارِيَّ أَنْ يَقُومَا لِلنَّاسِ بِإِحْدَى عَشْرَةَ رَكْعَةً، وَكَانَ الْقَارِئُ يَقْرَأُ بِالْمِئِينَ حَتَّى كُنَّا نَعْتَمِدُ عَلَى الْعِصِيِّ مِنْ طُولِ الْقِيَامِ، وَمَا كُنَّا نَنْصَرِفُ إِلَّا فِي فُرُوعِ الْفَجْرِ

ಅಮೀರುಲ್ ಮೂಮಿನೀನ್ ಉಮರುಲ್ ಫಾರೂಕ್ ರ. ರವರು ಉಬಯ್ಯಿ ಇಬ್ನ್ ಕಅಬುಲ್ ಅನ್ಸಾರಿ ಯವರಿಗೆ ಮತ್ತು ತಮೀಮುದ್ದಾರಿಯವರಿಗೆ ರಳಿಯಲ್ಲಾಹು ಅನ್ಹುಮಾ. ಜನರಿಗೆ ಹನ್ನೊಂದು ರಕ ಅತ್ ನಿರ್ವಹಿಸಲು ಅಜ್ಞೆ ಹೊರಡಿಸುತ್ತಾರೆ ಇಮಾಮ್ ಒಂದೊಂದು ರಕಅತ್ತಿನಲ್ಲಿ ನೂರು ನೂರು ಆಯತ್ ಓದುತಿದ್ದರು ನಾವು ಸುಸ್ತಾಗಿ ಕೋಲಿನ ಸಹಾಯಪಡೆಯುವಲ್ಲಿ ನಿರ್ಭಂದಿತರಾಗುತಿದ್ದೆವು ಮತ್ತು ತುಲೂಯಿನ ಹತ್ತಿರ ಹತ್ತಿರ ವಿತ್ರ್ ನಿಂದ ವಿರಮಿಸುತಿದ್ದೆವು.[54]

ಈ ಹದೀಸನ್ನು ಉದ್ದರಿಸಿದ ಬಳಿಕ ಮೌಲಾನ ಶೌಖ್ ನಮವೀ ಹನಫೀ ಬರೆಯುತ್ತಾರೆ (ಇಸ್ನಾದುಹು ಸ್ವಹೀಹುನ್) ಶೃಂಖಲೆ ಉತ್ತಮಾಗಿದೆ ಅಂದರೆ ಇದರ ಸನದ್ ಸ್ವಹೀಹ್ ಆಗಿದೆ[55] ನಾಸಿರುದ್ದೀನ್ ಅಲ್ಬಾನಿ ರಹಿಮಹುಲ್ಲಾಹ್ ಈ ಹದೀಸ್ ಸ್ವಹೀಹ್ ಆಗಿದೆ ಎಂದಿದ್ದಾರೆ[56]

ಅಲ್ಲಾಮ ಇಬ್ನ್ ಅಬ್ದುಲ್ ಬರ್ ಇಮಾಮ್ ಮಾಲಿಕರ ರ. ಹನ್ನೊಂದು ರಕಆತ್ ನ ಬಗ್ಗೆ ಇರುವ ಉಲ್ಲೇಖವನ್ನುದ್ದೇಶಿಸಿ ಹೇಳುತ್ತಾರೆ: ಇದರಲ್ಲಿ ಏಕತ್ವವಿದೆ ಯತಾರ್ಥದಲ್ಲಿ ಇವರ ಈ ಮಾತು ಒಂದು ಅಗತ್ಯವಿಲ್ಲದ ಗುಮಾನಿಯಾಗಿದೆ ಅಲ್ಲಾಮ ಝುರ್ಖಾನೀ ಶರಹುಲ್ ಮುಅತ್ತಾ ದಲ್ಲಿ ಈ ಮಾತನ್ನು ತಳ್ಳಿಹಾಕುತ್ತು ಹೇಳುತ್ತಾರೆ ಇವರ ಈಮಾತು ಸರಿಯಲ್ಲ ಮತ್ತು ಅಲ್ಲಾಮ ಅಬ್ದುಲ್ ರಹ್ಮಾನ್ ಮುಬಾರಕ್ ಪುರಿ ತುಹ್ಫತುಲ್

---

[54] ಮುಅತ್ತಾ ತನ್ವೀರುಲ್ ಹವಾಲಿಕ್ ಇಮಾಮ್ ಸುಯೂತೀ–1/137, ಮಿಶ್ಕಾತ್ –1/407, ತುಹ್ಫತುಲ್ ಅಹ್ವಝ್–3/256, ಖಿಯಾಮುಲ್ಲ್ಯಲ್ ಮುರವ್ವಝೀ ಪು:155, ಸುನನುಲ್ ಕುಬ್ರಾ ಬ್ಯಹಕೀ–2/496

[55] ತುಹ್ಫತುಲ್ ಅಹ್ವಝ್

[56] ಮುಖ್ತಸರ್ ಸ್ವಹೀಹುಲ್ ಬುಖಾರಿ ಪು:47, ಸ್ವಲಾತುತರಾವೀಹ್ ಪು:120 ಉರ್ದು.

ಅಹ್ವಝ್ ನಲ್ಲಿ ಹಾಗೂ ಶೌಕ್ ನಮವೀ ಆಸಾರು ಸುನನಿನಲ್ಲಿ ಇಬ್ನ್ ಅಬ್ದುಲ್ ಬರ್ ರ ಈ ಮಾತನ್ನು ಬಾತಿಲ್ ಎಂದು ಹೇಳಿರುವರು[57]

ಇಮಾಮ್ ಮಾಲಿಕ್ ರಹಿಮಹುಲ್ಲಾ ಸ್ವತಃ ಹನ್ನೊಂದು ರಕಅತನ್ನೇ ಪರಿಗಣಿಸುತಿದ್ದರು, ಇಮಾಮ್ ಸುಯೂತೀ ತಮ್ಮ ಸಹಪಾಟಿಗಳಿಂದ ಅಲ್ ಜೌಝೀ ರ ರವರಿಂದ ವರದಿ

وقال الجوري – من أصحابنا – عن مالك أنه قال : الذي جمع عليه الناس عمر بن الخطاب أحب إلي وهو إحدى عشرة ركعة وهي صلاة رسول الله صلى الله عليه وسلم قيل له إحدى عشرة ركعة بالوتر ؟ قال : نعم وثلاث عشرة قريب قال : ولا أدري من أين أحدث هذا الركوع الكثير ؟ "

"ಇಮಾಮ್ ಮಾಲಿಕ್ ಹೇಳುತ್ತಾರೆ: ‘ಎಷ್ಟು ರಕಅತ್ತಿನಲ್ಲಿ ಉಮರುಲ್ ಫಾರೂಕ್ ರ. ರವರು ಜನರನ್ನು ಸೇರಿಸಿರುವರೋ ಅದುವೇ ನನಗೆ ಹೆಚ್ಚು ಪ್ರಿಯವಾದದ್ದು ಮತ್ತು ಅದು ಹನ್ನೊಂದು ರಕಆತ್ ಆಗಿರುತ್ತದ ಅದುವೇ ಪ್ರವಾದಿ ಸ.ರವರ ನಮಾಝ್ ಆಗಿದೆ ಅವರಲ್ಲಿ ಕೇಳಲಾಯಿತು ವಿತ್ರ್ ನೊಂದಿಗೆ ಹನ್ನೊಂದು ರಕಅತ್ತೇ? ಅವರು ಉತ್ತರಿಸಿದರು ಹೌದು! ಮತ್ತು ಹದಿಮೂರು ಹತ್ತಿರವೇ ಇದೆ ಮತ್ತು ಇದಕಿಂತ ಹೆಚ್ಚು ರಕಆತ್ ನ ಬಗ್ಗೆ ಅವುರು ಹೇಳಿದರು ಹೆಚ್ಚು ರುಕೂಅ (ಹನ್ನೊಂದು ಹದಿಮೂರಕ್ಕಿಂತ ಹೆಚ್ಚು) ಎಲ್ಲಿಂದ ಪ್ರಾರಂಭವಾಯಿತೆಂದು ನನಗರಿಯದು". [58] ನೋಡಿರಿ ರಿಸಾಲ "ಅಲ್ ಮಸಾಬೀಹ್ ಫೀ ಸ್ವಲಾತುತರಾವೀಹ್" ನಲ್ಲಿ

ಹನ್ನೊಂದು ರಕಅತ್ತಿನ ಮುಂದುವಯುವಿಕೆಯನ್ನು ಯಹ್ಯಾ ಬಿನ್ ಸಯೀದ್ ಕತ್ತಾನ್ ಮುಸನ್ನಿಫ್ ಅಬೀ ಶೈಬಾ(2/79/2)ರಲ್ಲಿ ಅಬ್ದುಲ್ ಅಝೀಝ್ ಬಿನ್ ಮೊಹಮ್ಮದ್ ರು ಸುನನ್ ಸಯೀದ್ ಇಬ್ನ ಮನ್ಸೂರಲ್ಲಿ ಮತ್ತು ಇಸ್ಮಾಯೀಲ್ ಬಿನ್ ಉಮಯ್ಯ, ಉಸಾಮ ಬಿನ್ ಝ್ಯದ್, ಮೊಹಮ್ಮದ್ ಬಿನ್ ಇಸ್ಹಾಕ್ ಹಾಗೂ ಇಸ್ಮಾಯೀಲ್ ಬಿನ್ ಜಾಫರ್ ಸ್ವಹಿಹ್ ಇಬ್ನ್ ಖುಝ್ಯುಮಾ(2/186/1) ರಲ್ಲಿ ವಿವರಿಸಿದ್ದಾರೆ. ಅದಲ್ಲದೇ

---

[57] ಶರಹು ಝುರ್ಕಾನೀ –1/239, ತುಫ್ಹತುಲ್ ಅಹ್ವಝ್ –3/526

[58] ತುಫ್ಹತುಲ್ ಅಹ್ವಝ್ –3/523

ಮೊಹಮ್ಮದ್ ಬಿನ್ ಇಸ್ಹಾಕ್ ರು ಹದಿಮೂರು ರಕಅತ್ತಿನ ಮಾತು ಆಡಿರುವರು. ಇಮಾಮ್ ಮೊಹಮ್ಮದ್ ಮರಝುವೀ ಖಿಯಾಮುಲ್ಲೈಲ್ (ಪು:95)ರಲ್ಲಿ ಖಿಯಾಮುರಮಳಾನಿನ ವಿಷಯದಲ್ಲಿ ಸಾಯಿಬ್ ಇಬ್ನ್ ಯಝೀದ್ ರ ಹದೀಸಿಗಿಂತ ಹೆಚ್ಚು ಸ್ವಹೀಹ್ ಬೇರೊಂದಿಲ್ಲ ಅಂದರೆ ಹದಿಮೂರು ರಕಆತ್ ನಿರ್ವಹಿಸುವುದರಲ್ಲಿ ಸಾಯಿಬ್ ಬಿನ್ ಯಝೀದ್ ವಿವರಿಸುತ್ತಾರೆ:

(كُنَّا نُصَلِّي فِي زَمَنِ عُمَرَ بْنِ الْخَطَّابِ فِي رَمَضَانَ ثَلَاثَ عَشْرَةَ رَكْعَةً)

'ನಾವು ಉಮರ್ ರ.ರವರ ಕಾಲದಲ್ಲಿ ರಮಳಾನಿನ ತಿಂಗಳಲ್ಲಿ ಖೀಯಾಮುಲ್ಲೈಲ್(ತರಾವೀಹ್) ಹದಿಮೂರು ರಕಆತ್ ನಿರ್ವಹಿಸುತಿದ್ದೆವು'[59]

ಇಮಾಮ್ ಮೊಹಮ್ಮದ್ ಇಬ್ನ್ ಇಸ್ಹಾಕ್ ಹೇಳುತ್ತಾರೆ:

وهذا أثبت ما سمعت في ذلك وهو موافق لحديث عائشة[60]

ನಾವು ಅರಿತ ಹದೀಸು ಗಳಲ್ಲಿ ಇದಕ್ಕಿಂತ ಉತ್ತಮವಾದ ಹದೀಸ್ ಬೇರೊಂದಿಲ್ಲ ಈ ಹದೀಸ್ ಆಯಿಶಾ ರ. ರವರ ಹದೀಸಿನೊಂದಿಗೆ ಸಾಮಿಪ್ಯವಿದೆ.

ಹದಿಮೂರು ರಕಅತ್ತಿನ ವರದಿಯಲ್ಲಿ ಮೊಹಮ್ಮದ್ ಬಿನ್ ಇಸ್ಹಾಕ್ ಒಬ್ಬೊಂಟಿಕರಾಗಿದ್ದಾರೆ.

ಐದನೇ ಹದೀಸ್:

ಹದಿಮೂರು ರಕಅತ್ತಿನ ವರದಿಯಲ್ಲಿ ಉಮ್ಮುಲ್ ಮೂಮಿನೀನ್ ಆಯಿಶಾ ರ.ರವರ ಸ್ವಹೀಹ್ ಮುಸ್ಲಿಂ ನಲ್ಲಿ ಬಂದ ವರದಿಯಂತೆ ಹದಿಮೂರು ರಕಅತ್ತಿನ ಮಾತಿದೆ ಆದರೆ ಇದರಲ್ಲಿ ಸುಬಹಿಯ ಎರಡು ರಕಅತ್ತಿನ ಸುನ್ನತ್ ಸೇರಿದೆ[61] ಇದೇ ರೀತಿ ವರದಿಯಲ್ಲಿ

---

[59] ಫತುಹುಲ್ ಬಾರಿ–4/254, ಖಿಯಾಮುಲ್ಲೈಲ್– ಅಬೂ ಅಬ್ದುಲ್ಲಾ ಮೊಹಮ್ಮದ್ ಬಿನ್ ನಸರ್ ಇಬ್ನುಲ್ ಹಜ್ಜಾಜ್ ಅಲ್ ಮರ್ವಝೀ–1/220

[60] ಫತುಹುಲ್ ಬಾರಿ–2/254,

[61] ಮುಸ್ಲಿಂ ಶರಹುನ್ನವವಿ–3/6/17–19

ಹೊಂದಿಕೊಂಡು ಬರುವ ಸಂಭವವಿದೆ ಸ್ವಹೀಹ್ ಮುಸ್ಲಿಂ ನ ಹದೀಸಿನ ಪದಗಳು ಈ ರೀತಿ ಇವೆ:

(أَنَّ عَائِشَةَ، أَخْبَرَتْهُ أَنَّ رَسُولَ اللَّهِ صلى الله عليه وسلم كَانَ يُصَلِّي ثَلاَثَ عَشْرَةَ رَكْعَةً بِرَكْعَتَيِ الْفَجْرِ.)

'ಪ್ರವಾದಿ ಸ.ರವರು ಸುಬಹಿ ನಮಾಜಿನ ಎರಡು ರಕಆತ್ ನೊಂದಿಗೆ ಹದಿಮೂರು ರಕಆತ್ ನಿರ್ವಹಿಸುತಿದ್ದರು'[62] ಈ ಹೇಳಿದ ಎಲ್ಲಾ ಆಸಾರ್ ಗಳಲ್ಲಿ ಹನ್ನೊಂದು ರಕಅತ್ತಿನ ವಿಷಯವೇ ಬಂದಿರುವುದು ಮತ್ತು ಆಯಿಶಾ ರ. ರವರ ಹೊರತು ಬಾಕಿ ಎಲ್ಲಾ ಖಿಯಾಮು ರಮಳಾನ್ , ತರಾವೀಹ್ ನ ಪರ ಅನುಗುಣವಾಗಿಯೆ ಬಂದಿರುವುದು ಅಲ್ಲದೇ ಮುತಲಕ್ ತಹಜ್ಜುದ್ ನ ವಿಷಯವಾಗಿಯೂ ಸ್ವಹೀಹ್ ಬುಖಾರಿ, ಸ್ವಹೀಹ್ ಮುಸ್ಲಿಂ ಮತ್ತು ಅಬೂ ದಾವೂದ್ ನಲ್ಲಿ ಎಂಟು ರಕಆತ್ ಹಾಗೂ ವಿತರಿನ ವಿಷಯಗಳೇ ನೋಡಲು ಸಾದ್ಯವಾಗುತ್ತದೆ ಹೊರತು ಹೆಚ್ಚು ನಮಾಝಿನ ಬಗ್ಗೆ ಅಲ್ಲ.

ಇನ್ನು ಎಂಟು ರಕಅತ್ತಿನೊಂದಿಗೆ ಐದು ವಿತ್ರ್ ನೊಂದಿಗೆ ಹದಿಮೂರು ರಕಆತ್ ಅಥವಾ ಇಶಾ ನ ಕೊನೆಯ ಎರಡು ರಕಆತ್ ಅಥವಾ ಸುಬಹಿಯ ಮೊದಲ ಎರಡು ಸುನ್ನತ್ ನೊಂದಿಗೆ ಹನ್ನೆರಡು ಅಥವಾ ಇವುಗಳಲ್ಲಿಯ ಯಾವುದಾದರೊಂದು ಸುನ್ನತ್ ಸೇರಿಸಿ ಹತ್ತು ರಕಆತ್ ಮತ್ತು ಮೂರು ರಕಆತ್ ವಿತ್ರಿನ ವಿಷಯ ಹೇಳಿರುವುದಾಗಿ ನೋಡಲು ಸಾದ್ಯವಾಗುತ್ತದೆ.[63]

ಹನ್ನೊಂದು ರಕಅತ್ತಿನ ಗಣನೆಯ ಹಿನ್ನಲೆ:

ಹಿಂದೆ ತಿಳಿಸಿದ ವಿಷಯಗಳು ವಿವರವಾಗಿ ತಿಳಿದಾಗ ಮನದಟ್ಟಾಗಿದ್ದೇನೆಂದರೆ ತರಾವೀಹ್ ನಮಾಝ್, ಖಿಯಾಮುಲ್ಲೈಲ್, ಖಿಯಾಮು ರಮಳಾನಿನ ವಿತ್ರ್ ನೊಂದಿಗೆ ಹನ್ನೊಂದು ರಕಅತ್ತೇ ಸರಿಯಾಗಿರುವುದೆಂದು ಹೀಗಿರುವಾಗ ಈ ಹನ್ನೊಂದು ರಕಅತಿನ

---

[62] ಟಿಪ್ಪಣಿ 61

[63] ತುಹ್ಫತುಲ್ ಅಹ್ವಝ್ –3/524–527

ಗಣನೆಯ ಹಿನ್ನಲೆ ಏನು? ಈ ವಿಷಯದಲ್ಲಿ ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ ರಹಿಮಹುಮುಲ್ಲಾಹ್ ಫತಹುಲ್ ಬಾರಿಯಲ್ಲಿ ಬರೆಯುತ್ತಾರೆ:

'ಹನ್ನೊಂದಕಿಂತ ಹೆಚ್ಚು ನಿರ್ವಹಿಸಬಾರದೆನ್ನು ಹಿನ್ನಲೆ ಯಾತಾರ್ಥದಲ್ಲಿ ತಹಜ್ಜುದ್ ನಮಾಝ್ ಮತ್ತು ವಿತ್ರ್ ಎರಡೂ ನಿಶಾ ಪ್ರಾರ್ಥಣೆಗಳ್ಳಲ್ಲಿ ಸೇರಿದ್ದಾಗಿವೆ ಮತ್ತು ಳುಹರಿನ ನಾಲ್ಕು ರಕಅತ್, ಅಸರಿನ ನಾಲ್ಕು ರಕಆತ್ ಮತ್ತು ಮಗ್ರಿಬ್ ನ ಎಲ್ಲಾ ನಮಾಝ್ ಸೇರಿಸಿದರೆ ಅದು ದಿವಸದ ವಿತ್ರ್ ಆಗಿದೆ ಹೀಗಿರುವಾಗ ಮೊತ್ತ ಮತ್ತು ಏಕತ್ವದ ರೂಪದಲ್ಲಿ ರಾತ್ರಿಯ ನಮಾಝ್ ಹಗಲ ನಮಾಝಿನಂತೆ ಆಗಬೇಕು ಕೆಲವು ವರದಿ ಗಳಲ್ಲಿ ಹದಿಮೂರು ತಕಅತ್ ಎಂದೂ ಬಂದಿರುವುದನ್ನು ನೋಡಿದರೆ ಹಗಲ ನಮಾಝಿನ ಒಟ್ಟಿಗೆ ಸುಬಹಿ ನಮಾಝಿನ ಎರಡು ರಕಆತ್ ಸೇರಿಸಿಕೊಂಡರೆ ಹನ್ನೊಂದು ರಕಆತ್ ಆಗುತ್ತದೆ ಹಗಲಿನ ಹಿಂದಿರು ರಾತ್ರಿಯ ನಮಝಿನ ಸಮಾನತೆಗೆ ಎರಡು ಸುಬಹಿ ನಮಾಝಿನ ರಕಆತ್ ಸೇರಿಸಿ ಕೊಂಡರೆ ಹದಿಮೂರು ರಕಅತ್ತಾಗುವುದು. ಅಂದರೆ ನಂತರದ ನಮಾಝುಗಳಲ್ಲಿ ಅದೂ ಕೂಡ ಹಗಲ ನಮಾಝಿನ ಲೆಕ್ಕಕ್ಕೇ ಸೇರುತ್ತದೆ ಇದಾಗಿದೆ ನನಗೆ ವ್ಯಕ್ತವಾಗಿರುವುದು.[64]

ಇಪ್ಪತ್ತು ರಕಆತ್ ತರಾವೀಹ್ ನ ನಿಜಸ್ಥಿತಿ:

ಹಿಂದಿನ ವಿಷಯಗಳು ವಿವರವಾಗಿ ತಿಳಿದಾಗ ಮನದಟ್ಟಾಗಿದ್ದೇನೆಂದರೆ ತರಾವೀಹ್ ನಮಾಝ್, ಖಿಯಾಮುಲ್ಲೈಲ್, ಖಿಯಾಮು ರಮಳಾನಿನ ವಿತ್ರ್ ನೊಂದಿಗೆ ಹನ್ನೊಂದು ರಕಅತ್ತೇ ಸುನ್ನತ್ತಾಗಿರುವುದೆಂದಾಗಿದೆ.

ಈಗ ಇಪ್ಪತ್ತು ರಕಅತ್ತಿನ ಬಗ್ಗೆ ಬಂದಂತಹ ಹದೀಸ್ ಮತ್ತು ಆಸಾರ್‌ಗಳಲ್ಲಿ 20 ರಕಆತ್ ತರಾವೀಹ್ ನಮಾಝ್ ಎಂದು ಸ್ಥಿರವಾಗಿರುವುದರ ಬಗ್ಗೆ, ಇಬ್ನ್ ಅಬ್ಬಾಸ ರ. ರವರಿಂದ ವರದಿಯಾದಂತಹಾ ಮರ್ಫೂಅ ಆದ ಹದೀಸ್ ಮುಸನ್ನಿಫ್ ಇಬ್ನ್ ಅಬೀ ಶೈಬಾ , ಮುಅಜಮುತ್ತಬ್ರಾನಿ ಕಬೀರ್, ಸುನನುಲ್ ಕುಬ್ರಾ ಬೈಹಕೀ, ಮುಸ್ನದ್ ಅಬ್ದ್ ಇಬ್ನ್ ಕಶೀ, ಮತ್ತು ಮುಅಜಮ್ ಬಗವೀಯಲ್ಲಿ ಅವರು ವಿವರಿಸುತ್ತಾರೆ:

(أَنَّ رَسُولَ اللَّهِ صَلَّى اللهُ عَلَيْهِ وَسَلَّمَ كَانَ يُصَلِّي فِي رَمَضَانَ عِشْرِينَ رَكْعَةً وَالْوِتْرَ)

[64] ಫತುಹುಲ್ ಬಾರಿ–3/21

‘ಪ್ರವಾದಿ ಸ.ರವರು ರಮದಾನಿನಲ್ಲಿ ವಿತರಿನ ಹೊರತು ಇಪ್ಪತ್ತು ರಕಅತ್ (ತರಾವೀಹ್)ನಮಾಝ್ ನಿರ್ವಹಿಸಿರುವರು’.[65]

ಇಪ್ಪತು ರಕತ್ತಿನ ಬಗ್ಗೆ ಇರುವ ಈ ಒಂದೇ ಹದೀಸ್ ಆಗಿರುತ್ತದೆ ಅಲ್ಲದೇ ಬೇರೆಯಾವ ಹದೀಸ್ ಪ್ರವಾದಿ ಸ.ರು ಇಪ್ಪತ್ತು ರಕಅತ್ ತರಾವೀಹ್ ನಮಾಜು ನಿರ್ವಹಿಸಿದ್ದಾಗಿ ಬಂದಲ್ಲಿ ಹೊರತು ಕೆಲವು ಸ್ವಹಾಬರ ಆಸಾರಿನಿಂದಿರುವ ಹದೀಸ್ ಗಳಿವೆ ಅವುಗಳನ್ನು ನಾವು ಮುಂದೆ ವಿವರಿಸುವೆವು. ಈ ಇಪ್ಪತ್ತು ರಕಅತ್ತಿನ ಹದೀಸ್ನ ಶ್ರಂಖಲೆ(ಸನದ್) ನ ಬಗ್ಗೆ ಅಹ್ಲುಲ್ ಇಲ್ಮ್ ನ ಉದ್ಧರಣೆ ಮತ್ತು ಮಾತುಗಳನ್ನು ನಾಮು ಮೊದಲು ತಿಳಿಯೋಣ.

قال الحافظ الزيلعي في نصب الراية : وهو معلول بابن أبي شيبة إبراهيم بن عثمان جد الإمام أبي بكر بن أبي شيبة ، وهو متفق على ضعفه ، ولينه ابن عدي في الكامل ، ثم إنه مخالف للحديث الصحيح عن أبي سلمة بن عبد الرحمن : أنه سأل عائشة – رضي الله عنها – كيف كانت صلاة رسول الله – صلى الله عليه وسلم – في رمضان؟ قالت " مَا كَانَ يَزِيدُ فِي رَمَضَانَ وَلاَ فِي غَيْرِهِ عَلَى إِحْدَى عَشْرَةَ رَكْعَةً ، . الحديث ، انتهى كلام الزيلعي .

1. ಕಿತಾಬು "ನಸಬುರ್ರಾಯ ಫೀ ತಕ್ರೀಜ್ ಅಹಾದೀಸುಲ್ ಹಿದಾಯಃ" ದಲ್ಲಿ ಮಅರೂಫ್, ಮಶ್ಹೂರ್ ಅಲ್ಲಾಮ ಝ್ಯುಲಯೀ ಬರೆಯುತ್ತಾರೆ ‘ ಈ ವರದಿ ಇಮಾಮ್ ಅಬೂಬಕ್ಕರ್ ಇಬ್ನ್ ಅಬೀ ಶೈಬಾ ರ ಅಜ್ಜ ಅಬೂ ಶೈಬಾ ಇಬ್ರಾಹೀಮ್ ಇಬ್ನ್ ಉಸ್ಮಾನ್ ರ ಕಾರಣ ಮಅಲೂಲ್(ನೂನ್ಯತೆ) ಆಗಿರುತ್ತದೆ. ಇದು ಭಲಹೀನತೆ ಯಾಗಿದೆಯೆಂದು ಎಲ್ಲಾ ಮುಹದ್ದಿಸರ ಏಕ ಅಭಿಪ್ರಾಯವಿದೆ ಮತ್ತು ಇಬ್ನ್ ಅದೀ ತನ್ನ "ಅಲ್ ಕಾಮಿಲ್" ನಲ್ಲಿ ಲೀನ್(ಆಶಕ್ತತೆ) ಗೆ ಒಳಪಟ್ಟ ಹದೀಸೆಂದಿದ್ದಾರೆ ಹಾಗೂ ಈ ಉಲ್ಲೇಖ ಆ ಸ್ವಹೀಹ್ ಹದೀಸಿ(ಹನ್ನೊಂದು ರಕಅತ್ತಿ)ನ ವಿರುದ್ಧವೂ ಆಗಿದೆ

---

[65] ತುಫ್ಹತುಲ್ ಅಹ್ವಝ್ –3/529

ಅದನ್ನವರು ಅಬೂ ಸಲಮ ಬಿನ್ ಅಬ್ದುಲ್ ರಹ್ಮಾನ್ ರಹಿಮಹುಲ್ಲಾಹ್ ರ ಮಾರ್ಗದಿಂದ ಆಯಿಶಾ ರ.ರವರಿಂದ ಉಲ್ಲೇಖಿತ ಹದೀಸ್: 'ಪ್ರವಾಸಿ ಸ. ರಮಳಾನಿನಲ್ಲೋ ಇತರ ದಿವಸಗಲಲ್ಲೋ ಹನ್ನೊಂದು ರಕಅತ್ ಗಿಂತ ಹೇಚ್ಚು ನಿರ್ವಹಿಸುತ್ತಿರಲಿಲ್ಲ. ಎನ್ನುವ ಹದೀಸ್ ಅದನ್ನು ನಾವು ತರಾವೀಹ್ ನಮಾಝಿನ ರಕಅತ್ತಿನ ಗಣನೆಗಾಗಿ ಪ್ರಥಮ ಹದೀಸಾಗಿ ತಂತಿರುವುನ್ನು ನಕಲು ಮಾಡಿರುವರು[66]

وقال النيموي في تعليق آثار السنن : وقد أخرجه عبد بن حميد الكشي في مسنده والبغوي في معجمه ، والطبراني في معجمه الكبير والبيهقي في سننه ، كلهم من طريق أبي شيبة إبراهيم بن عثمان جد الإمام أبي بكر بن أبي شيبة وهو ضعيف ، قال البيهقي بعده ما أخرجه : انفرد به أبو شيبة إبراهيم بن عثمان العبسي الكوفي وهو ضعيف ، انتهى .

2. ಇದೇ ರೀತಿ ಹನಫೀ ಆಲಿಂ ಆದ ಇನ್ನೊಬ್ಬರು ಮೌಲಾನ ಶೌಖ್ ನಮವೀ ತನ್ನ ಕಿತಾಬು "ಆಸಾರು ಸುನನ್" ನ ಟಿಪ್ಪಣಿಯಲ್ಲಿ ಅಬೂ ಶೈಬಾ ಬಿನ್ ಇಬ್ರಾಹೀಂ ಳಯೀಫ್ ಆಗಿದ್ದಾರೆ ಇಮಾಮ್ ಬೈಹಕೀ ಈ ವರದಿಯನ್ನು ಬರೆಯುತ್ತಾ ಕೊನೆಯಲ್ಲಿ ಅಬೂ ಶೈಬಾ ಬಿನ್ ಇಬ್ರಾಹೀಂ ಬಿನ್ ಉಸ್ಮಾನ್ ಅಲ್ ಅಬಸೀ ಕೂಫೀ ಇದರಲ್ಲಿ ಒಬ್ಬೊಂಟಿಗರಾಗಿದ್ದಾರೆ ಮತ್ತು ಳಯೀಫ್ ಆಗಿರುತ್ತಾರೆ ಎಂದು ಬರೆದಿರುವರು.

وقال المزي في تهذيب الكمال : قال أحمد ويحي وأبو داود : ضعيف ، وقال يحي أيضا ليس بثقة ، وقال النسائي والدولابي : متروك الحديث وقال أبو [ص 446] :حاتم : ضعيف الحديث سكتوا عنه ، وقال صالح : ضعيف لا يكتب حديثه . ثم قال المزي ومن مناكيره حديث : أنه –صلى الله عليه

[66] ನೋಡಿರಿ: ನಸ್ಬುರ್ರಾಯ, ತುಹ್ಫತುಲ್ ಅಹ್ವಝ್-3/529

وسلم- كان يصلي في رمضان عشرين ركعة ، انتهى . وهكذا في الميزان ، وقال الحافظ في التقريب : متروك الحديث ، انتهى كلام النيموي .

ಮತ್ತು "ತಹ್ಝೀಬುಲ್" ಕಮಾಲ್ ನಲ್ಲಿ ಮುಝ್ಝೀ; ಇಮಾಮ್ ಅಹ್ಮದ್, ಯಹ್ಯಾ ಮತ್ತು ಇಬ್ನ ದಾವೂದ್ ರು (ಅಬೂಶ್ಯಬಾ) ಳಯೀಫಾಗಿರುವರು ಎಂದು ಹೇಳಿರುವರು. ಮತ್ತು ಯಹ್ಯಾ ಇವರು ಸಿಕತಿಗೆ ಅರ್ಹರಲ್ಲ ಎಂದೂ ಹೇಳಿರುವರು, ಇಮಾಮ್ ನಸಾಯೀ ಮತ್ತು ದೋಲಾಬೀ ಇವರು ಮತ್ರೂಕುಲ್ ಹದೀಸ್ ಆಗರಿರುವರೆಂದು ಹೇಳಿರುವರು, ಅಬೂ ಹಾತಿಮ್ 'ಇವರು ಹದೀಸ ವರದಿಮಾಡುವಲ್ಲಿ ಬಲಹೀಣರೂ ಅಶಕ್ತರೂ ಆಗಿರುವರು ಮುಹದ್ದೀಸೀನರು ಇವರಿಂದ ಹದೀಸುಗಳನ್ನು ವರದಿ ಮಾಡುವುದರಿಂದ ತಟಸ್ಥರಾಗಿರುತಿದ್ದರು'. ಎಂದು ಹೇಳುತ್ತಾರೆ. ಸ್ವಾಲಿಹ್ ಹೇಳತ್ತಾರೆ ಇವರು ಬಲಹೀನರಾಗಿರುವರು ಇವರಿಂದ ಉಲ್ಲೇಖಿತ ಹದೀಸ್‌ಗಳನ್ನು ವರದಿ ಮಾಡಲಾಗುತಿರಲಿಲ್ಲ. ಮತ್ತು ಮುಂದುವರಿಯುತ್ತಾ ಮುಝ್ಝೀ ಹೇಳುತ್ತಾರೆ ಪ್ರವಾದಿ ಸ.ರವರು ಇಪ್ಪತ್ತು ರಕಆತ್ ನಿರ್ವಹಿಸಿರುವರೆನ್ನುವುದು ಇವರ ಮುಂಕರ್ ಹದೀಸುಗಳಲೊಂದಾಗೆದೆ. ಇದೇ ರೀತಿ ಮೀಝಾನುಲ್ ಇಅತಿದಾಲ್ ನಲ್ಲಿ ಝಹಬೀ ಸಹಾ ಹೇಳೀದ್ದಾರೆ.[67]

ತಕ್ರೀಬ್ ಅತ್ತಹ್ಝೀಬ್ ನಲ್ಲಿ ಹಾಫಿಳ್ ಇಬ್ನ್ ಹಜರ್ ರಹಿಮಹುಮುಲ್ಲಾಹ್ ಇವರನ್ನು ಮತ್ರೂಕುಲ್ ಹದೀಸ್ ಅಂದಿದ್ದಾರೆ[68] ಅಲ್ಲಾಮ ಝ್ಯುಲಯೀ ನಸಬುರ್ರಾಯ ದಲ್ಲಿ ನಕಲು ಮಾಡಿರಿವ ನಂತರ ದಿಂದ ಹಾಫಿಳ್ ಇಬ್ನ್ ಹಜರ್ ರವರ ಮಾತಿನ ವರೆಗಿರುವ ಎಲ್ಲಾ ಮಾತುಗಳನ್ನು ಮೌಲಾನ ಶೌಕ್ ಅನ್ನಮವೀ ತನ್ನ ಆಸಾರು ಸುನನಿನಲ್ಲಿ ಸಹಾ ನಕಲು ಮಾಡಿರುವರು.

وقال الشيخ ابن الهمام في فتح القدير بعد ذكر هذا الحديث : ضعيف بأبي شيبة إبراهيم بن عثمان جد الإمام أبي بكر بن أبي شيبة ، متفق على ضعفه مع مخالفته للصحيح ، انتهى .

---

[67] ತುಹ್ಫತುಲ್ ಆಹ್ವಝ್ –3/529

[68] ತಕ್ರೀಬ್ ಪು: 65

3. ಮೂರನೇ ಹನಫೀ ಆಲಿಮ್ ಆದ ಇನ್ನೊಬ್ಬರು ತನ್ನ ಫತಹುಲ್ ಕದೀರ್ ನ ಶರಹಿನಲ್ಲಿ ಇದನ್ನು ನಕಲು ಮಾಡಿದ ನಂತರ ಬರೆದಿರುವುದೇನೆಂದರೆ ಅಬೂ ಶೈಬಾರ ಕಾರಣ ಈ ಹದೀಸ್ ಳಯೀಫ್(ಬಲಹೀಣತೆಗೆ) ಒಳಪಟ್ಟಿದೆ ಮತು ಎಲ್ಲಾ ಮುಹದ್ದಿಸೀನರು ಈ ವಿಷಯದ(ಳಯೀಫ್ ಎನ್ನುವ)ಲ್ಲಿ ಮುತ್ತಫಿಕ್ ಆಗಿರುವರು ಮತ್ತು ಇದು ಸ್ವಹೀಹ್ ಹದೀಸಿನ ವಿರಧ್ಧವಾದದ್ದೂ ಆಗಿರುತ್ತದೆ.[69]

وقال العيني في عمدة القاري بعد ذكر هذا الحديث : وأبو شيبة هو إبراهيم بن عثمان العبسي الكوفي قاضي واسط جد أبي بكر بن أبي شيبة كذبه شعبة ، وضعفه أحمد وابن معين والبخاري والنسائي وغيرهم . وأورد له ابن عدي هذا الحديث في الكامل في مناكيره ، انتهى .

4. ನಾಲ್ಕನೇ ಮಹಾನ್ ಪಂಡಿತರಾದ ಅಲ್ಲಾಮ ಐನೀ ಹನಫೀ ಬುಖಾರಿಯ ಶರಹ್ ಉಮ್ದತುಲ್ ಖಾರಿಯಲ್ಲಿ ಈ ಹದೀಸಿನ ಬಗ್ಗೆ ಮಾತು ಮುಂದುವರಿಸುತ್ತಾ ಹೇಳುತ್ತಾರೆ: ಇಮಾಮ್ ಇಬ್ನ್ ಅಬೀ ಶೈಬಾರ ಅಜ್ಜ ಖಾಝೀ ವಾಸಿತ್ ಅಬೂ ಶೈಬಾ ರನ್ನು ಇಮಾಮ್ ಶುಆಬ ರು ಸಳ್ಳನಾಗಿಸಿದ್ದಾರೆ, ಮತ್ತು ಇಮಾಮ್ ಅಹ್ಮದ್, ಇಬ್ನ್ ಮುಆಯೀನ್ಮ ಬುಖಾರಿ ಹಾಗೂ ನಸಾಯೀ ಅವರನ್ನು (ಳಯೀಫ್) ಬಲಹೀನರೆಂದಿದ್ದಾರೆ ಮತ್ತು ಇಮಾಮ್ ಇಬ್ನ್ ಅದೀ ಅವರ ಉದ್ಧರಿಸಿದ ವರದಿಯನ್ನು ತನ್ನ ಕಾಮಿಲ್ ನಲ್ಲಿ ಮುಂಕರ್(ವಿರೋಧ) ಎಂದಿದ್ದಾರೆ.[70]

5,6,7. ಈ ಹದೀಸನ್ನು ಮೌಲಾನ ಅಬ್ದುಲ್ ಹಯ್ ಲಕ್ನವೀ, ಮೌಲಾನ ಅನ್ವರ್ ಷಾ ಕಸ್ಮೀರೀ, ಮೌಲಾನ ಮೊಹಮ್ಮದ್ ಝಕರಿಯಾ ಕಾಂದೇವಲಿ ಯಂತಹಾ ಉಲಮಾವು ಹನಫೀಯರು ಇದನ್ನು (ಳಯೀಫ್) ಬಲಹೀನರೆಂದಿದ್ದಾರೆ, ಇಮಾಮ್ ಅಹ್ಮದ್, ಇಬ್ನ್ ಮುಯೀನ್, ಇಮಾಮ್ ಬುಖಾರಿ, ನಸಾಯೀ, ಇಮಾಮ್ ಸುಯೂತೀ,(ಅಲ್ ಹಾವಿ

---

69 ತುಹ್ಫತುಲ್ ಅಹ್ವಝ್ ‒3/529‒530.
70 ಉಮ್ದತುಲ್ ಖಾರಿ‒2/11/128.

ಲಿಲ್ ಫತಾವಃ -2/73) ಮತ್ತು ಇಬ್ನ್ ಹಜರುಲ್ ಹ್ಯತಮೀ ಯವರು ಇದನ್ನು (ಳಯೀಫ್) ಬಲಹೀನ ಎಂದ ಕಾರಣದಿಂದ.[71]

ತುಹ್ಫತುಲ್ ಅಹ್ವಝಿ ನಲ್ಲಿ ಅಲ್ಲಾಮ ಅಬ್ದುರ್ರಹಮಾನ್ ಮುಬಾರಕ್ ಪುರಿ ಈ ಹದೀಸ್ ಘನವಾದ ಬಲಹೀನತೆಯನ್ನು ಹೊಂದಿದೆ ಇದನ್ನು ಪುರಾವೆಗೆ ತೆಗುದುಕೊಳ್ಳಲು ಅರ್ಹವಲ್ಲ ಯಾಕೆಂದರೆ ಇದು ಪುರಾವೆಗೆ ಯೋಗ್ಯವೇ ಅಲ್ಲ ಎಂದಿದ್ದಾರೆ.[72]

ಆಸಾರು ಸ್ವಹಾಬರವರ ಶೃಂಖಲೆಯ ಘನತೆ:

ಇಪ್ಪತ್ತು ರಕಅತ್ತಿನ ಹದೀಸಿನ ಬಗ್ಗೆ ಇರುವ ಎಲ್ಲಾ ವರದಿಯ ಮಹಿಮೆಯು ತಮ್ಮ ಅರಿವಿಗೆ ಬಂದಿದ್ದೂ ಅದನ್ನು ತಾವುಗಳು ಸ್ವತಃ ಸ್ವೀಕರಿಸಲೂ ಪ್ರಮಾಣಕ್ಕೆ ತೆಗೆದುಕೊಳ್ಳಲೂ ಸಾದ್ಯವಿಲ್ಲವೆಂದೂ ಅರಿತಿರುವಿರಿ. ಇನ್ನು ಸ್ವಹಾಬತ್ತಿನಿಂದ ವರದಿಯಾದ ಆಸಾರುಗಳಿಂದ ಬಂದ (ಮೌಕೂಫ್ ಆದ) ವರದಿಯ ಬಗ್ಗ ಅವುಗಳಲ್ಲಿ ಉಮರುಲ್ ಫಾರೂಕ್ ರವರಿಂದ ಅಸರ್(ನಾಲ್ಕನೇ ಹದೀಸಿ ರೀತಿಯಲ್ಲಿ) ಹೇಳಿರುವೆವು ಅದರಲ್ಲಿ ಉಬಯ್ಯ್ ಇಬ್ನ್ ಕಅಬ್ ಮತ್ತು ತಮೀಮದ್ದಾರಿಯವರಿಗೆ ಆಜ್ಞೆ ಇತ್ತಿರುವುದು ಜನರಿಗಾಗಿ ಹನ್ನೊಂದು ರಕಅತ್ ನಮಾಝ್ ನಿರ್ವಹಿಸ ಬೇಕೆಂದೂ ಇಮಾಮ್ ಮಾಲಿಕ್ ಅದನ್ನು ವರದಿ ಮಾಡಿರುವುದಾಗಿದೆ ಮುಹದ್ದಿಸೀನರ ಬಳಿ ಸ್ವಹೀಹಾದ ಶೃಂಖಲೆಯಲ್ಲಿರುವುದೂ ಅದಾಗಿದೆ.

ಒಂದನೇ ಫಾರೂಕೀ ಅಸರ್:

ಈ ಮೇಲೆಹೇಳಿದ ಹನ್ನೊಂದು ರಕಅತ್ ಉಮರುಲ್ ಫಾರೂಕ್.ರ. ರವರಿಂದ ಸ್ವಹೀಹ್ ಸನದಿನಿಂದ ಸಾಬೀತಾಗಿ ಬಂದಿರುವ ಹದೀಸಾಗಿದೆ ಮತ್ತು ಮುಸನ್ನಿಫ್ ಅಬ್ದುಲ್ ರಝಾಕ್ ನಲ್ಲಿರುವ ಅಸರ್ (ಅದರಲ್ಲಿ ಇಪ್ಪತೊಂದು ರಕಅತ್ ಎಂದು ಹೇಳಾದ) ಸೂಕ್ಷಿಸಲಾಗದ ಮತ್ತು ವರದಿಗಾರರ ತೋರಿಕೆಯಾಗಿದೆ[73] ಮತ್ತು ಅಲ್ಲಾಮ

[71] ಉಂದತುಲ್ ಖಾರಿ ಮತ್ತು ಸ್ವಲಾತುತರಾವೀಹ್ ಪುಟ:36-37 ಉರ್ದು, ಸ್ವಲಾತುತರಾವೀಹ್ ಅರಬಿ. ಪುಟ:19-20

[72] ತುಹ್ಫತುಲ್ ಅಹ್ವಝಿ -3/529

[73] ಫತಹುಲ್ ಬಾರಿ-4/253, ತುಹ್ಫಾ-3/526-427, ಸ್ವಲಾತುತರಾವೀಹ್ ಪು:62-63 ಉರ್ದು -47 ಅರಬಿ.

ನಾಸಿರುದ್ದೀನ್ ಅಲ್ಬಾನಿ ಹನ್ನೊಂದು ರಕಅತ್ತಿನ ಹದೀಸನ ವಿರುದ್ಧವಾಗಿ ಮುಸನ್ನಿಫ್ ಅಬ್ದುಲ್ ರಝ್ಝಾಖ್ ರವರ ಇಪ್ಪತೊಂದು ರಕಅತ್ತಿನ ಹದೀಸ್ ತರಲು ಸಾದ್ಯವೇ ಇಲ್ಲ ಎಂದಿದ್ದಾರೆ ಇಬ್ನ್ ಹಜರ್ ಅಸ್ಕಲಾನಿ ಫತಹುಲ್ ಬಾರಿಯಲ್ಲಿ ಇದೇ ಮಾತನ್ನಾಡಿದ್ದಾರೆ ಮತ್ತು ಇದಕ್ಕೆ ಹಲವಾರು ಕಾರಣಗಳಿವೆ:

ಅದರಲ್ಲೊಂದು: ಇಪ್ಪತೊಂದರ ಪದ ತಪ್ಪು ಮತ್ತು (ವಹಂ) ಸ್ವಂತ ತೋರಿಕೆ ಫಲವಾಗಿದೆ. ಸ್ವಹೀಹ್ ಪದ ಹನ್ನೊಂದೇ ಆಗಿದೆ.

ಎರಡನೇಯದು: ಸಿಕತಾದ ವರದಿಗಾರರು ಹನ್ನೊಂದರ ಹದೀಸನ್ನೆ ಉದ್ಧರಿಸಿದ್ದಾರೆ.

ಮೂರನೇಯದು: ಇಪ್ಪತೊಂದನ್ನು ವರದಿಮಾಡುವಲ್ಲಿ ಅಬ್ದುಲ್ ರಝ್ಝಾಖ್ ಒಬ್ಬೊಂಟಿಗರಾಗಿದ್ದಾರೆ. ಅವರು ಜನಸಾಮಾನ್ಯರೆಡೆಯಲ್ಲಿ ಹೆಸರಾಂತ ಪಂಡಿತರೂ ಸಿಕತಾದ ವರದಿಮಾಡುವ ಮುಹದ್ದಿಸರೂ ಆಗಿ ಇರುವಂತ ವ್ಯಕ್ತಿಯಾಗಿದ್ದರೂ ಅವರ ಕೊನೆಯ ದಿನಗಳಲ್ಲಿ ದೃಷ್ಟಿದೋಶವಾಗಿರುವುದರಿಂದ ಅವರ ನೆನಪು ಕ್ಷೀಣವಾಗಿದ್ದವು, ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ ತನ್ನ ತಕ್ರೀಬ್ ನಲ್ಲಿ ಇದರ ಬಗ್ಗೆ ವಿವರಿಸಿದ್ದಾರೆ. ಮತ್ತು ಇಬ್ನು ಸ್ವಲಾಹ್ ಅವರ ಮುಕದ್ದಮ ಉಲೂಮುಲ್ ಹದೀಸ್ ನ ಪುಟ 407 ರಲ್ಲಿ ಇಮಾಮ್ ಅಹ್ಮದ್ ಇಬ್ನ್ ಹಂಬಲ್ ರ ಮಾತನ್ನು (ಇಮಾಮ್ ಅಬ್ದುಲ್ ರಝ್ಝಾಖ್ ಅವರ ಕೊನೆಯ ದಿನಗಳಲ್ಲಿ ದೃಷ್ಠಿಹೀಣರಾಗಿದ್ದರು ಎಂದು)ನಕಲು ಮಾಡಿರುವರು ಹೇಳಿಕೊಡುವವರ ಮಾತನ್ನು ಸ್ವೀಕರಿಸುತಿದ್ದರು ಆದರೆ ಅವರ ದೃಷ್ಟಿಕ್ಷೀಣವಾದ ಮೇಲೆ ಯಾರು ಅವರಿಂದ ವರದಿ ಮಾಡುತ್ತಾರೋ ಅವರ ವರದಿಯನ್ನು ಪರಿಗಣನೆಗೆ ತೆಗೆದುಕೊಳಲಾಗುತ್ತಿರಲಿಲ್ಲ. ಅವರ ಕೊನೆಯ ದಿನಗಳಲ್ಲಿ ಅವರಿಂದ ವರದಿಮಾಡಿದ ವರದಿ 'ನಳ್‌ರ್' ನಿರೀಕ್ಷೆಯಲ್ಲಿ ಮತ್ತು 'ಮುಖದಿಮತುಲ್ ಪಸಲ್' ಮುನ್ನುಡಿಯಲ್ಲಿ ವಿವರಿಸಲಾಗಿತ್ತು ಎಂದು ಇಮಾಮ್ ನಸಾಯೀ ಹೇಳುತಿದ್ದರು. ಯಾರ ವರದಿ ಸ್ಮರಣಶಕ್ತಿ ಕ್ಷೀಣವಾಗುವುದೋ ಅವರ ಶಿಶ್ಯರು ಪ್ರಸ್ತುತ ಸ್ಥಿಯಲ್ಲಿರುವುದಕ್ಕಿಂತ ಮುಂಚೆ ಅವರಿಂದ ವರದಿ ಮಾಡಿರುವ ಉಲ್ಲೇಖಗಳನ್ನು ಸ್ವೀಕರಿಸಲಾಗುವುದೇ ಹೊರತು ನಂತರ ಮಾಡಿರುವ ವರದಿಗಳನ್ನು

ಸಂಶಯಾತೀತವಾಗಿಯೇ ನೋಡಲ್ಪಡುವುದು ಪ್ರಸ್ತುತ ವರದಿಗಳಲ್ಲಿ ಷುಝೂಝ್ ಮತ್ತು ಮುಖಾಲಿಫತ್ ಇಲ್ಲದೇ ಇದ್ದರೂ ಸರಿ.[74]

ಎರಡನೇ ಫಾರೂಕೀ ಅಸರ್:

ಉಮರ್ ಇಬ್ನುಲ್ ಖತ್ತಾಬ್ ರ.ರವರ ಬಗ್ಗೆ ಮುಸನ್ನಿಫ್ ಇಬ್ನ್ ಅಬೀ ಶೈಬಾ ದಲ್ಲಿ ಯಾಹ್ಯ ಇಬ್ನ್ ಸಯೀದ್ ರಹಿಮಹುಲ್ಲಾರಿಂದ ವರದಿ ಯಾದ ಇನ್ನೊಂದು ಹದೀಸ್ ಇದೆ ಅದರಲ್ಲಿ ಅವರು ಹೇಳುತ್ತಾರೆ:

(أَنَّ عُمَرَ بنَ الخَطَّابِ أَمَرَ رَجُلا يُصَلِّي بِهِم عِشرِينَ رَكعَةً)

'ಒಬ್ಬನಿಗೆ ಉಮರ್ ಇಬ್ನುಲ್ ಖತ್ತಾಬ್ ರ.ರವರು ಜನರಿಗೆ ಇಪ್ಪತ್ತು ರಕಅತ್ (ತರಾವೀಹ್ ನಮಾಝ್ ಇಮಾಮಾಗಿ) ನಿರ್ವಹಿಸಲು ಆಜ್ಞೆಯಿತ್ತರು'[75]

ಪ್ರಸ್ತುತ ಅಸರಿನ ಬಗ್ಗೆ ಮೌಲಾನ ಶೌಕ್ ಅನಮವೀ ಇದರಲ್ಲಿರುವ ಶೃಂಖಲೆಯಲ್ಲಿರುವ ಯಾಹ್ಯಾ ಬಿನ್ ಸಯೀದ್ಅಲ್ ಅನ್ಸಾರಿ ಉಮರ್ ರಳಿಯಲ್ಲಾಹುವರನ್ನು ಕಂಡಿಲ್ಲ ಮತ್ತು ಇವರ ಮಾತಿಗೆ ಒತ್ತು ನೀಡುತ್ತಾ ಅಬ್ದುಲ್ ರಹ್ಮಾನ್ ಮುಬಾರಕ್ ಪುರಿ ತುಹ್ಫತುಲ್ ಅಹ್ವಝೀಯಲ್ಲಿ ಹೇಳುತ್ತಾರೆ:

قلت : الأمر كما قال النيموي، فهذا الأثر منقطع لا يصلح للاحتجاج ومع هذا فهو مخالف لما ثبت بسند صحيح عن عمر– رضي الله تعالى عنه– أنه أمر أبي بن كعب وتميما الداري أن يقوما للناس بإحدى عشرة ركعة ، أخرجه مالك في الموطأ . وقد تقدم ، وأيضا هو مخالف لما ثبت عن رسول الله –صلى الله عليه وسلم– بالحديث الصحيح

[74] ಅತ್ತಕ್ರೀಭ್ ಪುಟ:324, ಸ್ವಲಾತುತರಾವೀಹ್ ಪುಟ:141 ಉರ್ದು, ಪುಟ:47–49 ಅರಬಿ.
[75] ತುಹ್ಫತು ಅಹ್ವಝ್–3/528, ಸ್ವಲಾತು ತರಾವೀಹ್ ಪುಟ: 64

ಈ ಅಸರ್ ಶೃಂಖಲೆ ಕಳೆದುಕೊಂಡು(ಇಂಕಿತಾಅ) ಪ್ರಮಾಣಕ್ಕೆ ಸ್ವೀಕಾರವಲ್ಲ ಮಾತ್ರವಲ್ಲಿ ಇದಕ್ಕಿಂತ ಹಿಂದೆಯಿರುವ ಇಮಾಮ್ ಮಾಲಿಕರ ಮುಅತ್ತಾದಲ್ಲೂ ಇತರ ಹದೀಸ್ ಗ್ರಂಥಗಳಲ್ಲೂ ಉಬಯಿ ಇಬ್ನ್ ಕಅಬ ಮತ್ತು ತಮೀಮದ್ದಾರಿ ರ.ರವರಿಗೆ ಉಮರ್ ರ.ರವರು ಹನ್ನೊಂದು ರಕಆತ್(ತರಾವೀಹ್ ಜನರಿಗೆ ಇಮಾಮಾಗಿ) ನಿರ್ವಹಿಸಲು ಅಜ್ಞೆ ಇತ್ತಿದ್ದಾರೆ. ಈ ಹದೀಸಿಗೂ ವಿರುದ್ಧವಾಗಿದೆ ಯಾಕೆಂದರೆ ಇದು ಪ್ರವಾದಿ ಸ.ರವರ ಹನ್ನೊಂದು ರಕಅತ್ತನ್ನು ವಿರೋಧಿಸುತ್ತದೆ.[76]

ಮೂರನೇ ಅಸರ್:

ಮೂರನೇ ಅಸರ್ ಸಾಯಿಬ್ ಬಿನ್ಯಝೀದ್ ದರ ವರದಿ ಸುನನುಲ್ ಕುಬ್ರಾ ದಲ್ಲಿ ಮತ್ತು ಇತರ ಗ್ರಂಥಗಳಲ್ಲಿ ಯಝೀದ್ ಬಿನ್ ಖುಶೈಫಾ ರ ಮಾರ್ಗವಾಗಿ ಬಂದಿದೆ:

ಉಮರ್ ರ. ರವರ ಕಾಲದಲ್ಲಿ ಜನರು ಇಪ್ಪತ್ತು ರಕಆತ್ ತರಾವೀಹ್ ನಮಾಜು ನಿರ್ವಹಿಸುತಿದ್ದರು ಖಾರಿಗಳು ನೂರು ನೂರು ಆಯಾತ್ ಗಳನ್ನು ಆ ನಮಾಜಿನಲ್ಲಿ ಪಠಿಸುತಿದ್ದರು ಮತ್ತು ಉಸ್ಮಾನ್ ರ.ರವರ ಕಾಲದಲ್ಲಿ ಜನರು ಬಹಳದೀರ್ಘ ನಿಲ್ಲುವುದರಿಂದ ಕೋಲು ಮತ್ತ ಲಾಟಿಗಳ ಸಹಾಯಪಡೆಯುತಿದ್ದರು.[77] ಉಮ್ದತುಲ್ ಖಾರಿಯಲ್ಲಿ ನಸ್ಸಾಗಿ ಬಂದಿರುವುದರ ವಿಷಯದಲ್ಲಿ ಮೊದಲ ಖಲೀಫಾರ ಕಾಲದಲ್ಲಿ ಇದ್ದಂತೆಯೇ ಅಲೀ ರ.ರವರ ಕಾಲದಲ್ಲಿಯೂ ಹೀಗೇ ಇತ್ತು.[78] ಈ ಅಸರ್ ನಲ್ಲಿ ಬಂದಿರುವ ಹಾಗೆ ಉಸ್ಮಾನ್ ರ.ರವರ ಕಾಲದಲ್ಲೂ ಇತ್ತು ಎನ್ನುವ ಪದದ ಬಗ್ಗೆ ಶೈಖ್ ನಮವೀ ಹೇಳುತ್ತಾರೆ. ಇದು ಮುಝರಿಜ್ಎನ್ನುವುದಾಗಿದೆ ಇಮಾಮ್ ಬೈಹಕೀ ಯವರ ತಸ್ನೀಫಾನಲೆಲ್ಲಿಯೂ ಇದರ ಸುಳಿವು ಸಿಗುವುದಿಲ್ಲ ಮತ್ತು ಅಲ್ಲಾಮ ಮುಬಾರಕ್ ಪುರಿ ಮೌಲಾನ ನಮವೀಯವರ ಹೇಳಿರುವುದಕ್ಕೆ ಒತ್ತು ನೀಡಿರುವರು.[79]

[76] ಟಿಪ್ಪಣಿ 75

[77]ಫತಹುಲ್ ಬಾರಿ–4/253, ಸ್ವಲಾತುತರಾವೀಹ್–ಪು.49/61–62

[78] ಉಮ್ದತುಲ್ ಖಾರಿ–4/7/127.

[79] ತುಹ್ಫತು ಅಹ್ವಝ್–3/531,

ಇನ್ನು ಇದರ ಶೃಂಖಲೆಯ ಬಗ್ಗೆ ಬಹಳ ಶಕ್ತಿಯುತವಾಗಿ ಪ್ರದರ್ಶಿಸಿರುವರು ಬಾಹ್ಯವಾಗಿ ನೋಡಿದರೆ ಇದರ ಸನದ್(ಶೃಂಕಲೆ) ಸ್ವಹೀಹ್ ಆಗಿ ತೋರುತ್ತದೆ ಅಲ್ಲದೆ ಅಹಲುಲ್ ಇಲ್ಮಿನ ವಕ್ತಾರರು ಸ್ವಹೀಹ್ ಎಂದಿರುವರು.[80]

ಸೂಕ್ಷ್ಮತೆಯಿಂದ ನೋಡಿದರೆ ಈ ಅಸರ್ ಕ್ಷೀಣವಾದದ್ದಾಗಿರು ಹಲವಾರು ಕಾರ್ಯಗಳು ಮತ್ತು ನ್ಯೂನ್ಯತೆಗಳು ಇವೆ ಅಲದೇ ಅವು ಈ ಹದೀಸನ್ನ್ ಮುಂಕರಿನ ಪಟ್ಟಿಯಲ್ಲಿ ಸೇರಿಸುತ್ತಿವೆ.

ಪ್ರಥಮ ನ್ಯೂನ್ಯತೆ:

ಮೊದಲನೇಯ ನ್ಯೂನತೆ ಅಥವಾ ಅದರ ಕಾರಣ ಇಬ್ನ್ ಖುಶ್ಯಫಾ ಒಂದು ವೇಳೆ ಸಿಕತಿನ ಜನರ ಪಟ್ಟಿಯಲ್ಲಿ ಸೇರಿದರೂ ಇಮಾಮ್ ಅಹ್ಮದ್ ಇಬ್ನ್ ಹಂಬಲ್ ಇವರನ್ನು ಮುಂಕರುಲ್ ಹದೀಸ್ ಎಂದಿದ್ದಾರೆ, ಮೀಝಾನುಲ್ ಇಅತಿದಾಲಿನ್ನಲ್ಲಿ ಇಮಾಮ್ ಝುಹಬೀ ಇದನ್ನು ವಿವರಿಸಿರುವುದು ಅದರ ಮುತಕಲ್ಲಿಂ ಫೀಹಿ ವರದಿಗಾರಾಗುವಲ್ಲಿ ಪುಷ್ಟೀಕರಿಸುತ್ತದೆ. ಇಮಾಮ್ ಅಹ್ಮದರ ರ.ರವರ ಮಾತಿನಲ್ಲಿ ತಿಳಿಯುವುದೇನೆಂದರೆ ಕೆಲವೊಮ್ಮೆ ಇಂತಹಾ ವರದಿಮಾಡುವಲ್ಲಿ ಒಬ್ಬೊಂಟಿಗರಾಗಿರುತ್ತಾರೆ ಅಂತವರನ್ನು ಸಿಕತಿನ ವರದಿಗಾರರು ಅವರಿಂದ ವರದಿ ಮಾಡುವುದಿಲ್ಲ ಆದುದರಿಂದ ಇಂತಹ ವರದಿಗಾರರ ವರದಿಯನ್ನು ಇವರಿಗಿಂತ ಹೆಚು ಸಾಮರ್ಥ್ಯವಿರುವ ವರದಿಗಾರ ಮುಂದಿ ಇಂತವರನ್ನು ರದ್ದುಗೊಳಿಸಲಾಗುತ್ತದೆ ಈ ರೀತಿಯಲ್ಲಿ ಉಸೂಲುಲ್ ಹದೀಸಿನ ಆಧಾರದಲ್ಲಿ ಇಂತಹಾ ವರದಿಯನ್ನು 'ಷಾಝ್' ಎನ್ನಲಾಗುತ್ತದೆ.

ಮತ್ತು ಈ (ಇಪ್ಪತ್ತು ರಕಅತ್ತಿನ) ವರದಿಯಲ್ಲಿ ಎರಡು ವರದಿಗಾರರಿದ್ದಾರೆ ಸಾಯಿಬ್ ಇಬ್ನ್ ಯಝೀದ್ ರಿಂದ ಮೊಹಮ್ಮದ್ ಇಬ್ನ್ ಯೂಸುಫ್ ಮತ್ತು ಇಬ್ನ್ ಖಶ್ಯಫಾ ಇವರಿಬ್ಬರ ವರದಿ ಒಂದಕ್ಕೊಂದು ವಿರುದ್ಧವಾಗಿದೆ. ಮೊಹಮ್ಮದ್ ಯೂಸುಫ್ ಹನ್ನೊಂದು ರಕಅತ್ ನಿರ್ವಹಿಸಲು ಹೇಳಿದರೆ ಇಬ್ನ್ ಖುಶ್ಯಫ್ ಇಪ್ಪತ್ತೊಂದು ರಕಅತ್ ಮತ್ತು ಇಬ್ನ್ ಖುಶ್ಯಫರಿಗಿಂದ ಮೊಹಮ್ಮದ್ ಇಬ್ನ್ ಯೂಸುಫ್ ಸಿಕತ್ ಇರುವುದರಿಂದ ಇವರಿಬ್ಬರಲ್ಲಿ ಮೊಹಮ್ಮದ್ ಯೂಸುಫ್ ರವರ ವರದಿಗೆ ಪ್ರಧಾನ್ಯತೆ ಕೊಡಲಾಗುವುದು. ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ ಮೊಹಮ್ಮದ್ ಯುಸುಫ್ ಸಿಕತ್ ಸಬತ್ ಎಂದೂ

[80] ಉಮ್ದತುಲ್ ಖಾರಿ–4/7/127.

ಇಬ್ನ ಖುಶ್ಯಫಾ ಸಿಕತ್ ಎಂದೂ ವ್ಯತ್ಯಸ್ತ ರೀತಿಯಲ್ಲಿ ಹೇಳಿರುವುದರಿಂದ ಇಲ್ಲಿ ಹನ್ನೊಂದು ರಕಅತ್ತಿಗೇ ಪ್ರಥಮ ಪ್ರಧಾನ್ಯತೆ ಕೊಡಲಾಗಿದೆ ಇವು ಉಸೂಲುಲ್ ಹದೀಸಿನ ಪಾಂಡಿತ್ಯವಿರುವ ಯಾವೊಬ್ಬರಿಗೂ ತಿಳಿಯದೇ ಇಲ್ಲ.

ದ್ವೀತೀಯ ನ್ಯೂನ್ಯತೆ:

ಎರಡನೇಯದಾಗಿ ಈ ಅಸರನ್ನು ಕ್ಷೀಣವಾಗಿಸುವ ಇನ್ನೊಂದು ನ್ಯೂನತೆ ಅಥವಾ ಅದರ ಕಾರಣ ರಕಆತ್ತಿನ ಗಣನೆಯ ವಿಷಯದಲ್ಲಿರುವ ದೃಢತೆಯಲ್ಲಿ ಇಳ್ತಿರಾಬ್ ( ) ಆಗಿರುವುದಾಗಿದೆ. ಅವರು ಸಾಯಿಬ್ ಇಬ್ನ್ ಯಝೀದರಿಂದ ಕೆಲವೊಮ್ಮೆ ಹನ್ನೊಂದು ರಕಆತಿನ ಬಗ್ಗೆ ಮಾತನಾಡುತ್ತಾರೆ ಮತ್ತು ಕೆಲವೊಮ್ಮೆ ಇಪ್ಪತ್ತೊಂದು ರಕಆತ್ತಿನ ಬಗ್ಗೆ ಮಾತನಾಡುತ್ತಾರೆ ಅದರೊಂದಿಗೆ ನನ್ನ ಅಂದಾಜು ಎಂದು ಹೇಳುವ ಉಪಯೋಗ ಪದ ಇಬ್ನ್ ಖುಶ್ಯಫರ ಇಳ್ತಿರಾಬ್( ) ಗೆ ಪುರಾವೆಯಾಗಿಸುತ್ತದೆ. ವಿಷೇಶವಾಗಿ ಅವರಿಗೆ ಇದರ ಗಣನೆಯ ಬಗ್ಗೆ ದೃಢತೆಇಲ್ಲ ಆ ವಿಷಯ ಗುಮಾನಿಯಿಂದ ಹೇಳುತ್ತಿರುವುದಾಗಿದೆ. ಆದುದರಿಂದ ದೃಢತೆ ಇಲ್ಲದೇ ಇರುವುದರಿಂದ ಅಸರ್ ಪರಿಗಣನೆಯ ಅರ್ಹವನ್ನು ಕಳೆದುಕೊಳ್ಳುತ್ತದೆ. ಮತ್ತು ಈ ವರದಿಗಾರ ತನಗಿಂತ ಹೆಚ್ಚು ಸಿಕತ್ ಮತ್ತು ಜ್ಞಾಪಕ ಶಕ್ತಿಯಿರುವವರುನನ್ನು ವಿರುದ್ಧವಾಗಿಸುತ್ತಿರುವುದಾಗಿದೆ. ಹೀಗಿರುವಾಗ ಪ್ರಸ್ತುತ ಅಸರ್ ಪ್ರಮಾಣಕ್ಕೆ ಅರ್ಹವಾಗುದು ನಿರೀಕ್ಷೆಯ ಸ್ಥಾನದಲ್ಲಾಗಿರುತ್ತದೆ.

ತೃತೀಯ ನ್ಯೂನ್ಯತೆ:

ಮೊಹಮ್ಮದ್ ಇಬ್ನ್ ಯೂಸುಫ್ ಸಾಯಿಬ್ ಬಿನ್ ಯಜೀದರ ತಂಗಿಯ ಮಗನಾಗಿದ್ದಾರೆ. ಪ್ರಸ್ತುತ ಸಂಬಂಧ ಮತ್ತು ಸಾಮಿಪ್ಯದ ಕಾರಣ ತನ್ನ ಮಾವನ ವರದಿಗೆ ಇತರರ ವರದಿಗಿಂತ ಪ್ರಥಮ ಸ್ಥಾನವಾಗಿರುವುದು ಆದುದರಿಂದ ಯಾವ ಗಣನೆಯನ್ನು ಅವರು ವರದಿ ಮಾಡಿರುವರೋ ಅದಕ್ಕೆ ಪ್ರಧಾನ್ಯತೆ ಇರುವುದು ಅಲ್ಲದೇ ಈ ಅಸರ್ ಉಮ್ಮುಲ್ ಮೂಮಿನೀನ್ ಆಯಿಶಾ ರ.ರವರಿಂದ ಮರ್ಫೂಅ ಆದ ಹದೀಸನ್ನು ಪುಷ್ಟೀಕರಿಸುತ್ತದೆ ಆದಕಾರಣ ಇತರ ಬೇರೆ ಗಣನೆಯಲ್ಲಿರುವ ಅಸರಿಗಿಂತಲೂ ಪ್ರವಾದಿ ಸ.ರವರ ವಿರುದ್ದವಾಗುವ ವೀಕ್ಷಣೆಯಿಂದಲೂ ಉಮರ್

ರ.ರವರ ಕರ್ಮವನ್ನು ಸುನ್ನತಿನೊಂದಿಗಿರುವುದಾಗಿ ತೆಗೆದುಕೊಳ್ಳುವುದೇ ಹೆಚ್ಚು ಉತ್ತಮವಾಗಿದೆ[81]

ಶೈಖ್ ಇಸ್ಮಾಯೀಲ್ ಅಲ್ ಅನ್ಸಾರಿ ಯವರಿಂದ ನಾಸಿರುದ್ದೀನ್ ಅಲ್ಬಾನಿ ರ. ರವರ ತಲಆಕುಬಿನ ವಾಸ್ತವೀಕತೆ:

ತೃತೀಯ ಅಸರಿನ ಬಗ್ಗೆ ಕೆಲವು ಅಹ್ಲುಲ್ ಇಲ್ಮಿನ ವಕ್ತಾರರು ಸ್ವಹೀಹ್ ಎಂದಿರುವರೆಂದು ನಾವು ಮೊದಲೇ ನಿಮ್ಮ ಗಮನಕ್ಕೆ ತಂದಿದ್ದೇವೆ; ಅಲ್ಲಿ ವಿವರಿಸಲಾಗಿರುವ ಕೆಲವು ಮುಖ್ಯಾಂಶಗಳಲ್ಲಿ ಇನ್ನೊಂದು ಶೈಖ್ ಇಸ್ಮಾಯೀಲ್ ಮೊಹಮ್ಮದುಲ್ ಅನ್ಸಾರಿಯವರ (ದಾರುಲ್ ಇಫ್ತಾಹ್– ಅರ್ರಿಯಾದ್) ರಿಸಾಲ 'ತಸ್ ಹೀಹು ಹದೀಸ್ ಸ್ವಲಾತುತರಾವೀಹ್ ಇಷರೀನ ರಕಅತ್' ಪ್ರತ್ಯಕ್ಷಗೊಂಡಿದೆ ಇದು ರಿಯಾದಿನಿಂದ ಹೊರಬರುವ ಮ್ಯಾಗಝೀನ್ 'ರಾಯತುಲ್ ಇಸ್ಲಾಂ' ನ ಕೆಲವು ಸಂಚಿಕೆ ಗಳಲ್ಲಿ (1380 ಹಿಜರಿ) ಯಲ್ಲಿ ಪ್ರಕಟಗೊಂಡಿದೆ. ನಂತರ (1384 ಹಿಜರಿಯಲ್ಲಿ) ನಿರ್ಧಿಷ್ಟ ಪುಸ್ತಕ ರೂಪದಲ್ಲೂ ಪ್ರಕಟಗೊಂಡಿತ್ತು 'ಮಕ್ತಬಃ ಇಮಾಮ್ ಶಾಫಿಯೀ' ಮುಖಾಂತರ ಪ್ರಕಟಗೊಂಡಿದ್ದ ಇದರ ಮೂರನೇ (1308–ಹಿಜ್ರಿ, 1998 ಇಸವಿಯಲ್ಲಿಯ) ಆವೃತಿ ನಮ್ಮಲ್ಲಿದೆ ಮೊದಲ ಅವೃತಿಯು ಮೊತ್ತ ಮುವ್ವತ್ತು ಪುಟದಲ್ಲಿದ್ದು ಇದರಲ್ಲೊಂದು ಲೇಖನ (اباحة التحلي بالذهب المحلّق للنسأء) ಎನ್ನುವ ತಲೆಬರಹದಡಿಯಲ್ಲಿದ್ದೂ ಇದು ನಾಸಿರುದ್ದೀನ್ ಅಲ್ಬಾನಿಯವರ ವಿರುದ್ಧ ಪ್ರಕಟಿಸಿದ ಗ್ರಂಥವಾಗಿದೆಯಲ್ಲದೇ ಇದೀಗ ಮೊತ್ತ ನೂರ ಐವತ್ತೊಂಬತ್ತು ಪುಟಗಳಲ್ಲಿ ಕಾಣಿಸಿಕೊಂಡಿದೆ.

ಸುನನ್ ಬೈಹಕೀ ಎರಡನೇ ಭಾಗ ಪು ನಾಲ್ಕುನೂರ ತೊಂಬತ್ತಾರರಲ್ಲಿ 'ರಮದಾನ್ ತಿಂಗಳ (ತರಾವೀಹ್)ನಮಾಜಿನ ಗಣನೆಯ ಬಗ್ಗೆ ಬಂದ ವರದಿಯ ಅದ್ಯಾಯದಲ್ಲಿರುವ ವಿಷಯಗಳನ್ನು ನಕಲು ಮಾಡಿದ ನಂತರ ಶೈಖ್ ಅನ್ಸಾರಿ ಬರೆಯುತ್ತಾರೆ: ಪ್ರಸ್ತುತ ಹದೀಸನ್ನು ಇಮಾಮ್ ನವವೀ 'ಅಲ್ ಖುಲಾಸಃ' ದಲ್ಲಿ ಮತ್ತು 'ಅಲ್ ಮಜ್ಮೂಅ'ದಲ್ಲಿ ಸ್ವಹೀಹ್ ಎಂದಿದ್ದಾರೆ ಹಾಗೂ ಝೈಲಯೀ 'ನಸ್ಬು ರ್ರಾಯ'ದಲ್ಲಿ ಇದರ ಸ್ವಹೀಹನ್ನು

[81] ಸ್ವಲಾತುತರಾವೀಹ್ ಪು:62–63 ಉರ್ದು, ಪು;49–51 ಅರಬಿ

ಯಥಾಸ್ಥಿತಿಯಲ್ಲಿರಿಸಿರುವರು. ಮತ್ತು 'ಶರಹುಲ್ ಮಿನ್ಹಾಜ್' ನಲ್ಲಿ ಎಲ್ಲರಂತೆ 'ಅತ್ತಸ್ರೀಬ್' ನಲ್ಲಿ ಇಬ್ನುಲ್ ಇರಾಕಿ, 'ಉಮ್ದತುಲ್ ಖಾರಿ' ಯಲ್ಲಿ ಐನೀ, 'ಅಲ್ ಮಸ್ವಾಬೀಹ್ ಫೀ ಸ್ವಲಾತುರರಾವೀಹ್' ನಲ್ಲಿ ಸುಯೂತೀ, 'ಶರಹುಲ್ ಮುಅತ್ತಾ' ದಲ್ಲಿ ಮುಲ್ಲಾ ಅಲೀ ಖಾರಿ, ಮತ್ತು ಆಸಾರು ಸುನನ್ ನಲ್ಲಿ ನಮವೀ ಹಾಗೂ ಇತರರೂ ಇದನ್ನು ಸ್ವಹೀಹ್ ಎಂದಿದ್ದಾರೆ.[82]

ಅಹ್ಲುಲ್ ಇಲ್ಮಿನ ಪಂಡಿತರ ಉಲ್ಲೇಖಿತ ಅಸರನ್ನು ಸ್ವಹೀಹ್ ಎನ್ನುವದ ಕಡೆಗೆ ಶೈಖ್ ನಾಸಿರುದ್ದೀನ್ ಅಲ್ಬಾನಿ ತನ್ನ ಗ್ರಂಥ 'ಸ್ವಲಾತುರರಾವೀಹ್' ನಲ್ಲಿ ಬೆಳಕು ಚೆಲ್ಲಿದ್ದಾರೆ ನಂತರ ಹಲವಾರು ಕಾರಣಗಳೂ ಮತ್ತು ನ್ಯೂನ್ಯತೆಗಳಿಂದ ಈ ಅಸರನ್ನು ಸ್ವೀಕಾರ ಯೋಗ್ಯವಲ್ಲವೆಂದೂ, ನಿರೀಕ್ಷಗೆ ಒಳಪಟ್ಟದೆಂದೂ ಮತು ಮುಂಕರೆಂದೂ ಹೇಳಿರುವರು. ಶೈಖ್ ಅನ್ಸಾರಿ ವ್ಯತ್ಯಸ್ತ ಆರು ನ್ಯೂನ್ಯತೆಯ ರೂಪದಲ್ಲೂ ತನ್ನ ಗ್ರಂಥದಲ್ಲಿ ವಿವರಿಸಿರುವರು.

ಶೈಖ್ ಅನ್ಸಾರಿಯವರ ವ್ಯಕ್ತಿ ಹತ್ಯೆ ಮಾಡುವ ಯಾವುದೇ ಹುನ್ನಾರವಿಲ್ಲ. ಆದರೆ ಅವರು ತಮ್ಮನಿಲುವನ್ನು ಪಷ್ಟೀಕರಿಸಲು ಬಹಳಷ್ಟು ಕಸರತ್ತುಗಳು ಮಾಡಿರಿವುದು ವ್ಯಕ್ತವಾಗಿ ತೋರುತ್ತಿದೆ ಸದರಿ ಶೈಖ್ ರವರು "ಅಸರ್"ರಿಗೆ"ಹದೀಸ್" ನ ಹೆಸರು ಕೊಡುತ್ತಾ "ಸ್ವಹೀಹುಲ್ ಹದೀಸ್" ಎಂದಿರುತ್ತಾರೆ ಹೊರತು "ಸ್ವಹೀಹುಲ್ ಅಸರ್" ಹೇಳಲಿಲ್ಲ.

ನಾವು ಮರ್ ಫೂಅ ಆದ ಹದೀಸನ್ನು ಹೇಳಿದ್ದೇವೆ ಅದರ ಬಗ್ಗೆ ಎಲ್ಲಾ ಅಹ್ಲುಲ್ ಇಲ್ಮರು ಳಯೀಫ್ ಎಂದಿದ್ದಾರೆ. ಆದುದರಿಂದ ಸದರಿ ಶೈಖ್ ರವರು ಹದೀಸ್ ಮತ್ತು ಅಸರಿನ ಮದ್ಯೆ ಇರುವ ವೆತ್ಯಾಸವನ್ನು ಅರಿಯದೇ ಹೊಗಿರುವುದು ಅಸಾದ್ಯವಾಗಿದೆ. ಮತ್ತು ಮುಹದ್ದಿಸೀನರ ಸಾಧಾರಣ ವಾಗಿ ಹದೀಸ್ ಎಂದು ಹೇಳುವುದನ್ನು ಬದಿಗೊತ್ತಿ ಅಸರಿಗೆ ಹದೀಸಿನ ಮಹತ್ವ ನೀಡಿ ಸ್ವಹೀಹುಲ್ ಹದೀಸೆಂದು ಲೇಖನಗಳಲ್ಲಿ ಸೇರಿಸುವುದು ಸಮಂಜಸವಲ್ಲ ಅಲ್ಲದೇ ಪ್ರಸ್ತುತ ವಿಷಯ ಅವರ ವಯಕ್ತಿಕ ದ್ವೇಷವನ್ನು ಎತಿ ಹಿಡಿಯುತ್ತದೆ ಯಲ್ಲದೇ ನೇರವಾಗಿ ಮಾಡಿರುವ ವ್ಯಕ್ತಿಹತ್ಯೆಗೆ ಒತ್ತುನೀಡುತ್ತದೆ. "ರಿಸಾಲ" ದ ಹೆಸರೇ ಈರೀತಿ ಇರುವಾಗ ಇದರಲ್ಲಿರುವುದರ ಬಗ್ಗೆ ಏನು ಹೇಳಬೇಕು?

---

[82] ತಸ್ಹೀಹು ಹದೀಸ್ ಸಲಾತು ತರಾವೀಹ್ ಇಷರೀನ ರಕಅತ್ –ಅನ್ಸಾರೀ ಪು:70

ಮತ್ತು ಇದರದನ್ನು ಯಾವತರಹ ಒಪ್ಪಿಕೊಳ್ಳಬೇಕು? "ರಿಸಾಲ" ಹೆಸರನ್ನು ನೋಡುತ್ತಿರುವಾಗಲೇ ಇದರ ಬಗ್ಗೆ ಇರುವ ಅಭಿಪ್ರಾಯ ವ್ಯಕ್ತವಾಗುತ್ತದೆ.

خشت اول چون نهد معمار کج * تا ثریا میرود دیوار کج

ವಾಸ್ತು ಶಿಲ್ಪಿಯು ವಾಸ್ತುವಿನ ಬುನಾದಿಯೇ ವಕ್ರವಾಗಿಸಿದ್ದಲ್ಲಿ ಯಾವ ರೀತಿ ಆ ವಾಸ್ತು ನೇರವಾಗಿರಬಲ್ಲದು. ಗಗನ ದ ವರೆಗೇರಿಸಿದರೂ ವಕ್ರವೇ ಆಗಿರುವುದು.

ನಾಸಿರುದ್ದೀನ್ ಅಲ್ಬಾನಿ ಸ್ವತಃ ಶೈಖ್ ಇಸ್ಮಾಯೀಲ್ ಅನ್ಸಾರಿ ಯವರ ಪ್ರತ್ಯುತ್ತರ ಓದಿಕೊಂಡಿದ್ದರು ತನ್ನ ಕಿತಾಬ್ 'ತಮಾಮುಲ್ ಮಇನ್ನಃ' ದಲ್ಲಿ ಬಹಳ ಖೇದವ್ಯಕ್ತಪಡಿಸುತ್ತಾ ಅವರ ಬಗ್ಗೆ ಯಾವುದೇ ರೀತಿಯ ಕೆಟ್ಟಭಾವನೆ ಗಳನ್ನಿಡದೇ ಅವರ ಒಂದೊಂದು ಪ್ರತಿಕ್ರಿಯೆಗೆ ಶಕ್ತ ಉತ್ತರವನ್ನಿತ್ತರು[83]

ನಾಲ್ಕನೇಯ ಅಸರ್:

ಉಮ್ದತುಲ್ ಖಾರಿಯಲ್ಲಿ ಅಲ್ಲಾಮ ಐನೀ ರಹಿಮಹುಲ್ಲ ಇಬ್ನ್ ಅಬ್ದುಲ್ ಬರ್ರ್ ರಹಿಮಹುಲ್ಲಾರಿಂದ ಬರೆಯುತ್ತಾರೆ: ಸಾಯಿಬ್ ಇಬ್ನ್ ಯಝೀದ್ ಉಲ್ಲೇಖಿಸುತ್ತಾರೆ;

وكان القيام على عهد عمر بثلاث وعشرين ركعة.[84]

'ಉಮರುಲ್ ಫಾರೂಕ್ ರ.ರವರ ಖಿಲಾಫತ್ತಿನ ಕಾಲದಲ್ಲಿ ಜನರು ಇಪ್ಪತ್ತಮೂರು ರಕಅತ್ ನಿರ್ವಹಿಸುತ್ತಿದ್ದರು.'

ಈ ಅಸರಿನ ಸನದ್ 'ಳಯೀಫ್'ಆಗಿರುತ್ತದೆ ಕಾರಣ ಇಬ್ನ್ ಅಬೀ ಝಿಯಾಬರ ನೆನಪು ಶಕ್ತಿ ಕ್ಷೀಣವಾಗಿತ್ತು. ಮತ್ತು ದರಾವರ್ದೀ ಇವರಿಂದ ಮುಂಕರ್ ವರದಿಯನ್ನು ವರದಿಮಾಡುತ್ತಾರೆ ಆದ್ದರಿಂದ ಅವರು ಶಕ್ತರಾದವರಲ್ಲ ಅವರ ಹದೀಸನ್ನು ಮಾತ್ರ ಬರೆಯಲಾಗುತಿತ್ತು ಎಂದು ಇಬ್ನ್ ಅಬೀ ಹಾತಿಮ್ 'ಜರಹ್ ಅತ್ತಅದೀಲ್'ನಲ್ಲಿ ಬರೆದಿರುವರು. ಅಬೂ ಝುರ್ಆ ಇವರ ಬಗ್ಗೆ ಪರವಾಗಿಲ್ಲ ಎಂದಿದ್ದರು ಇವರ

[83] ತಮಾಮುಲ್ ಮಿನ್ನಃ ಪು: 253–255

[84] ಉಮ್ದತುಲ್ ಖಾರಿ–3/5/357 ಸ್ವಲಾತುತ್ತರಾವೀಹ್ ಅರಬಿ ಪುಟ:52/63

ಹದೀಸಿನ ಮೇಲೆ ಕಠಿಣವಾದ ಹಿಡಿತವೇನು ಇಲ್ಲವಾಗಿತ್ತು ಮತ್ತು ಇವರ ವಾಕ್ಯಗಳಿಂದ ಈ ಪ್ರಸ್ತುತ ವರದಿ ಇಮಾಮ್ ಮಾಲಿಕ್ ರಹಿಮಹುಲ್ಲಾಹ್ ರ ಬಳಿ ವಿಶ್ವಾಸಕ್ಕೆ ಅರ್ಹವಾದದಲ್ಲ ಇದನ್ನು ಹಾಫಿಳ್ ಇಬ್ನ್ ಹಜರ್ 'ಅತ್ತಹಝೀಬ ತ್ತಹಜೀಬ್' ನಲ್ಲಿ ವಿವರಿಸಿರುವರು ಅದರ ಹೊರತು ಅವರ ಇನ್ನೊಂದು ಗ್ರಂಥ 'ಅತ್ತಕ್ರೀಬ್' ನಲ್ಲಿ ' ಅವರು ಸತ್ಯವಂತರು ಕೆಲವೊಮ್ಮೆ ಯೋಚನಾಮಗ್ನರಾಗುತ್ತಾರೆ ಎಂದು ಬರೆದಿರುವರು.[85] ಈ ರೀತಿಯ ವರದಿಗಾರರು ವರದಿಮಾಡಿದ ಹದೀಸ್ ಉಲಮಾವು ಉಸೂಲುಲ್ ಹದೀಸರಬಳಿಯಲ್ಲಿ ಪ್ರಮಾಣಕ್ಕೆ ಅರ್ಹವಲ್ಲ ಮತ್ತು ಯೋಚನಾಮಗ್ನರಾಗುವುದರೊಂದಿಗೆ ಸಿಕತ್ ಸಾಬಿತಾದರೂ ಅಂತವರ ಬಗ್ಗೆ ವಿರೋದ ವ್ಯಕ್ತವಾಗಿದೆ; ಯಾಕೆಂದರೆ ಈ ರೀತಿಯ ಸೇರುವಿಕೆಯಿಂದಿರುವ ವರದಿಗಾರ ಮೊಹಮ್ಮದ್ ಬಿನ್ ಯೂಸುಫ್ ಹನ್ನೊಂದು ರಕಅತ್ತಿನ ವರದಿಯನ್ನು ಮಾಡಿರುವರು. ಅಲ್ಲಾಮ ಅಲ್ಬಾನಿ ಬರೆಯುತ್ತಾರೆ: 'ಇದರ ಸನದ್ ಸರಿಯಾಗಿದೆಯೋ ಇಲ್ಲವೋ ಎನ್ನುವುದು ನಮಗೆ ತಿಳಿದಿಲ್ಲ ಕಾರಣ ಅದನ್ನು ನೋಡುವ ಎನ್ನುವುದಾದರೆ ಇಬ್ನ್ ಅಬ್ದುಲ್ ಬರ್ರ್ ರ ಈ ಅಸರಿನ ಗ್ರಂಥ ನಮ್ಮ ಮುಂದಿಲ್ಲ'[86]

ಐದನೇ ಅಸರ್:

ಇಮಾಮ್ ಮಾಲಿಕ್ ರ. ರವರ ಮುಅತ್ತಾದಲ್ಲಿ ಮತ್ತು ಬ್ಯಹಕೀಯವರು ಸುನನುಲ್ ಕುಬ್ರಾದಲ್ಲಿ ಯಝೀದ್ ಬಿನ್ ರುಮಾನ್ ರವರ ಉಲ್ಲೇಖವಿದೆ

كَانَ النَّاسُ يَقُومُونَ فِي زَمَانِ عُمَرَ بنِ الخَطَّابِ فِي رَمَضَانَ بِثَلاثٍ وَعِشرِينَ رَكعةً

'ಉಮರುಲ್ ಫಾರೂಕ್ ರ.ರವರ ಖಿಲಾಫತ್ತಿನ ಕಾಲದಲ್ಲಿ ರಮಝಾನಿನಲ್ಲಿ ಜನರು ಇಪ್ಪತ್ತಮೂರು ರಕಅತ್ ನಿರ್ವಹಿಸುತ್ತಿದ್ದರು.'[87]

ಇಮಾಮ್ ಬ್ಯಹಕೀ ಹೇಳುತ್ತಾರೆ: 'ಇದರಲ್ಲಿ ಮೂರು ರಕಅತ್ ವಿತ್ರ್ ಆಗಿದೆ ಬಾಕಿ ಇಪ್ಪತ್ತು ರಕಅತ್ ತರಾವೀಹ್ ಆಗಿದೆ, ಇಮಾಮ್ ಮಾಲಿಕ್ ಬಿನ್ ಅನಸ್ ರ.ರವರು

---

[85] ತಕ್ರೀಬ್ ಅತಹ್‌ಝೀಬ್–ಪುಟ:211 ಪರಿಶೀಲನೆ ಅಬುಲ್ ಇಷ್ಬಾಲ್ ಸ್ವಗೀರ್ ಅಹ್ಮದ್ ಷಾಗಫ್
[86] ಸ್ವಲಾತು ತರಾವೀಹ್ ನಾಸಿರುದ್ದೀನ್ ಅಲ್ಬಾನಿ ಪುಟ:63–64ಉರ್ದು, ಪುಟ:52 ಅರಬಿ
[87] ಉಮ್ದತುಲ್ ಖಾರಿ –4/7/178, ಫತುಹುಲ್ ಬಾರಿ–4/253, ಸ್ವಲಾತುತರಾವೀಹ್ ಪುಟ:52–53 ಉರ್ದು, 64 ಅರಬಿ.

ಹೇಳುತ್ತಾರೆ ಯಝೀದ್ ಬಿನ್ ರುಮ್ಮಾನ್ ಉಮರ್ ರ.ರವರನ್ನು ಬೇಟಿಯಾಗಲಿಲ್ಲ ಅಲ್ಲದೇ ಅವರು ಉಮರ್ ರ.ರವರ ಕಾಲವನ್ನು ಅವರು ಕಂಡಿರಲ್ಲಿಲ್ಲ, ಇಮಾಮ್ ಝ್ಯಲಯೀ ಹನಫೀ ಇದನ್ನು ನಸ್ಬುರ್ರಾಯದಲ್ಲಿ[88] ಒತ್ತಿಹೇಳಿದ್ದಾರೆ ಮತ್ತು ಅಲ್ ಮಜ್ಮೂಅ ಶರಹುಲ್ ಮುಹಝ್ಝಬ್[89] ನಲ್ಲಿ ಇಮಾಮ್ ನವವೀ ಈ ಅಸರನ್ನು ಳಯೀಫ್ ಎಂದಿದ್ದಾರೆ ಮತ್ತು ಇಮಾಮ್ ಬ್ಯಹಕೀ ಸ್ವತಃ ಈ ಅಸರನ್ನು 'ಮುರ್ಸಲ್' ಎಂದಿದ್ದಾರೆ ಕಾರಣ ಯಝೀದ್ ಬಿನ್ ರುಮ್ಮಾನ್ ಉಮರ್ ರ. ರವರನ್ನು ಬೇಟಿಯಾಗಲಿಲ್ಲ.[90] ಅಲ್ಲಾಮ ಐನೀ ಹನಫೀ ಈ ಹದೀಸಿನಲ್ಲಿ ಕಂಡುಬಂದಿರುವ ಇಂಖಿತಾಅ(ಪರಸ್ಪರ ಸೇರದೇ) ಇರುವುದರಿಂದ ಆ ಅಸರನ್ನು 'ಳಯೀಫ್' ಎಂದಿದ್ದಾರೆ

ಈ ಐದು ಆಸಾರುಗಳು ಉಮರುಲ್ ಇಬ್ನುಲ್ ಕತ್ತಾಬ್ ರ.ರವರ ಕಾಲಕ್ಕೆ ಅನುಗುಣವಾಗಿವೆ. ಮೂರನೇಯ ಒಂದು ಅಸರನ್ನು ಹೊರತು ಇದರಲ್ಲಿ ಉಸ್ಮಾನ್ ರ. ಮತ್ತು ಅಲೀ ಬಿನ್ ಅಬೀತಾಲಿಬರ ಕಾಲಕ್ಕೆ ಸೇರಿದ್ದಾಗಿದೆ. ಇದರಲ್ಲಿ ಯಾವೊಂದೂ ಸ್ವಹೀಹಾಗಿದ್ದಲ್ಲ. ಹಾಗೂ ಇದೇ ರೀತಿಯಲ್ಲಿ ಕೆಲವು ಸ್ವಹಾಬರಿಂದ ವರದಿಯಾಗಿದ್ದೂ ಇವೆ. ಉಮರುಲ್ ಫಾರೂಕ್ ರ.ರವರ ಕಾಲದಲ್ಲಿಯ ಇನ್ನೊಂದು ಆಸರ ಕೂಡ ಹೀಗೆ ಇದೆ. ಅದರಲ್ಲಿ ಸಾಯಿಬ್ ಇಬ್ನ್ ಯಝೀದ್ ರವರಿಂದ ವರದಿ:

(كُنَّا نَقُومُ فِي زَمَانِ عُمَرَ بْنِ الْخَطَّابِ بِعِشْرِينَ رَكْعَةً وَالْوِتْرِ)

'ಉಮರುಲ್ ಫಾರೂಕ್ ರ.ರವರ ಖಿಲಾಫತ್ತಿನ ಕಾಲದಲ್ಲಿ ನಾವು ಇಪ್ಪತ್ತು ರಕಅತ್ ತರಾವೀಹ್ ಮತ್ತು ವಿತ್ರ್ ನಿರ್ವಹಿಸುತಿದ್ದೆವು.'[91]

ಈ ಅಸರಿನ ಸನದಿನ ಬಗ್ಗೆ ಅಲ್ಲಾಮ ಸುಬುಕಿ 'ಶರಹುಲ್ ಮಿನ್ಹಾಜ್' ನಲ್ಲಿ ಮತ್ತು ಮುಲ್ಲಾ ಅಲೀ ಖಾರಿ 'ಶರಹುಲ್ ಮುಅತ್ತಾದಲ್ಲಿ ಸಹೀಹ್ ಎಂದು ಹೇಳಿದ್ದಾರೆ ಆದರೆ ಇದು ಅವರ (ತಸಾಮಹ್) ಬಹುಮಾನ ಪೂರಿತ ಒಪ್ಪಿಕೊಳ್ಳುವಿಕೆ ಯಾಗಿದೆ. ಕಾರಣ ಈ ಅಸರಿನ ಸನದಿನಲ್ಲಿ ಒಬ್ಬ ವರದಿಗಾರರು 'ಅಬೂ ಉಸ್ಮಾನುಲ್ ಬಸ್ವರೀ'

---

[88] ನಸ್ಬುರ್ರಾಯ –2/154
[89] ಶರಹುಲ್ ಮುಹಝ್ಝಬ್–4/33.
[90] ಸುನನುಲ್ ಕುಬ್ರಾ ಬ್ಯಹಕೀ–2/496.
[91] ತುಹ್ಫತುಲ್ ಅಹ್ವಝೀ–3/530

ಎನ್ನುವವರಿದ್ದಾರೆ ಅವರ ಹೆಸರು 'ಉಮರ್ ಇಬ್ನ್ ಅಬ್ದುಲ್ಲಾ' ಎಂದಾಗಿದೆ ಇವರ ಬಗ್ಗೆ ಮೌಲಾನಾ ಶೌಕ್ ನಮವೀ 'ಆಸಾರು ಸುನನ್' ನಲ್ಲಿ 'ನನಗೆ ಇವರ ಬಗ್ಗೆ ತಿಳಿಯುವಂತಹಾ ಯಾವುದೇ ಗ್ರಂಥದೊರಕಲಿಲ್ಲ ಎಂದು ಹೇಳಿರುವರು. ಮತ್ತು ಅಲ್ಲಾಮ ಮುಬಾರಕ್ ಪುರಿ ತುಹ್ಫತುಲ್ ಅಹ್ವಝ್ ನಲ್ಲಿ ' ಬಹಳಷ್ಟು ಹುಡುಕಾಟದ ನಂತರವೂ ಇವರ ಬಗ್ಗೆ ಯಾವೊಂದು ಸುಳಿವೂ ಸಿಗಲಿಲ್ಲ ಎಂದಿದ್ದಾರೆ ಮುಂದುವರಿಸುತ್ತಾ ಮತ್ತು ಈ ಅಸರಿನ ಸನದಿನಲ್ಲಿ ಇನ್ನೊಂದು ವರದಿಗಾರರಾದ 'ಅಬೂ ತ್ವಾಹಿರ್ ಅಲ್ ಫಖೀಹ್' ಸಹ ಇದ್ದಾರೆ ಅವರು ಇಮಾಮ್ ಬ್ಯಹಕೀಯ ರಹಿಮಹುಲ್ಲಾರ ಉಸ್ತಾದ್ (ಗುರುಗಳು) ಆಗಿರುವರು, ಇವರ ಬಗ್ಗೆ ಸಿಕತ್ ಎಂದವರು ಯಾರು ನನಗೆ ತೋರಿಬಂದಿಲ್ಲ ಅಲ್ಲದೇ ಈ ಹದೀಸನ್ನು ಸ್ವಹೀಹ್ ಎನ್ನುವವರು ಈ ಎರಡೂ ರಾವಿ (ವರದಿ) ಗಾರರ ಬಗ್ಗೆ ಸೂಕ್ತ ಮಾಹಿತಿ ನೀಡಿ ಸಿಕತಿಗೆ ಅರ್ಹರಾದವರೆಂದು ಘೋಷಿಸುವುದು ಅವರ ಕರ್ತವ್ಯವಾಗದೆ. ಇಮಾಮ್ ಸುಬುಕೀ ತ್ವಬಕಾತುಲ್ ಕುಬ್ರಾ ದಲ್ಲಿ ಹೇಳುತ್ತಿರುವುದೇನೆಂದರೆ 'ಅಲ್ ಫಖೀಹ್' ಆ ಕಾಲದ ಫುಕಹಾಅರ, ಮುಹದ್ದಿಸೀನರ, ಇಮಾಮಾಗಿದ್ದರು ಲುಗತ್ ಅರಬೀಯಲ್ಲಿ , ಮಅರಿಫತ್ ಶರ್ತುಗಳಲ್ಲಿ ಅವರದ್ದು ಎತ್ತಿದ ಕೈಯಾಗಿತ್ತು ಈ ವಿಷಯದಲ್ಲಿ ಅವರೊಂದು ಗ್ರಂಥ ಬರೆದಿರುವರು, ಅದರಲ್ಲಿ ಅವರ ಮಾತುಗಳಲ್ಲೂ ಈ ವರದಿಗಾರರ ಪ್ರಮಾಣಕ್ಕೆ ಪ್ರಾಪ್ತರೆನ್ನುವ ಯಾವುದೇ ಮಾತು ಅಲ್ಲಿ ತೋರುವುದಿಲ್ಲ, ಇದರಿಂದ ಹೆಚ್ಚುಹೆಚ್ಚಾಗಿ ಮನದಟ್ಟಾಗುವುದೇನೆಂದರೆ ಅವರು ಇಲ್ಮುಲ್ ಹದೀಸ್, ಫಿಖ್ಹ್, ಲುಗತ್, ಮತ್ತು ಮಅರಿಫತ್ ಶರಾಯಿತ್, ಗಳ ಉತ್ತಮ ಆಲಿಮಾಗಿದ್ದರು ಅಂದ ಮಾತ್ರಕ್ಕೆ ಅವರು ಸಿಕತ್ ಆದವರೆಂದು ಬರುವುದಿಲ್ಲ. ಮೊತ್ತದಲ್ಲಿ ಈ ಅಸರಿನ ಸ್ವಹೀಹ್ ಆಗುವ ವಿಷಯವೂ ನಿರೀಕ್ಷೆಯಲ್ಲಿಸಬೇಕಾದ ವಿಷಯವಾಗಿದೆ.

ಈ ಸಂಶಯಾತೀತ ಶೃಂಖಲೆಯ ಹೊರತು ಸುನನ್ ಸಯೀದ್ ಬಿನ್ ಮನ್ಸೂರ್ ನಲ್ಲಿ ಅಬ್ದುಲ್ ಅಝೀಝ್ ಬಿನ್ ಮೊಹಮ್ಮದ್ ಬಿನ್ ಯೂಸುಫ್ ರ ಮಾರ್ಗವಾಗಿ ವರದಿ ಯಾಗಿದೆ ಅದರ ಬಗ್ಗೆಯೂ ವಿರೋಧವಿದೆ. ಅದರಲ್ಲಿ ಸಾಯಿದ್ ಬಿನ್ ಯಝೀದ್. ರ. ಹೇಳುತ್ತಾರೆ:

كنا نقوم في زمان عمر بن الخطاب رضي الله عنه بإحدى عشرة ركعة.

'ಉಮರುಲ್ ಫಾರೂಕ್ ರ.ರವರ ಖಿಲಾಫತ್ತಿನ ಕಾಲದಲ್ಲಿ ನಾವು ಹನ್ನೊಂದು ರಕಅತ್ ನಿರ್ವಹಿಸುತಿದ್ದೆವು.'[92] ಇಮಾಮ್ ಸುಯೂತೀ ಈ ಅಸರಿನ ಬಗ್ಗೆ ಮಾತನಾಡುತ್ತಾ ತನ್ನ ಗ್ರಂಥವಾದ 'ಅಲ್ ಮಿಸ್ಬಾಹ್' ನಲ್ಲಿ ಇದರ ಶೃಂಖಲೆ ಅತ್ಯಂತ ಉನ್ನತ ಮಟ್ಟದ್ದಾಗಿದೆ ಎಂದಿದ್ದಾರೆ. ಇದೇ ರೀತಿ ಬೈಹಕೀ ಯ ವಿವರಿಸಿದ ಅಸರ್ 'ಖೀಯಾಮು ಲ್ಲಯಲ್' ಮುರ್ವಝೀ ಯಲ್ಲಿ ಇದ್ದ ವರದಿಯ ಅಸರ್ ಮುಹಮ್ಮ್ದ ಬಿನ್ ಇಸ್ಹಾಕ್ ರಿಂದ ಅವರು ಹೇಳುತ್ತಾರೆ ನನ್ನೊಂದಿಗೆ ಮೊಹಮ್ಮದ್ ಬಿನ್ ಯೂಸುಫ್ ಅವರು ಅವರ ಅಜ್ಜ ಸಾಯಿಬ್ ಬಿನ್ ಯಝೀದ್ ರ ಮಾರ್ಗವಾಗಿ ವಿವರಿಸಿರುವದರ ವಿರುದ್ದವಾಗಿದೆ ಅವರು ಅದರಲ್ಲಿ ಹೀಗೆ ವರದಿ ಮಾಡಿರುವರು:

(كُنَّا نصلي فِي زَمنِ عُمَرَ بنِ الخَطَّابِ فِي رَمَضَانَ بِثَلاثٍ وَعِشرِينَ رَكعةً)

'ಉಮರುಲ್ ಫಾರೂಕ್ ರ.ರವರ ಖಿಲಾಫತ್ತಿನ ಕಾಲದಲ್ಲಿ ರಮಝಾನಿನಲ್ಲಿ ಜನರು ಇಪ್ಪತ್ತಮೂರು ರಕಅತ್ ನಿರ್ವಹಿಸುತ್ತಿದ್ದರು.'[93]

ಈ ಅಸರ್ ಮುಂಚೆವಿವರಿಸಿದ ಇಮಾಮ್ ಮಾಲಿಕ್‌ರ ಮುಅತ್ತಾ ಮತ್ತು ಇತರ ಗ್ರಂಥಗಳಲ್ಲಿ ವರದಿಯಾಗಿರುವುದಕ್ಕೂ ವಿರುದ್ಧವಾಗಿದೆ; ಅದರಲ್ಲಿ ಉಮರ್ ರ. ರವರು ಉಬಯೀ ಇಬ್ನ್ ಕಅಬ್ ರ.ಮತ್ತು ತಮೀಮದ್ದಾರಿ ರ.ರವರೊಂದಿಗೆ (ತಾವುಗಳು) ಜನರಿಗೆ ಹನ್ನೊಂದು ರಕಅತ್ ನಿರ್ವಹಿಸಿಕೊಡಿ ಎಂದು ಆಜ್ಞೆ ಇತ್ತಿರುವುದಾಗಿದೆ.[94]

ಇಮಾಮ್ ಬೈಹಕೀಯವರ ಉದ್ದರಿತ ಸದರಿ ಅಸರ್ ಪ್ರಮಾಣಕ್ಕೆ ಅರ್ಹವಲ್ಲವೆಂದು ಇದರಿಂದ ತಿಳಿಯಬಹುದಾಗಿದೆ, ಮತು ಇಮಾಮ್ ಬೈಹಕೀ ಇದನ್ನು ಬೇರೆ ಶೃಂಖಲೆಯಿಂದ ವರದಿ ಮಾಡಿರುವರೆಂದೂ ಅದರ ವರದಿ ಈರೀತಿ

(كَانُو يَقُومُونَ عَلي عَهدِ عُمَرَ بنِ الخَطَّابِ فِي شَهرِ رَمَضَانَ وَعِشرِينَ رَكعةً)

92 ತುಹ್ಫತುಲ್ ಅಹ್ವಝೀ–3/530
93 ತುಹ್ಫತುಲ್ ಅಹ್ವಝೀ–3/530
94 ಇದಕ್ಕಿಂತ ಮುಂಚೆ ಇದರ ಬಗ್ಗೆಇರುವ ವಿವರಣೆ ನೀವು ಓದಿದ್ದೀರಿ.

'ಉಮರ್ ರ.ರವರ ಖಿಲಾಫತ್ತಿನ ಸಮಯ ರಮಝಾನಿನಲ್ಲಿ ಅವರು ಇಪ್ಪತ್ತು ರಕಅತ್ ನಮಾಜ್(ತರಾವೀಹ್) ನಿರ್ವಹಿಸುತಿದ್ದರು'.[95] ಇದೆ ಎಂದೂ ಈ ಅಸರಿನ ಶೃಂಖಲೆಯನ್ನು ಇಮಾಮ್ ನವವಿ ಸ್ವಹೀಹ್ ಎಂದಿದ್ದಾರೆ ಎಂದೂ ಹೇಳುವುದಾರೆ! ಈ ಮಾತಿಗೆ ಉತ್ತರ ಈ ಅಸರಿನ ಸನದ್ದ ನಲ್ಲಿ ಅಬೂ ಅಬ್ದಲ್ಲಾ ಬಿನ್ ಫಂಜೂವಿಯ ದೀನೂರಿ ಎಂಬ ಒಬ್ಬ ವರದಿಗಾರಿದ್ದಾರೆ ಇವರ ಬಗ್ಗೆ ಇರುವ ಮಾಹಿತಿ ಮತು ಅಸ್ಮಾವುರಿಜಾಲಿನಲ್ಲಿ ವಿವರಿಸುವ ಯಾವುದೆ ವಿವರ ಅಲ್ಲಾಮ ಮುಬಾರಕ್ ಪುರಿಯವರಿಗೆ ದೊರಕಿಲ್ಲ ಹಾಗೂ ಈ ಅಸರನ್ನು ಉದ್ದರಿಸುವವರಿಗೆ ಉದ್ದರಿಸಲ್ಪಟ್ಟವರ ಬಗ್ಗೆ ಇರುವ ಸಿಕತ್ ಮತ್ತು ಪ್ರಮಾಣಕ್ಕಿರುವ ಅರ್ಹತೆಯ ಮಾಹಿತಿಯನ್ನು ಆ ಗ್ರಂಥದಲ್ಲಿ ತಿಳಿಸಬೇಕಾರುವುದು ಕಡ್ಡಾಯವಾಗಿದೆ. ಅದೇ ರೀತಿ ಮೌಲಾನ್ ನಮವೀ ಯವರ ' ಈ ದೀನೂರಿ ಎನ್ನು ವವರು ಆ ಕಾಲದ ಗಣ್ಯ ಮುಹದ್ದೀಸೀನರಲ್ಲ ಒಬ್ಬರಾಗಿರುವರು ಅಂತವರ ಬಗ್ಗೆ ಕೇಳಲಿಕ್ಕಿರುವುದಾದರೂ ಏನು?' ಎನ್ನುವ ಮಾತು ವಿಶ್ವಾಸಕ್ಕೆ ಹೊಂದಿಕೊಳ್ಳುವಂತಹ ಮಾತಲ್ಲ ಏಕೆಂದರೆ ಗಣ್ಯ ಮೊಹದ್ದಿಸರ ಸಾಲಿಗೆ ಸೇರಿದರೂ ಅವರು ಸಿಕತ್ ನಲ್ಲಾಗಬೇಕೆಂದಿಲ್ಲ ಕಡ್ಡಾಯವಿಲ್ಲ.[96]

ಐದನೇ ಅಸರ್:

ಪ್ರತ್ಯೇಖವಾಗಿ ಅಲೀ ರ.ರವರಿಂದ ಮತ್ತು ದೊರಕಿರುವುದಲ್ಲದೇ ಸ್ವಹಾಬಾ ಕಿರಾಂ ರ.ರವರಿಂದಲೂ ಇಪ್ಪತ್ತು ರಕಅತ್ ತರಾವೀಹ್ ನ ಅಸರ್ ವಿಷಯವಿವರ ದೊರಕಿರುತ್ತದೆ ಆದರೆ ಅದರ ಶೃಂಖಲೆ ಯನ್ನೂ ಅದರಿಲ್ಲಿರುವ ನ್ಯೂನ್ಯತೆ ಯನ್ನೂ ಜನರ ಮುಂದೆ ಬಿಚಿಟ್ಟು ಚರ್ಚಿಸುವುದ ಅಗತ್ಯ ವಾಗಿದೆ. ಎಲ್ಲರಿಗೂ ಇದರ ಬಗ್ಗೆ ಇರುವ ಮಾಹಿತಿ ತಿಳಿಯಲಿ.

ಅಲೀ ರ.ರವರಿಂದ ಉದ್ದರಿತ ವರದಿಯನ್ನೊಮ್ಮೆ ನೋಡೋಣ, 'ಮುಸನ್ನಿಫ್ ಇಬ್ನ್ ಅಬೀ ಶೈಬಾ' ಮತ್ತು ಬೈಹಕೀ ಯವರ 'ಸುನನುಲ್ ಕುಬ್ರಾ' ದಲ್ಲಿ ಅಬುಲ್ ಹಸನಾಅ ವಿವರಿಸುತ್ತಾರೆ:

---

[95] ತುಹ್ಫತುಲ್ ಅಹ್ವಝ್-3/531
[96] ತುಹ್ಫತುಲ್ ಅಹ್ವಝ್-3/530-531

(أن علي بن أبي طالب -رضي الله عنه- أمر رجلا أن يصلي بالناس خمس ترويحات عشرين ركعة)

'ಅಲೀ ಇಬ್ನ್ ಅಬೀ ತಾಲಿಬ್ ರ. ಜನರಿಗೆ ಐದು ತರವೀಹಾತ್ ಅಂದರೆ ಇಪ್ಪತ್ತು ರಕಅತ್ ನಿರ್ವಹಿಸಲು ಒಬ್ಬ ಪುರಷರಿಗೆ ಆಜ್ಞೆ ಇತ್ತರು.'[97]

ಈ ಅಸರನ್ನು ಬರೆಯುತ್ತಾ ಇಮಾಮ್ ಬೈಹಕೀ ಸ್ವತಃ ಇದನ್ನು 'ಳಯೀಫ್' ಅಂದಿದ್ದಾರೆ. ಅಲ್ಲಾಮ ಝುಹಬೀ ರಹಿಮಹುಲ್ಲಾ. ಅಬುಲ್ ಹಸನಾಅ ರನ್ನು 'ಲಾ ಯುಅರಫು' ಯಾರೆಂದು ಸ್ಥಿರವಾಗಿಲ್ಲ ಎಂದಿದ್ದಾರೆ. ಮತ್ತು ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ 'ಮಜ್ಹೂಲ್' ಅಜ್ಞಾತರೆಂದು ವಿವರಿಸಿದ್ದಾರೆ. ಅಲ್ಲದೇ 'ಅತ್ತಹ್ಝೀಬ್' ನಲ್ಲಿ ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ ಅಬುಲ್ ಹಸನಾಅ ರ ಬಗ್ಗೆ ಬರೆಯುತ್ತಾ 'ಇವರು ಕುರ್‌ಬಾನಿಯ ವಿಷಯದ ಬಗ್ಗೆ ಹದೀಸ್ ಹಿಕ್ಮ ಬಿನ್ ಉಯಯ್ನಾ ಹಂಬಸ್ ರಿಂದ ಅಲೀ ರ.ರವರ ಮಾರ್ಗವಾಗಿ ಉಲ್ಲೇಖಿಸುತ್ತಾರೆ ಇದರಿಂದ ತಿಳಿಯುವುದೇನೆಂದರೆ ತರಾವೀಹ್ ನ ಈ ಅಸರಿನಲ್ಲಿ ಇಬ್ಬರು ವರದಿಗಾರರು ಮರೆಯಾಗಿದ್ದಾರೆ ಅದ್ದರಿಂದ ಇದು ಕ್ಷಿಣವೂ ನ್ಯೂನ್ಯತೆಯನ್ನೂ ಹೊಂದಿದೆ.[98]

ಮುಬಾರಕ್ ಪುರಿ ತುಹ್ಫತುಲ್ ಅಹ್ವಝ್ ನಲ್ಲಿ ಇಮಾಮ್ ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ ರಹಿಮಹುಲ್ಲಾಹ್ ಮತ್ತು ಇಮಾಮ್ ಝುಹಬಿ ರಹಿಮಹುಲ್ಲಾಹ್ ಉದ್ಧರಣೆಗಳನ್ನು ನಕಲು ಮಾಡುತ್ತಾ ಮೌಲಾನ ಶೌಕ್ ನಮವೀ ರಹಿಮಹುಲ್ಲಾಹ್ 'ಆಸಾರು ಸುನನಿನ' ಹಾಷಿಯದಲ್ಲಿ ಇ ಅಸರಿನ ಹೆಬ್ಬಾಗಿಲು ಮತ್ತು ಮಾರ್ಗ ಅಬುಲ್ ಹಸನಾಅ ರಹಿಮಹುಲ್ಲಾಹ್ ರಾಗಿದ್ದಾರೆ ಅವರಾದರೋ 'ಗ್ಯರು ಮಾರೂಫ್' ಆಗಿರುವರು ಎಂದು ಬರೆದಿರುವರು.[99]

ಏಳನೇ ಅಸರ್:

---

[97] ತುಹ್ಫತುಲ್ ಅಹ್ವಝ್–3/527, ಸ್ವಲಾತುತರಾವೀಹ್ ಪುಟ:22 ಉರ್ದು, ಪುಟ:74 ಅರಬೀ.(ಅಲ್ಬಾನೀ)

[98] ಸ್ವಲಾತುತರಾವೀಹ್ ಪುಟ:22 ಉರ್ದು, ಪುಟ:74 ಅರಬೀ.(ಅಲ್ಬಾನೀ)

[99] ತುಹ್ಫತುಲ್ ಅಹ್ವಝ್–3/527

ಬ್ಯಹಕೀಯವರ 'ಸುನನುಲ್ ಕುಬ್ರಾ' ದಲ್ಲಿ ಅಲೀ ಇಬ್ನ್ ಅಬೀ ತಾಲಿಬ್ ರ.ರವರಿಂದ ಇನ್ನೊಂದು ಮಾರ್ಗವಾಗಿ ಬಂದಿರುವುದರಲ್ಲಿ ಹಮ್ಮಾದ್ ಬಿನ್ ಶುಐಬ್, ಅತಾಲ್ ಇಬ್ನ್ ಸಾಯಿಬ್, ಅಬೀ ಅಬ್ದುಲ್ ರಹ್ಮಾನ್ ಅಸ್ಸಲಮೀ ಯವರ ಮಾರ್ಗವಾಗಿ ಉಲ್ಲೇಖ:

("دعا القراء في رمضان فأمر منهم رجلا أن يصلي بالناس عشرين ركعة، قال وكان علي رضي الله عنه يوتر بهم"،[100])

'ರಮದಾನಿನ ತಿಂಗಳಲ್ಲಿ ಅಲೀ ರ.ರವರು (ಕುರ್ರಾಅ) ಖುರ್ ಆನ್ ಕಂಟಪಾಟ ಇರುವವರನ್ನು ಕರೆದು ಅವಲ್ಲೊಬ್ಬರಲ್ಲಿ ಜನರಿಗೆ ಇಪ್ಪತ್ತು ರಕಅತ್ ತರಾವೀಹ್ ನಿರ್ವಹಿಸಲು ಮತ್ತು ಸ್ವತಃ ಅಲೀ ರ.ರವರು ವಿತ್ರ್ ಮಾಡಿಸುತಿದ್ದರು'

ಈ ಅಸರಿನ ಬಗ್ಗೆ 'ಆಸಾರು ಸುನನ್' ನಲ್ಲಿ ಮೌಲಾನ್ ಶೌಕ್ ನಮವಿ ಬರೆಯುತ್ತಾರೆ ಇದರಲ್ಲಿರುವ ಹಮ್ಮಾದ್ ಬಿನ್ ಶುಐಬ್ 'ಳಯೀಫ್' ಆಗಿರುವರು ಮತ್ತು 'ಮಿಝಾನುಲ್ ಇಅತಿದಾಲ್' ನಲ್ಲಿ ಇಮಾಮ್ ಝಹಬೀ ಈ ಅಸರಿನಲ್ಲಿರುವ ಹಮ್ಮಾದ್ ರ ಬಗ್ಗೆ ಹೇಳುತ್ತಾ 'ಇಬ್ನ್ ಮುಯೀನ್' ನಂತಹಾ ಮಹಾ ಮುಹದ್ದಿಸರು ಇವರನ್ನು 'ಳಯೀಫ್' ಎಂದು ಘೋಷಿಸಿದ್ದಾರೆ. ಮತ್ತು ಯಾಹ್ಯಾ ರು ಒಮ್ಮೆ ಹೇಳಿದ್ದರು ಇವರು ವರದಿ ಮಾಡಿದ ಹದೀಸನ್ನು ಬರೆಯಲಾಗುವುದಿಲ್ಲ. ಇಮಾಮ್ ಬುಖಾರಿ ರ.ರವರು ಅವರು ನಿರೀಕ್ಷೆಯಲ್ಲಿರವವರು. ಇಮಾಮ್ ನಸಾಯೀ 'ಳಯೀಫ್' ಎಂದಿರುವರು. ಇಬ್ನ್ ಅದೀ ರ. ರವರು "ಇವರು ವರದಿ ಮಾಡುವ ಬಹಳಷ್ಟು ಹದೀಸ್ ಗಳನ್ನು ಹಿಂಬಾಲಸಲಾಗದ್ದಾಗಿದೆ. ಇದು ಈ ಅಸರಿನ ಬಗ್ಗೆ ಇರುವ ಒಬ್ಬ ಹನಫೀ ಆಲಿಮರ ದಾರ್ಶನಿಕ ವಿಶ್ಲೇಷಣೆಯಾಗಿದೆ, ' ಅತ್ತಹರೀರ್' ನಲ್ಲಿ ಇನ್ನೊಂದು ಆಲಿಮ್ ಇಬ್ನುಲ್ ಹುಮಾಮ್. ರ. ರವರು ಬರೆಯುತ್ತಾರೆ, ಇಮಾಮ್ ಬುಖಾರಿ ಒಬ್ಬರನ್ನು ನಿರೀಕ್ಷಯ ದೃಷ್ಟಿಯಲ್ಲಿ ನೋಡಿದರೆ ಅವರ ಅವರನ್ನು ಪ್ರತ್ಯೇಖ ನಿರೀಕ್ಷಣಾ ಅವಸ್ಥೆಯಲ್ಲಿಡಬೇಕಾಗುವುದು ಅಲ್ಲದೇ ಅವರ ಅಹಾದೀಸ್ ಗಳನ್ನು ಪ್ರಮಾಣಕ್ಕೆ ತೆಗೆದು ಕೊಳ್ಳಲರ್ಹವಲ್ಲದಾಗುವುದು ಮತ್ತು ಅದರಿಂದ ಪುರಾವೆಗಳನ್ನು ನೀಡಲು ಸಾದ್ಯವಾಗದು. ಅಲ್ಲಾಮ ಮುಬಾರಕ್ ಪುರಿ ರ. ರವರು ಹೇಳುತ್ತಾರೆ: ಈ ಅಸರಿನ

[100] ತುಹ್ಫತುಲ್ ಅಹ್ವಝ್-3/527-528, ಸ್ವಲಾತುತರಾವೀಹ್ ಪುಟ:66 ಉರ್ದು, ಪುಟ:74 ಅರಬಿ.

ಶೃಂಖಲೆಯಲ್ಲಿ ಹಮ್ಮಾದ್ ಬಿನ್ ಶುಐಬ್ ಇದ್ದಾರೆ ಇಮಾಮ್ ಬುಖಾರಿ ಅವರ ಬಗ್ಗೆ (ನಳ್ರ್) ನಿರೀಕ್ಷಣೆಯಲ್ಲಿರುವವರೆಂದು ಆದುದರಿಂದ ಅವರ ಅಸರ್ ಪ್ರಮಾಣಕ್ಕೆ ಅರ್ಹವಲ್ಲದೆಂದೂ ಷಾಕ್ಷಿಗೆ ಮತ್ತು ವಿಶ್ವಾಸಕ್ಕೆ ಅರ್ಹರಲ್ಲದವರೆಂದೂ ಹೇಳಿರುವರು.[101]

ಅಲ್ಲಾಮ ಅಲ್ಬಾನಿ ರಹಿಮಹುಲ್ಲಾಹ್ ಇಮಾಮ್ ಬುಖಾರಿ ರ. ರವರು ಹಮ್ಮಾದ್ ರ. ರವರು 'ಕೆಲವೊಮ್ಮೆ ಅವರು ನಿರೀಕ್ಷಣೆಯಲ್ಲಿರುವವರು ಕೆಲವೊಮ್ಮೆ ಮುಂಕರುಲ್ ಹದೀಸ್ ಆಗಿರುವರೆಂದು ಹೇಳಿದ್ದಾರೆ' ಎಂದು ಬರೆದಿರುವರು ಎಂದು ಹೇಳಿರುವರು ಮತ್ತು ಇಮಾಮ್ ಸುಯೂತೀ ಅಲ್ ಮರ್ಘಾಹಿಬ್, ಇಬ್ನ್ ಕಸೀರ್ ಮುಕ್ತಸರ್ ಉಲೂಮುಲ್ ಹದೀಸ್, ಇಬ್ನ್ ಅಲ್ ಹುಮಾಮ್ ಅತ್ತಹ್ರೀರ್, ಅಬೀ ಅಲ್ ಹಸನಾತ್ ಲಕ್ನವೀ, ಅರ್ರಫ್‌ಉ ವತ್ತಕ್ಮೀಲ್, ಹಾಗೂ ಮುಬಾರಕ್ ಪುರಿ ತುಹ್ಫತುಲ್ ಅಹ್ವಝೀ ನಿಂದ ಸಂಗ್ರಹಿಸಿ ಬರೆದಿರುವುದೇನೆಂದರೆ 'ಇಂತಹವರನ್ನು ಪ್ರಮಾಣಕ್ಕೊ, ಸಾಕ್ಷಿಗೊ ಪರಿಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ; ಇನೊಂದು ವಿಷಯವೇನೆಂದರೆ ಮೊಹಮ್ಮದ್ ಇಬ್ನ್ ಘುಳೈಲ್ ಗಣನೆಯ ವಿಷಯದಲ್ಲಿ ಹಮ್ಮಾದ್ ಬಿನ್ ಶಐಬರನ್ನು ಎದುರಿಸಿರುವರು. ಇವರು ಉಲ್ಲೇಖಿಸಿದ ಅಸರಿನಲ್ಲಿ ಇಪ್ಪತ್ತರ ಗಣನೆ ಪದ ಇಲ್ಲ ಆದುದರಿಂದ ಉಸೂಲುಲ್ ಹದೀಸಿನ ಆಧಾರದಲ್ಲಿ ಈ ಅಸರ್ ಮುಂಕರ್ ಆಗಿರುತ್ತದೆ.[102]

ಎಂಟನೇ ಅಸರ್:

ಇಪ್ಪತ್ತು ರಕಅತ್ತಿನ ವಿಷಯದಲ್ಲಿ ಉಬಯೀ ಇಬ್ನ್ ಕಅಬ್ ರ.ರಿಂದಲೂ ಕೆಲವು ಆಸಾರ್ ದೊರಕುತ್ತದೆ ಅದರಲ್ಲೊಂದು ಮುಸನ್ನಿಫ್ ಅಬೀ ಶೈಬಾ ರಲ್ಲಿದೆ ಅದರಲ್ಲಿ ಅಬ್ದುಲ್ ಅಝೀಝ್ ಬಿನ್ ರಫೀಅ ವರದಿ ಮಾಡುತ್ತಾರೆ:

(كَانَ أُبَيُّ بنُ كَعبٍ يُصَلِّي بِالنَّاسِ فِي رَمَضَانَ بِالمدِينَةِ عِشرِينَ رَكعَةً ، وَيُوتِرُ بِثَلاثٍ)

101 ತುಹ್ಫತುಲ್ ಅಹ್ವಝೀ–3/527

102 ಸ್ವಲಾತುತರಾವೀಹ್ ಪುಟ:74–75 ಉರ್ದು, ಪುಟ:66–67 ಅರಬಿ.

ರಮದ್ವಾನಿನಲ್ಲಿ ಉಬಯೀ ಇಬ್ನ್ ಕಅಬ್ ರ. ಜನರಿಗೆ ಇಪ್ಪತ್ತು ರಕಅತ್ ತರಾವೀಹ್ ಮತ್ತು ಮೂರು (ರಕಅತ್)ವಿತ್ರ್ ನಿರ್ವಹಿಸಲ್ಪಡುತಿದ್ದರು.[103]

ಈ ಅಸರಿನ ಬಗ್ಗೆ ಮೌಲಾನ ಶೌಕ್ ಅನ್ನಮವೀ ಹನಫೀ 'ಅಬ್ದುಲ್ ಅಝೀಝ್ ಬಿನ್ ರಫೀಅರು ಉಬಯೀ ಇಬ್ನ್ ಕಅಬ್ ರನ್ನು ಕಂಡಿಲ್ಲ ಎಂದಿರುವರು, ಅಲ್ಲಾಮ ಮುಬಾರಕ್ ಪುರಿ ' ಮುಂಕತಿಅ' (ಶೃಂಖಲೆ ಮುರಿದಿದೆ) ಎಂದಾಗುತ್ತದೆ ಇದರ ಅರ್ಥ ಎಂದಿರುವರು. ಅಲ್ಲದೇ (ಇಂಕಿತಾಅ ಮುಸ್ತಝಾದ್) ಶೃಂಖಲೆಯು ಹೆಚ್ಚು ಶಕ್ತಿಯುತವಾಗಿ ಮುರಿದಿದೆ ಎನ್ನುವುದಕ್ಕೆ ಉಬಯೀ ಇಬ್ನ್ ಕಅಬರ ಇನ್ನೊಂದು ಹದೀಸ್ ಅದರಲ್ಲಿ ಅವರು ತನ್ನ ಮನೆಯವರಿಗೆ ಹನ್ನೊಂದು ರಕಅತ್ ತರಾವೀಹ್ ನಮಾಝ್ ನಿರ್ವಹಿಸಿರುವರೆಂದು ಪ್ರವಾದಿ ಸ.ರವರು ಅದನ್ನು ನೋಡಿ ಸುಮ್ಮನಿದ್ದರೆಂದೂ ವರದಿ ಬಂದಿರುವುದು ಬಲವಾದ ಪುರಾವೆ ಯಾಗಿದೆ.

ಅದೇರೀತಿ ಉಮರ್ ರ. ರವರು ಉಬಯೀ ಇಬ್ನ್ ಕಅಬ್ ರ. ರವರಿಗೆ ಮತ್ತು ತಮೀಮದ್ದಾರಿ ರ. ರವರಿಗೆ ಜನರಿಗೆ ಹನ್ನೊಂದು ರಕಅತ್ (ಮೂರು ರಕಅತ್ ವಿತ್ರ್ ನೊಂದಿಗೆ) ನಿರ್ವಹಿಸಿಕೊಡಲು ಆಜ್ಞೆ ಇತ್ತಿರುವುದು ಸ್ವಹೀಹ್ ಸನದಿನಲ್ಲಿ ಬಂದಿರುವ ಅಸರಿನ ವಿರುದ್ಧವೂ ಆಗಿದೆ, ಇವೆರಡರ ಬಗ್ಗೆ ನಾವು ಮೇಲಿನ ಪುಟಗಳಲ್ಲಿ ತಿಳಿಸಿರುವೆವು.[104]

ಅಲ್ಲಾಮ ನಾಸಿರುದ್ದೀನ್ ಅಲ್ಬಾನಿ ರಹಿಮಹುಲ್ಲಾಹ್ ಅಬ್ದುಲ್ ಅಝೀಝ್ ಮತ್ತು ಉಬಯೀ ಇಬ್ನ್ ಕಅಬರ ಮದ್ಯೆ ಇರುವ ಸಂಪರ್ಕಕಡಿತವನ್ನು ವಿವರಿಸುತ್ತಾ 'ಅತ್ತಹ್ ಝೀಬತ್ತಹ್ ಝೀಬ್' ನ ವತಿಯಿಂದ ಇವರಿಬ್ಬರ ಮರಣದ ಮದ್ಯೆ ನೂರು ವರುಷದ ಅಂತರವಿದೆ. (ಅಬ್ದುಲ್ ಅಝೀಝ್ ರ. ಉಬಯಿ ಇಬ್ನ್ ಕಅಬರನ್ನು ನೋಡಲೇ ಇಲ್ಲವೆಂದಾದಾಗ ಅವರ ಈ ವರದಿಯನ್ನು ಯಾವ ರೀತಿಯಲ್ಲಿ ಒಪ್ಪಿಕೊಳ್ಳುವುದು?)

ಒಂಬತ್ತನೇ ಅಸರ್:

ದ್ವೀಯಾ ಅಲ್ ಮುಕದ್ದಸೀಯವರ 'ಅಲ್ ಮುಕ್ತಾರ್' ನಲ್ಲಿ ಉಬಯಿ ಇಬ್ನ್ ಕಅಬರ ಬೇರೊಂದು ಹದೀಸಿನ ಉಲ್ಲೇಖದಲ್ಲಿ ಅಬೂ ಜಅಫರ್ ಅನ್ ರಬೀಅ ಬಿನ್ ಅನಸ್

[103] ತುಹ್ಫತುಲ್ ಅಹ್ವಝ್-3/528, ಸ್ವಲಾತುತರಾವೀಹ್ ಪುಟ:75 ಉರ್ದು, ಪುಟ:67 ಅರಬಿ.
[104] ತುಹ್ಫತುಲ್ ಅಹ್ವಝ್-3/528-529.

ಅನ್ ಅಬೀ ಅಲ್ ಆಲಿಯಾ ರ ಮಾರ್ಗವಾಗಿ ಅಬುಲ್ ಆಲಿಯಾ ವರದಿ ಮಾಡಿರುವರು:

(أَنَّ عُمَرَ بنَ الخَطَّابِ أَمَرَ أُبَيّا اَن يُصَلِّي بِالنَّاسِ فِي رَمَضَانَ ....فَصَلِّي بِهِم عِشرِينَ رَكعَةً)

ಉಮರ್ ರ.ರವರು ಉಬಯಿ ಇಬ್ನ್ ಕಅಬ್ ರ.ರವರಿಗೆ ಜನರಿಗೆ ನಮಾಝ್ ನಿರ್ವಹಿಸಿಕೊಡಲು ಕಲ್ಪಿಸಿದರು.....ಅವರು ಇಪ್ಪತ್ತು ರಕಅತ್ ನಿರ್ವಹಿಸಿಕೊಟ್ಟರು.[105]

ಈ ಮೇಲೆಕಾಣಿಸಿದ ಅಸರಿನ ಶೃಂಖಲೆ 'ಳಯೀಫಾಗಿದ್ದು'. ಇದರ ಮತ್ನ್ ಮುಂಕರಾಗಿದೆ. ವರದಿಗಾರ ಅಬೂ ಜಅಫರ್ ಪೂರ್ಣ ಹೆಸರು ಈಸ ಇಬ್ನ್ ಅಬೂ ಈಸ ಬಿನ್ ಹಾಮಾನ್ ಆಗಿದೆ. 'ಳಯೀಫ್' ವರದಿಗಾರ ಪಟ್ಟಿಯಲ್ಲಿ ಇಮಾಮ್ ಝುಹಬೀ ಇವರನ್ನು ಸೇರಿಸಿದ್ದಾರೆ, ಕಸೀರುಲ್ ವಹಮ್ ಎಂದು ಅಬೂ ಝುರಅ ರ.ಹೇಳುತ್ತಾರೆ. ಇಮಾಮ್ ಅಹ್ಮದ್ ರ. ಕೆಲವೊಮ್ಮೆ ಅಶಕ್ತರಲ್ಲ ಎಂದು ಕೆಲವೊಮ್ಮೆ ಶಕ್ತರೆಂದೂ ಹೇಳಿದ್ದಾಗಿ ಕಾಣುತ್ತದೆ. ಜ್ಞಾಪಕ ಶಕ್ತಿಯಲ್ಲಿ ಕೊರೆತೆಯುಳವರೆಂದು ಫುಲಾಸ್.ರ. ವರರು ಹೇಳಿರುವರು. ಹೊರತು ಕೆಲವು ಮುಹದ್ದಿಸೀನ್ ರು ಇವರು ಸಿಕತ್ ಉಳ್ಳವರೆಂದು ಹೇಳಿರುವರು. ಇಮಾಮ್ ಝುಹಬೀ 'ಅಲ್ ಕುಣ್ಯೀ' ಯಲ್ಲಿ ಯಲ್ಲಿ ಈ ವರದಿಗಾರರನ್ನು ಎಲ್ಲಾಮುಹದ್ದಿಸರು ಮಜ್ರೂಹ್ ಎಂದು ಕರಾರುವಕ್ಕಾಗಿ ಹೇಳಿರುವರು ಎಂದಿದ್ದಾರೆ. 'ಅತ್ತಕ್ರೀಬ್' ನಲ್ಲಿ ಹಾಫಿಳ್ ಇಬ್ನ್ ಹಜರ್ ಅಸ್ಕಲಾನಿ ತಪ್ಪು ಜ್ಞಾಪಕರು ಎಂದಿದ್ದಾರೆ. ಸ್ವಾಹಿಬುಲ್ ಮನಾಕೀರ್(ಮುಂಕರ್ ವರದಿಯನ್ನು ಹರಡುವವ) ಎಂದು ಅಲ್ಲಾಮ ಇಬ್ನುಲ್ ಕಯ್ಯೂಮ್ ಅಲ್ ಜೌಝೀ ವರ್ಣಿಸಿದ್ದಾರೆ. ಪ್ರತ್ಯೇಖವಾಗಿ ವರದಿ ಮಾಡುವುದರಲ್ಲಿ ಒಬ್ಬೊಂಟಿಗನಾದರೆ ಅವರ ವರದಿಯನ್ನು ಪ್ರಮಾಣಕ್ಕೆ ಅರ್ಹವೆಂದು ಹೇಳಲಾಗುವುದಿಲ್ಲ[106]

ಹತ್ತನೇ ಅಸರ್:

ಮುರ್ವಝೀಯಲ್ಲಿ ಅಅಮಷ್, ಖಿಯಾಮುಲ್ಲೈಲ್ ನ ಅದ್ಯಾಯದ ಕೆಳಗೆ ಅಬ್ದುಲ್ಲಾ ಇಬ್ನ್ ಮಸ್ಊದ್ ರ ಬಗ್ಗೆ ವಿವರಿಸುತ್ತಾರೆ.

[105] ಸ್ವಲಾತುತರಾವೀಹ್ ಪುಟ:76 ಉರ್ದು, ಪುಟ:69 ಅರಬಿ.
[106] ಝಾದುಲ್ ಮಆದ್-1/275-276

(كَانَ يُصَلِّي عِشرِينَ رَكعَةً ، وَيُوتِرُ بِثَلاثٍ)

'ಅಬ್ದುಲ್ಲಾ ಇಬ್ನ್ ಮಸ್ ಊದ್ ರ. ರವರು ಇಪ್ಪತ್ತು ರಕಅತ್ ತರಾವೀಹ್ ಮತ್ತು ವಿತ್ರ್ ನಿರ್ವಹಿಸಿ ಕೊಡುತ್ತಿದ್ದರು'.[107]

ಅಲ್ಲಾಮ ಮುಬಾರಕ್ ಪುರಿ ರ. ಈ ಅಸರ್ 'ಮುಂಕತಿಅ' ಅಅಮಷ್ ರವರು ಅಬ್ದುಲ್ಲಾ ಇಬ್ನ್ ಮಸ್ ಊದರನ್ನು ಕಂಡಿಲ್ಲ ಎಂದು ಬರೆದಿರುವರು.[108]

ಅಲ್ಲಾಮ ಅಲ್ಬಾನಿ ರ. ಬರೆ ಮುಂಕತಿಅ ಮಾತ್ರವಲ್ಲ ಮುಅಲ್ಲಿಲ್ ( ) ಹೇಳುವುದು ಉತ್ತಮ ಹೆಚ್ಚು ಉತ್ತಮ ಕಾರಣ ಮುಸ್ನದ್ ಇಬ್ನ್ ಮಸ್‌ಊದ್ ಅನ್ನು ಓದು ಪ್ರತೀಯೊಬ್ಬರಿಗೂ ಚಿರಪರಿಚಿತವಾಗಿದೆ ಇವರಿಬ್ಬರ ಮದ್ಯೆ ಎರಡು ವರದಿಗಾರರು ಕಾಣದಾಗಿರುವರು ಆದುದರಿಂದ ಈ ಆಸರ್ ಮುಂಕತಿಅ ದ ಬದಲು ಮುಅಲ್ಲಿಲ್ ಆಗಿರುವುದರಿಂದ 'ಳಯೀಫ್' ಆಗಿದೆ.[109]

ಇನ್ನು ಇಪ್ಪತ್ತು ರಕಅತ್ತಿನ ತರಾವೀಹ್ ನ ಬಗ್ಗೆ ಇರುವ ಕೆಲವು ಆಸಾರುಗಳನ್ನು ಮತ್ತು ಕೆಲವರು ಬಳಿ ಇದಕ್ಕೆ ಇಜ್ಮಾಅ ಎಂದು ಹೇಳುತ್ತಿರುವುದನ್ನೂ ಆದರೆ ಈ ಇಜ್ಮಾಅ ಗೆ ಪುರಾವೆ ಗಳಿಲ್ಲ ಅವುಗಳನ್ನು ಮುಂದೆ ವಿವರವಾಗಿ ಬರುವುದು. ಅಲ್ಲದೇ ಆ ಆಸಾರುಗಳು ಳಯೀಫ್ ಆಗಿರುತ್ತದೆ ಮತ್ತು ಸ್ವಹೀಹುಲ್ ಬುಖಾರಿ ಮತ್ತು ಮುಸ್ಲಿಂ ನಲ್ಲಿರುವ ಮರ್ ಫೂಅ ಹದೀಸಿಗೆ ವಿರುದ್ದವಾಗಿದೆ.

ಈ ಎಲ್ಲಾ ಹದೀಸಿನ ಮೊತ್ತ ಸ್ಥಿತಿ:

ಏಕಾವಸ್ಥೆಯಲ್ಲಿ ಇಪ್ಪತ್ತು ರಕಅತ್ತಿನ ಬಗ್ಗೆ ಬಂದಿರುವ ಎಲ್ಲಾ ಆಸಾರುಗಳನ್ನು ನಾವಿಲ್ಲಿ ಉದ್ಧರಿಸಿದ್ಧೇವೆ ಅವು ಳಯೀಫ್ ಮತ್ತು ಪ್ರಮಾಣಕ್ಕೆ ಅರ್ಹವಲ್ಲದ್ದಾಗಿವೆ, ಆದರೆ ಕೆಲವೊಮ್ಮೆ ಹದೀಸ್ ಅಥವಾ ಆಸರ್ ಒಂದು ಶೃಂಖಲೆಯಲ್ಲಿ ಳಯೀಫಾಗಿದ್ದು ಇನ್ನೊಂದು ಮಾರ್ಗವಾಗಿ ಅವು ಳಯೀಫಿನಿಂದ ಹೊರತು ಪಡುವುದೋ ಳಯೀಫಾಗಳು ಉಂಟಾದ ಕಾರಣಗಳು ನೀಗುವುದೂ ಉಂಟು. ನಂತರ ಆ

[107] ತುಹ್ಫತುಲ್ ಅಹ್ವಝ್ 3/529, ಸ್ವಲಾತುತರಾವೀಹ್ ಪುಟ:78 ಉರ್ದು ಪುಟ:70 ಅರಬಿ

[108] ಟಿಪ್ಪಣಿ 107

[109] ಸ್ವಲಾತುತರಾವೀಹ್ ಪುಟ:71

ಆಸಾರುಗಳೂ ಒಟ್ಟಿಗೆ ಸೇರಿ ಪ್ರಮಾಣಕ್ಕೆ ಅರ್ಹವಾಗುತ್ತದೆ. ಆದರೆ ಇಪ್ಪತ್ತು ರಕಅತ್ ತರಾವೀಹ್ ನ ಆಸಾರುಗಳು ಯಾವುದೇ ರೀತಿಲಯಲ್ಲಿ ಪುರಾವೆಗೆ ಅರ್ಹ ಎನಿಸಿಕೊಳ್ಳುವುದರಲ್ಲಿ ಹೊರತುಪಟ್ಟಿವೆ. ಈ ಶತಮಾನಗಳಲ್ಲಿ ಹದೀಸ್ ಶಾಸ್ತ್ರ ಪಂಡಿತರಲ್ಲಿ ಒಂದನೇ ಪಂಕ್ತಿಯಲ್ಲಿರುವ ಅಲ್ಲಾಮಾ ನಾಸಿರುದ್ದೀನ್ ಅಲ್ಬಾನಿ ರಹಿಮಹುಲ್ಲಾಹ್, ತನ್ನ ಕಿತಾಬು ಸ್ವಲಾತುತರಾವೀಹ್ ನಲ್ಲಿ (هذه الروايات لا يقوي بعضها بعضا) ಬರೆಯುತ್ತಾರೆ (ಉಮರ್ ರ. ರವರಿಂದ ಅಥವಾ ಅವರ ಕಾಲದಲ್ಲಿ ಹೊಂದಿಕೊಂಡು ಬಂದಿರುವ) ಬಹಳಷ್ಟು ವರದಿಗಳು ಮೇಲೆ ಹೇಳಿದ ಎರಡೂ ಕಾರಣಗಳಿಂದ ಪುರಾವೆಗೆ ಅರ್ಹವಾಗವ ಯೋಗ್ಯತೆಯನ್ನು ಹೊಂದಿಲ್ಲ.

ಮೊದಲ ಕಾರಣ:

ಈ ಎಲ್ಲಾ ವರದಿಗಳು ಪುರಾವೆಗೆ ಅನರ್ಹವಾಗಿರುವುದರ ಮೊದಲನೇಯ ಕಾರಣ ಹಲವಾರು ವರದಿಗಳು ತೋರುತ್ತಿರುವುದು ಯಾತಾರ್ಥದಲ್ಲಿ ಅವು ಹಲವು ವರದಿಗಳಲ್ಲ ಕಾರಣ ನಮ್ಮಲ್ಲಿ ಸಾಯಿಬ್ ಇಬ್ನ್ ಯಝೀದ್ ಅನ್ಸಾರಿ.ರ ರವರ ವರದಿಯ ಹೊರತು ಬೇರೆ ಯಾವ ವರದಿಯೂ 'ಮುತ್ತಸಿಲ್' ಶೃಂಖಲೆ ಹೊಂದಿಕೊಂಡಿಲ್ಲ ಯಝೀದ್ದ ಬಿನ್ ರುಮಾನ್, ಮತ್ತು ಯಾಹ್ಯಾ ಬಿನ್ ಸಯೀದ್ ಅನ್ಸಾರಿ ಯವರ ವರದಿ ಮುಂಕತಿಅ ಆಗಿರುತ್ತದೆ. ಮತ್ತು ಇವುಗಳಲ್ಲಿ ಮಾರ್ಗವೇ ಅವುಗಳಲ್ಲಿ ಮೊದಲು ವರದಿ ಮಾಡಿರುವ ಕೆಲವಲ್ಲಿ ಆಗಿರಬಹುದು ಅದಲ್ಲದೇ ಇನ್ನೂ ಬಹಳಷ್ಟು ಸಂಶಯಗಳಿಗೂ ಸಾದ್ಯವಿದೆ ವಿಷೇಶವೇನೆಂದರೆ ಪ್ರಖ್ಯಾತಿಯಲ್ಲಿರುವುದು ಹೆಚ್ಚು ಸಂಶಯಗಳಿಂದ ಪುರಾವೆಗಳು ನಿಷ್ಫಲವಾಗುತ್ತದೆ.

ಎರಡನೇ ಕಾರಣ:

ಮುಹಮ್ಮದ್ ಬಿನ್ ಯೂಸುಫ್ ಸಾಬಿತ್ ವರದಿಗಾರರ ಮಾರ್ಗವಾಗಿ ಸಾಯಿಬ್ ರ.ರವರಿಂದ ಉಲ್ಲೇಖಿತ ಹನ್ನೊಂದು ರಕಅತ್ ನ ವರದಿ ಸ್ವಹೀಹ್ ಆಗಿದೆ ಅದನ್ನೇ ಇಮಾಮ್ ಮಾಲಿಕ್ ರ.ರವರು ವಿವರಿಸಿದ್ದಾರೆ ಮತ್ತು ಯಾರು ಗಣನೆಯ ವಿಷಯದಲ್ಲಿ ಇಮಾಮ್ ಮಾಲೀಕರ ವಿರುದ್ಧಹೋಗಿರುವರೋ ಅದು ಅವರಿಂದ ಸಂಭವಿಸಿದ ತಪ್ಪಿನ ಕಾರಣವಾಗಿದೆ. ಇದೇ ರೀತಿ ಮೊಹಮ್ಮದ್ ಇಬ್ನ್ ಯೂಸುಫ್ ರ.ರವರ ವಿರುದ್ಧ ಹೋದವರು ಇಬ್ನ ಖುಸೈಫಾ ಮತ್ತು ಇಬ್ನ್ ಅಬೀ ಝಿಯಾಬ್ ರವರ ವರದಿ

'ಷಾಝ್' ಆಗಿರುತ್ತದೆ. ಹಾಗೂ ಇಲ್ಮುಲ್ ಇಸ್ತಿಲಾಹ್ (ಪಾರಿಭಾಷಿಕ ವಿದ್ಯೆ)ಯಲ್ಲಿ ನಿಶ್ಚಿತವಾಗಿರುವುದೇನೆಂದರೆ ಷಾಝ್ ವರದಿಗಳು ಮುಂಕರ್ ಮತ್ತು ಮರ್ದೂದ್‌ಆದ ಕಾರಣ ಅವು ತಪ್ಪಿನ ನತೀಜವಾಗಿವೆ ಮತ್ತು ತಪ್ಪಾದ ವರದಿಗಳು ಪುರಾವೆಗೆ ಅರ್ಹ ಮತು ಶಕ್ತವಾಗುವುದಿಲ್ಲ. ಇಬ್ನ್ ಸಲಾಹ್ ನ ಮುನ್ನುಡಿಯಲ್ಲಿ: 'ಯಾರಾದರೂ ವರದಿಗಾರ ವರದಿಯನ್ನು ಉದ್ಧರಿಸುವಲ್ಲಿ ಒಬ್ಬೊಂಟಿಗನಾದಲ್ಲಿ ಆ ವರದಿಗಾರ ಯಾವುದಾದರೂ ಹಿಫ್ಝ್ (ಶೇಖರಣೆ) ಮತ್ತು ಳಬ್ತ್ (ಹೊಂದಾಣಿಕೆ) ಆದ ವರದಿಗಾರರನ್ನು ವಿರುದ್ದವಾಗಿಸಿದರೆ ಅವರ ವರದಿಯನ್ನು ಷಾಝ್ ಎಂದು ಘೋಷಿಸಲಾಗುವುದು. ಮತ್ತು ಅವರು ಇಂತಹಾ ಯಾವುದೇ ವರದಿಗಾರ ವಿರುಧ್ಧವಾಗದೇ ಹೊರತು ಯಾರೂ ವರದಿ ಮಾಡದ ಒಂದನ್ನು ವರದಿ ಮಾಡಿದರೆ ಅದಾಲತ್, ಹಾಫಿಳ್, ಮತ್ತು ಮೂಸಿಕ್ ಇತ್ತಿಫಾಕ್ ಮತ್ತು ಝುಬ್ತ್ ಆದ ಕಾರಣ ಅವರ ಸೇರಿಸುವಿಕೆಯನ್ನು ಸ್ವೀಕರಿಸಲಾಗುವುದು'.

ಈ ಕಾಯಿದೆಯ ಅನುಸಾರ ಇಪ್ಪತ್ತು ರಕಅತ್ ನ ಬಗ್ಗೆ ಇರುವ ವರದಿ ಹಿಫ್ಝ್ ಮತ್ತು ಝುಬ್ತ್ ನ ವಿಷಯದಲ್ಲಿ ಮೊದಲ ವರದಿಗಳನ್ನು ವಿರೋಧ ವ್ಯಕ್ತಪಡಿಸುವ ಕಾರಣದಿಂದ ಷಾಝ್ ಮತ್ತು ಮರ್ದೂದ್ ಆಗಿವೆ, ಸರ್ವೇಸಾಮನ್ಯ ಉಲಮಾವು ಹದೀಸ್ ಷಾಝ್ ಅನ್ನು ಮತ್ತು ಅದರಲ್ಲಿ ಬಂದಿರುವ ತಪ್ಪುಗಳನ್ನು ಬಹಿರಂಗವಾಗಿರುವುದರಿಂದ ಅವುಗಳನ್ನು ರದ್ದು ಗೊಳಿಸಿರುವರು ಹಾಗೂ ಅವುಗಳಲ್ಲಿ ಯಾವುದಾದರೂ ತಪ್ಪುಗಳು ಸಾಬೀತಾದರೆ ಹೇಗೆ ತಾನೆ ವಿಶ್ವಾಸಕ್ಕೆ ಅರ್ಹವಾಗುವುದು ಇದರಿಂದ ಬೇರೆ ವರದಿಗಳಿಗೆ ಬಲಗೊಳಿಸಲ್ಪಡುವುದಾದರೂ ಹೇಗೆ? ಆದುದರಿಂದ ಸಾಬೀತಾಗುವುದೇನೆಂದರೆ ಷಾಝ್ ಮತ್ತು ಮುಂಕರ್ ವರದಿಗಳು ಗಮನಾರ್ಹವಾಗುವುದಿಲ್ಲ ಮಾತ್ರವಲ್ಲ ಅವುಗಳಿಂದ ಪುರಾವೆಗಳನ್ನು ಹಿಡಿಯಲು ಸಾದ್ಯವಿಲ್ಲ. ಷಾಝ್ ಆಗಿರುವ ವರದಿ ಇಲ್ಲದೇ ಇರುವುದಕ್ಕೆ ಸಮಾನ. ಇನ್ನು ಯಝೀದ್ ಮತ್ತು ಯಾಹ್ಯಾ ರವರ ಮುಂಕತಿಅ ವರದಿಗಳ ಬಗ್ಗೆಯೂ ಸಾಬೀತಾಗುವುದೇನೆಂದರೆ ಅವರಿಬ್ಬರೂ ಒಬ್ಬರಿಗೊಬ್ಬರು ಬಲಪಡಿಸಿಕೊಳ್ಳಲು ಯೋಗ್ಯರಲ್ಲ ಮತ್ತು ಈ ವಿಷಯದಲ್ಲಿ ಶೈಖುಲ್ ಇಸ್ಲಾಂ ಇಬ್ನ್ ತೀಮೀಯ ರಹಿಮಹುಲ್ಲಾ ಹಾಗೂ ಅಮೀರ್ ಸನ್‌ಆನಿ ರಹಿಮಹುಲ್ಲಾಹ್ ರ ಇವುಗಳಿಗೆ ಒತ್ತುನೀಡುವ ಕಾನೂನಿ ಮಾತುಗಳನ್ನು ನಕಲು ಮಾಡಿರುವರು.

ಮುಂದುವರೆದು ಬರೆಯುತ್ತಾ 'ಉಮರ್ ರ. ಮೂಲಕ ಬಂದಿರುವ ವರದಿಗಳ ಬಗ್ಗೆ ಈ ಮೇಲೆ ವಿವರಿಸಿರುವುದಕ್ಕೆ ಸರಿಯಾಗಿ ಅಲೀ ರ. ರವರ ಮತ್ತು ಇತರ ಸ್ವಹಾಬಿಗಳಿಂದ ವರದಿಯಾದ ಬಗ್ಗೆಯೂ ಹೇಳಬಹುದು ಆದರೆ ಹೆಚ್ಚಾಗಿ ಹೇಳುವುದೇನೆಂದರೆ ಇವುಗಳಲ್ಲಿ ಬಹಳಷ್ಟು ಳಯೀಫ್ ಗಳಾಗಿವೆ ಮೇಲೆ ವಿವರಿಸಿದ ಎರಡನೇ ಮಾರ್ಗವಾಗಿ ಬಂದ ಅಲೀ ರ.ರವರ ವರದಿ. ಅಲ್ಲದೇ ಎರಡನೇ ಮಾರ್ಗವಾಗಿ ಬಂದ ವರದಿ ಮೊದಲು ಬಂದ ವರದಿಗಿಂತ ಬಲವಾದದ್ದಲ್ಲ [110]

ಸಾಪ್ತಾಹಿಕ 'ಅಲ್ ಇಅತಿಸ್ವಾಮ್' ನಲ್ಲಿ ಒಂದು ಸಂಪಾದಕೀಯ:

ಪವಿತ್ರ ಖುರ್ಆನ್ ಮತ್ತು ಪ್ರತ್ಯೇಖವಾಗಿ ಹದೀಸ್ ಗಳಲ್ಲಿ ಕೆಲವು ಕಾರಣಗಳ ನಿಮಿತ್ತ ಕೆಲವು ತಿರುಚುವಿಕೆ ಮತ್ತು ವಿನಿಮಯಗಳು ಸಂಭವಿಸಿವೆ ಕೆಲವು ದೀನೀ ಪಂಡಿತವರೇಣ್ಯರು ತಮ್ಮಗೆ ಸಮ ಕಂಡಂತೆ ಅಯೋಗವನ್ನು ನಿರ್ಮಿಸಿದರು. ಹಾಗೂ ಈ ವಿನಿಮಯಗಳನ್ನು ಒಂದು ಸ್ಥಳಗಳಲ್ಲಿ ಸೀಮಿತಗೊಳಿಸದೇ ಹಲವು ಸ್ಥಳ ಮತ್ತು ವಿಷಯಗಳಲ್ಲಿ ಬಳಸಿಕೊಂಡರು ಅದರಲ್ಲೊಂದು 'ವಿಷಯ ತರಾವೀಹ್' ಅಗಿದೆ ಅದರ ಬಗ್ಗೆ ಒಂದು ಹದೀಸ್ ಕೂಡ ಇದೆ.

ಈ ವಿನಿಮಯಗಳ ಬಗ್ಗೆ ಅಲ್ಲಾಮ ಶೈಖ್ ಅಲ್ ಹದೀಸ್ ಮೌಲಾನ ಸುಲ್ತಾನ್ ಮಹಮೂದ್ ಮುಹದ್ದಿಸ್ ಜಲಾಲಪುರಿ ಯವರ 'ರಿಸಾಲ' (نعم الشهود على تحريف الغالين في سنن ابي داود) ಎಂಬ ಗ್ರಂಥ ಮುದ್ರಣಗೊಂಡಿದೆ ಕೆಲವು ವರ್ಷಗಳ ನಂತರ ಸಾಪ್ತಾಹಿಕ 'ಅಲ್ ಇಅತಿಸಾಮ್' ಷಿರ್ಶಿಕೆ 'ಸುನನ್ ಅಬೀ ದಾವುದ್ ನಲ್ಲಿ ವಿನಿಮಯ' ಎನ್ನು ತಲೆಬರಹದಡಿಯಲ್ಲಿ ಪ್ರಕಾಶಿತಗೊಂಡ್ಡಿತ್ತು. ಅದರ ಪ್ರಾರಂಭದ ಪುಟಗಳಲ್ಲಿಯ ಒಂದರಲ್ಲಿ ಮೌಲಾನ ಮಹಮೂದ್ ಮುಹದ್ದಸ್ ಜಲಾಲ ಪುರಿ ಮುಲ್ತಾನಿಯವರಲ್ಲಿ ಒಂದು ಪ್ರಶ್ನೆ ಕೇಳಲಾಯಿತು: ಲಾಹೋರಿನ ಫರೀದ್ ಬುಕ್ ಸ್ಟಾಲ್ ನಲ್ಲಿ ಪ್ರಕಾಶಿತ ಗೊಂಡ 'ಅಬೀ ದಾವೂದ್' ಗ್ರಂಥದ ಪುಟ 531 ರಲ್ಲಿ :

---

[110] ಸ್ವಲಾತುತರಾವೀಹ್ ಪುಟ:56–59

(حَدَّثَنَا شُجَاعُ بْنُ مَخْلَدٍ، حَدَّثَنَا هاشِمٌ، أَخْبَرَنَا يُونُسُ بْنُ عُبَيْدٍ، عَنِ الْحَسَنِ، أَنَّ عُمَرَ بْنَ الْخَطَّابِ، جَمَعَ النَّاسَ عَلَى أُبَيِّ بْنِ كَعْبٍ كَانَ يُصَلِّي لَهُمْ عِشْرِينَ ركعة وَلاَ يَقْنُتُ بِهِمْ إِلاَّ فِي النِّصْفِ الْبَاقِي...الحديث)

ನಮಗೆ ಶುಜಾಅ ಬಿನ್ ಮುಹಮ್ಮದ್ ಹದೀಸ್ ವಿವರಿಸಿದರು, ನಮಗೆ ಹಾಷಿಮ್ ಹದೀಸ್ ವಿವರಿಸಿದರು, ನಮಗೆ ಯೂನುಸ್ ಬಿನ್ ಉಬೈದ್ ರಿಂದ ಹಸನ್ ರವರ ಮುಖಾಂತರ ವಿವರ ದೊರಕಿತು “ಉಮರ್ ರ.ರವರು ಉಬಯೀ ಇಬ್ನ್ ಕಅಬರ ಇಮಾಮತ್ತಿನಲ್ಲಿ ಜನರ್ನು ಸೇರಿಸಿದರು ಅವರು ಜನರಿಗೆ ಇಪ್ಪತ್ತು ರಕಅತ್ ನಮಾಜು ಮಾಡಿಸುತ್ತಿದ್ದರು ಮತ್ತು ಕುನೂತ್ (ರಮಝಾನಿನ) ಬಾಕಿ ಇರುವ ಅರ್ಧದಲ್ಲಿ ಮಾತ್ರ ಒದುತಿದ್ದರು.”

ಯಾತಾರ್ಥದಲ್ಲಿ ಇದೇ ಹದೀಸಿನ ಈಜಿಪ್ತಿನಲ್ಲಿ ಮುದ್ರಣಗೊಂಡದ್ದರಲ್ಲಿ (عِشْرِينَ لَيْلَةً) ಎಂದು ಬಂದಿದೆ ಅದೇ ರೀತಿ ಮುಶ್ಕಾತ್ ಲಾಹೋರಿನಿಂದ ಮುದ್ರಣಗೊಂಡದ್ದರಲ್ಲೂ (عِشْرِينَ لَيْلَةً) ಎಂದಿದೆ “ಮಝಾಹಿರ್ ಹಕ್” ಮುದ್ರಣ ಲಕ್ನೋ ದರಲ್ಲೂ (عِشْرِينَ لَيْلَةً) ಎಂದಿದೆ ಆದುದರಿಂದ ‘ಲೈಲ’ ಎನ್ನುವ ಸ್ಥಳದಲ್ಲಿ ‘ರಕಅ’(ಇಪ್ಪತ್ತು ರಾತ್ರಿಯ ಬದಲು ಇಪ್ಪತ್ತು ರಕಅತ್) ಎಂದು ಫರೀದ್ ಬುಕ್ ಸ್ಟಾಲ್ ರವರ ತರ್ಜುಮೆ ಯಲ್ಲಿ ಖಾನ್ ಅಬ್ದುಲ್ ಹಕೀಂ ಅಕ್ತರ್ ರವರ ಸೇರ್ಪಡೆ ವ್ಯಕ್ತವಾಗುತ್ತದೆ.ಅಲ್ಲದೇ ಅದರ ಟಿಪ್ಪಣಿಯಲ್ಲಿ ತರ್ಜುಮಕಾರ ಒಂದು ನೋಟ್ ಬರೆದಿರುವರು: “ ಈ ಹದೀಸಿನ(كَانَ يُصَلِّي لَهُمْ عِشْرِينَ ركعة) ಎನ್ನುವಾಗ ವ್ಯಕ್ತವಾಗುವುದು ಅವರು ಇಪ್ಪತ್ತು ರಕಅತ್ ಮಾಡಿಸುತಿದ್ದರು, ಆದರೆ ಮೌಲಾನ ವಹೀದುಝ್ಝಮಾ ಈ ಪದಗಳ ತರ್ಜುಮ “ ಅವರು ಜನರೊಂದಿಗೆ ಇಪ್ಪತ್ತು ರಾತ್ರಿಗಳವರೆಗೆ ನಮಾಜು ಮಾಡುತಿದ್ದರು, ಮತ್ತು (عِشْرِينَ ركعة) ಮೌಲಾನ ಇಪ್ಪತ್ತು ರಕಅತ್ತಿನ ಪದವನ್ನು ಬಳಸಿ ತಮ್ಮಂತವರಿಗೆ ಸಂತೋಷಗೊಳಿಸಿರಬಹುದು ಆದರೆ ಹದೀಸನ್ನು ತಮ್ಮ ತೀಕ್ಷ್ಣತೆಗೆ ಅನುಗುನವಾಗಿ ಬಳಸಿಕೊಂಡು ಹದೀಸನ್ನು ತರ್ಜುಮೆ ಮಾಡುವಲ್ಲಿ ಮಕ್ಕಳಾಟಿಕೆ ಮಾಡಿರುವುದು

ಅಹ್ಲುಲ್ ಇಲ್ಮಿನ ವಕ್ತಾರರೆಂದುಕೊಳ್ಳುವವರಿಗೆ ಸೂಕ್ತವಲ್ಲ ಎನ್ನುವುದನ್ನು ಮರೆತಿರುವರು. ಅಭಿಪ್ರಾಯವೆತ್ಯಾಸವಿರುವ ವಿಷಯಗಳಲ್ಲಿ ಹದೀಸನ್ನು ತಮಗೆ ಬೇಕಾದ ಹಾಗೆ ಗೀಚುವುದು ಅಹ್ಲುಲ್ ಇಲ್ಮಿನ ಮಷಾಯಿಖರಿಗೆ ಶೋಬೆಯಲ್ಲ" ಅಲ್ಲಾಹನು ಹೆಚ್ಚು ಅರಿತವನು.

ಮೊತ್ತದಲ್ಲಿ ಸುನನ್ ಅಬೀ ದಾವೂದ್ ನ ಪ್ರತಿಯಲ್ಲಿ (عِشْرِينَ ركعة)ಎನ್ನುವ ಪದ ಸ್ವಹೀಹ್ ಆಗಿದೆಯೋ ಅಲ್ಲಾ (عِشْرِينَ لَيْلَةً) ಎನ್ನುವುದು ಸರಿಯೋ ಈ ಕೃತಿ ವಿನಿಮಯ ಯಾವಕಾಲದಲ್ಲಿ ನಡೆಯಿತು? ಈ ಕೃತ್ಯ ಮಾಡಿದವರು ಯಾರು?

(ತಮ್ಮ ಸೇವಕ ಅಲೀ ಮೊಹಮ್ಮದ್ ಖತೀಬ್ ಜಾಮಿಅ ಮಸ್ಜಿದ್ ಅಹ್ಲುಲ್ ಹದೀಸ್ ಮದಾರ್, ಅಂಚೆ ಕಚೇರಿ. ವಯ ಚಂಡಿಯಾಲ ಶೇರ್ ಖಾನ್, ಜಿಲ್ಲೆ. ಶುಯೂಖ್ ಪುರ್ ತಾಲೂಕ್, ಪಾಕಿಸ್ತಾನ.)

ಸಾಪ್ತಾಹಿಕ 'ಅಲ್ ಇಆತಿಷಾಮ್' ಸಂಪಾದಕರ ನೋಟ್:

ಇದರ ಬಗ್ಗೆ ಅಲ್ ಇಆತಿಷಾಮ್ ನ ಈವಾಗಿನ ಸಂಪಾದಕ (ಅಹ್ಸನುಲ್ ಬಯಾನ್ ಉರ್ದು ತಫಸೀರ್ ನ ಅನುವಾದಕ) ಮೌಲಾನ ಹಾಫಿಝ್ ಸಲಾಹುದ್ದೀನ್ ಸ್ವಾಹಿಬ್ ಯೂಸುಫ್ ರ ನೋಟ್.

" ಈ ವಿವರ ತಿಳಿದು ಬಹಳ ಆಶ್ಚರ್ಯವಾಯಿತು ಅಸಲು ಅರಬಿ ಪ್ರತಿಯಲ್ಲಿ ವಿನಿಮಯನಡೆಸಿರುವುದು ನಮಗೆಲ್ಲ ತಿಳಿದ ವಿಷಯ ಆದರೆ 'ಫಸಾದ್ ದಿನ ಮೇಲೊಂದು ಫಾಸಿದ್' ಅಂತೆ ಒಬ್ಬ ಬರೇಲೀ ಪ್ರಕಾಶಕ ಈ ವಿನಿಮಯವನ್ನು ಉರ್ದುವಿಗೆ ಪರಿವರ್ತನೆ ಗೊಳಿಸಿ ಇದರ ಮೇಲೆ ಸದರಿ ಟಿಪ್ಪಣಿಯನ್ನು ಬರೆದು ' ಕಳ್ಳತನ ಮಾಡಿ ಎದೆತೋರಿಸುಂತೆ' ಮಾಡಿದ್ದಾರೆ. ಅಂದರೆ ಸ್ವತಃ ವಿನಿಮಯಗಳನ್ನು ಮಾಡಿ ಅದರ ಕೃತ್ಯವನ್ನು ಅಹ್ಲುಲ್ ಹದೀಸಿನ ದಿವಂಗತ: ಮೌಲಾನ ವಹೀದುಝ್ಝುಮಾ ಖಾನ್ ರ ಮೇಲೆ ಅರೋಪಿಸಿರುವರು ಅವರಾದರೋ ಸ್ವಹೀಹ್ ತರ್ಜುಮೆ ಮಾಡಿದ ವ್ಯಕ್ತಿಯಾಗಿರುವರು. ಫ ಇನ್ನಾ ಲಿಲ್ಲಾಹಿ ವ ಇನ್ನಾ ಇಲ್ಯಹಿ ರಾಜಿವೂನ್.

ಏನೇ ಇರಲಿ ಪ್ರಶ್ನೆ ಕರ್ತನ ಈ ಅಬೂದಾವೂದಿನಲ್ಲಿ ಈ ವಿನಿಮಯ ಯಾಕೆ? ಯಾವಾಗ? ಹೇಗೆ? ಎನ್ನುವ ಉತ್ತರದಲ್ಲಿ ಮೌಲಾನ ಸುಲ್ತಾನ್ ಮಹ್ಮೂದ್ ಸ್ವಾಹಿಬ್ ಹಫಿಝುಹುಲ್ಲಾಹ್ ಮಹತ್ವ ಇರುವ ಲೇಖನ ಪ್ರಕಟಿಸುತ್ತೇವೆ.[111]

ಅದರಲ್ಲಿ ಅಬೂದಾವೂದ ರ ಪ್ರತೀಯ ಸದರಿ ವಿನಿಮಯದ ಬಗ್ಗೆ ವಿಷೇಶ ಗಮನವನ್ನು ಹರಿಸಲಾಗಿದೆ ಈ ವಿವರಣೆ '(نعم الشهود على تحريف الغالين) ಅಬೀದಾವೂದಿನ ಹೆಸರಲ್ಲಿ ಬಹಳ ವರ್ಷದ ಮುಂಚೆ ಕರಪತ್ರದ ರೀತಿಯಲ್ಲಿ ಪ್ರಕಟಗೊಂಡಿತ್ತು ಈಗ ಅದರ ಆವಶ್ಯಕತೆ ಇರುವುದರಿಂದ ಪುನಃ (ಅಲ್ ಇಅತಿಷಾಮ್ ನಲ್ಲಿ) ಪ್ರಕಟನೆ ಗೊಳಿಸುತಿದ್ದೇವೆ. ಇದರಿಮದ ಸದರಿ ಪ್ರಶ್ನೆಯ ಉತ್ತರ ಪ್ರತ್ಯಕ್ಷವಾಗುವುದು.

ಈ ಸಂಪಾದಕರ ಟಿಪ್ಪಣಿಯ ನಂತರ ಮುಹದ್ದಿಸ್ ಜಲಾಲ್ ಪೂರಿ ಯವರ ರಿಸಾಲಃ ವನ್ನೂ ನಕಲು ಮಾಡಿದ್ದೇವೆ. ಇದರ ಅಗತ್ಯ ಭಾಗ ಸರ್ವಸಾಮನ್ಯರ ಮುಂದಿರಿಸಲಾಗಿದೆ.

ಶೈಖುಲ್ ಹದೀಸ್ ಮೌಲಾನ ಮಹ್ಮೂದ್ ಸ್ವಾಹಿಬ್ ಮುಹದ್ದಿಸ್ ಜಲಾಲಪೂರಿ ರಹಿಮಹುಲ್ಲಾಹ್ ರ ಪರಿಶೀಲನಾ ಅನುಚ್ಛೇದ

بِسْمِ اللَّهِ الرَّحْمَٰنِ الرَّحِيمِ

الحمدُ للهِ وحدَهُ ، والصَّلاةُ والسَّلامُ على مَن لا نَبِيَّ بعدَهُ ،

ಐದು ಪುಟದ ರಿಸಾಲ " ಗ್ಯರ್ ಮುಕಲ್ಲಿದೀನ್ ಕಿ ಸಫೇದ್ ಜೂಟ್ ಕಿ ತಹ್ಕೀಕ್" (ತಕ್ಲೀದ್ ಮಾಡದವರ ನಗ್ನ ಸುಳ್ಳಿನ ಪರಿಶೀಲನೇ) ಎನ್ನುವ ಒಂದು (ಲೇಖನ) ನನ್ನ ಕಣ್ಣಮುಂದೆ ಹಾದು ಹೋಯಿತು. ಸಾರಂಶ ' ತರಾವೀಹ್ ಇಪ್ಪತ್ತಾಗಿದೆ ಎಂಟಲ್ಲ' ಎಂದಾಗಿತ್ತು . ಅದರಲ್ಲಿ ಲೇಖಕರು ಬೇಜಾವಬ್ದಾರಿಯ ಬಹಳಷ್ಟು ಮಾತುಗಳನ್ನು ಒಳಪಡಿಸಿದ್ದರು. ಆದರೆ ಅವರ ಉತ್ತರ ಅಗತ್ಯವಿಲ್ಲ. ಯಾಕೆಂದರೆ ಸಂವತ್ಸರಗಳಿಂದ

[111] ಮೌಲಾನ ಸುಲ್ತಾನ್ ಮಹಮೂದ್ ಜಲಾಲ ಪುರಿ ಕೆಲವು ವರ್ಷವಾದವು ಅವರು ತೀರಿಹೋಗಿ– أحسن الله عزاءكم وغفرالله لنا وله ورحمه الله رحمة واسعة

ಉಲಮಾಅರೆಡೆಯಲ್ಲಿ ಚರ್ಚಾ ವಿಷಯವಾಗಿರುವುದಾಗಿದೆ ಇದು. ಇದರ ಬಗ್ಗೆ ಎರಡೂ ಬಣಗಳ ಮದ್ಯೆ ಬಹಳಷ್ಟು ಗ್ರಂಥಗಳು ಉದಯಗೊಂಡಿದೆ. ಇನ್ನೂ ಬರೆಯುವುದೆಂದರೆ ಚರ್ಚಾ ವಿಷಯನ್ನು ಚರ್ಚೆಗೆ ಒಳಪಡಿಸುವುದಾಗಿದೆಯಲ್ಲದೆ ಬೇರೇನೂ ಅಲ್ಲ. ಹೀಗಿರುವಾಗ ಒಂದು ಮಾತು ದೃಷ್ಟಿಯಮುಂದೆ ಹಾದು ಹೋಗಿರುವುದು ಹೊಸತನದಿಂದ ಕೂಡಿದ್ದಾಗಿದೆ. ಅಲ್ಲದೆ ಇದರಿಂದ ಹೊಸ ಫಿತ್ನಾ ಉದ್ಭವಗೊಳ್ಳುವ ಸಂದೇಹವಿದೆ ಆದುದರಿಂದ ಉಲಮಾವುಲ್ ಇಸ್ಲಾಮ್ ರಿಗೆ ಮನದಟ್ಟುಮಾಡುವುದು ಅಗತ್ಯವಾಗಿದೆ ಇನ್ನಾದರೂ ಇಂತಹ ಅನಾವಶ್ಯಕ ವಿನಿಮಯದಿಂದ ದಾರ್ಮಿಕ ಚೌಕಟ್ಟಿನಿಂದ ದೂರವಿರಿಸಲು ಕಾರಣವಾಗೀತು ಎನ್ನುವ ಉದ್ದೇಶದಿಂದ ಮಾತ್ರ. ಆ ವಿಷಯವೇನೆಂದರೆ ಅಬೂ ದಾವೂದ್ ರಿಂದ ಹದೀಸನ್ನು ಈ ರೀತಿ ನಕಲು ಮಾಡಲಾಗಿದೆ:

(عَنِ الْحَسَنِ، أَنَّ عُمَرَ بْنَ الْخَطَّابِ، جَمَعَ النَّاسَ عَلَى أُبَيِّ بْنِ كَعْبٍ فَكَانَ يُصَلِّي لَهُمْ عِشْرِينَ رَكْعَةً)[112]

"ಹಸನ್ ಬಸ್ವರೀ ರ.ರವರು ವರದಿ ಮಾಡುತ್ತಾರೆ ಉಮರ್ ರ.ರವರು ಉಬಯೀ ಇಬ್ನ್ ಕಅಬರ ಇಮಾಮತ್ತಿನಲ್ಲಿ ಜನರ್ರು ಸೇರಿಸಿದರು ಅವರು ಜನರಿಗೆ ಇಪ್ಪತ್ತು ರಕಅತ್ ನಮಾಜು ಮಾಡಿಸುತ್ತಿದ್ದರು."

ಇದಾಗಿದೆ ಅವರ 'ರಿಸಾಲಃ'ದ ಉದ್ಧರಣಿ ಇದರಲ್ಲಿ ಸೇರಿಸಿದ (ವಿನಿಮಯಗೊಳಿಸಿದ) ಪದ ಅಂದರೆ 'ರಕಅತ್ತ್' ಎನ್ನುವುದು, ಸ್ವಹೀಹ್ ಆಗಿರುವುದು 'ಲೈಲ' ಎನ್ನುವುದಾಗಿದೆ. ಅಬೂ ದಾವೂದ್ ಗ್ರಂಥದ ಅಸಲು ಈ ರೀತಿಯಾಗಿದೆ:

---

112 ಸಂಗ್ರಹ ಅಲ್ ಇಸ್ಲಾಂ ಸಾಪ್ತಾಹಿಕ ಲಾಹೋರ್, ಪುಟ 16.ಸಂಚಿಕೆ42 18 ಶಾಬಾನ್ 1410ಹಿಜರಿ 1990 ಇಸವಿ ಮಾರ್ಚ್ 12

عَنِ الْحَسَنِ، أَنَّ عُمَرَ بْنَ الْخَطَّابِ، جَمَعَ النَّاسَ عَلَى أُبَيِّ بْنِ كَعْبٍ فَكَانَ يُصَلِّي لَهُمْ عِشْرِينَ لَيْلَةً وَلاَ يَقْنُتُ بِهِمْ إِلاَّ فِي النِّصْفِ الْبَاقِي فَإِذَا كَانَتِ الْعَشْرُ الأَوَاخِرُ تَخَلَّفَ فَصَلَّى فِي بَيْتِهِ فَكَانُوا يَقُولُونَ أَبَقَ أُبَيٌّ[113] .

"ಹಸನ್ ರವರ ಮುಖಾಂತರ ವಿವರ ದೊರಕಿತು "ಉಮರ್ ರ.ರವರು ಉಬಯೀ ಇಬ್ನ್ ಕಅಬರ ಇಮಾಮತ್ತಿನಲ್ಲಿ ಜನರ್‍ನ್ನು ಸೇರಿಸಿದರು ಅವರು ಜನರಿಗೆ ಇಪ್ಪತ್ತು ರಾತ್ರಿ ನಮಾಜು ಮಾಡಿಸುತ್ತಿದ್ದರು ಮತ್ತು ಕುನೂತ್ (ರಮಝಾನಿನ) ಬಾಕಿ ಇರುವ ಅರ್ಧದಲ್ಲಿ ಹೊರತು ಓದುತಿರಲಿಲ್ಲ. ಕೊನೆಯ ಹತ್ತು ದಿನ ಬಂದಾಗ ಜಮಾಅತ್ ಮಾಡುವುದನ್ನು ಬಿಟ್ಟು ತನ್ನ ಮನೆಯಲ್ಲಿಯೇ ನಮಾಝ್ (ತರಾವೀಹ್) ನಿರ್ವಹಿಸುತಿದ್ದರು ಉಬಯ್ ಓಡಿಹೊದರೆಂದು ಜನರು ಹೇಳುತಿದ್ದರು"

ಇದಾಗಿದೆ ಹದೀಸಿನ ಅಸಲು ಪದ ಇದರಲ್ಲಿ ಇಪ್ಪತ್ತು ರಕಅತ್ತಿನ ಮಾತೇ ಇಲ್ಲ! ವ್ಯಕ್ತವಾಗುವುದೇನೆಂದರೆ ಲೈಲದ ಬದಲು ರಕಅತ್ ಎನ್ನುವ ಪದವನ್ನು ಬದಲಿಸಿ ಇಪ್ಪತ್ತು ರಕಅತ್ತಿಗೆ ಪ್ರಮಾಣ ಶೃಷ್ಟಿಸಿರುವುದು ದಾರ್ಮಿಕ ಗ್ರಂಥದಲ್ಲಿ ನಾಚಿಕೆ ಗೇಡಿನಿಂದ ಕೂಡಿದ ವಿನಿಮಯವಾಗಿದೆ. ಸದಾರಣವಾಗಿ ಬರುವ ಪ್ರಶ್ನೆ ಏನೆಂದರೆ ಲೈಲದ ಬದಲು ರಕಅತ್ ಎಂದು ಕೆಲವು ಗ್ರಂಥದಲ್ಲಿ ಬಂದಿದ್ದರೆ ಅದನ್ನು ವಿನಿಮಯ ಎಂದು ಹೇಳಲು ಹೇಗೆತಾನೆ ಸಾದ್ಯ ಎನ್ನುವುದಕ್ಕೆ ಉತ್ತರ ನಂತರ ವಿವರಿಸುತ್ತೇವೆ ಅದಕ್ಕಿಂತ ಮುಂಚೆ ವಿನಿಮಯಕ್ಕೆ ಪುರಾವೆಯಾಗಿಸುವಂತಹದ್ದನ್ನು ಮೊದಲು ಕಣ್ಣೋಡಿಸೋಣ ಅವು ವಿವಿದ ರೀತಿಯಲ್ಲಿವೆ.

ಒಂದನೇ ಪುರಾವೆ.

1318 ಹಿಜರಿಯವರೆಗೆ ಭಾರತದಲ್ಲಿ ಮುದ್ರಣಗೊಂಡ ಎಲ್ಲಾ ಅವೃತಿಯಲ್ಲಿ (لَيْلَةً) ಎಂದೇ ಮುದ್ರಿತಗೊಂಡಿವೆ ಎಲ್ಲೂ (ركعة) ಎಂದು ಮುದ್ರಣಗೊಂಡದ್ದು ಕಂಡುಬಂದಿಲ್ಲ ಅದೇ ರೀತಿ ಭಾರತದ ಹೊರೆಗೆ ಮುದ್ರಣಗೊಂಡ ಅವೃತಿಯಲ್ಲಿ ಇಂದಿನವರೆಗೂ

113 ಅಬೂದಾವೂದ್.

(لَيْلَةً) ಎಂದೇ ಮುದ್ರಣಗೊಂಡಿವೆ ಹೊರತು ಎಲ್ಲೂ (ركعة) ಎಂದು ಬಂದಿಲ್ಲ ಒಂದೆರಡು ಅವೃತ್ತಿಲ್ಲಿ ಹೊರತುಪಡಿಸಿ ಅವನ್ನು ದಯೊಬಂದ್ ಪ್ರಕಾಶಕರು ಮುದ್ರಣಗೊಳಿಸಿದ ಮುದ್ರಣದ ಹೊರತು ಅದರ ವಿವರ ಮುಂದೆ ಬರುವುದು.

ಎರಡನೇ ಪುರಾವೆ.

ಅಹ್ಲುಲ್ ಹದೀಸ್ ಉಲಮಾಅರು ಸುನನ್ ಅಬೀ ದಾವೂದ್ ನಿಂದ ನಕಲು ಮಾಡಿರುವ ಎಲ್ಲಾ ಪದಗಳೂ (لَيْلَةً) ಎಂದೇ ಆಗಿತ್ತು ಎಲ್ಲಿಯೂ (ركعة) ಎಂದು ಸ್ಪಷ್ಟವಾಗಿಯೋ ಸೂಚನೆಯಾಗಿಯೋ ಇಲ್ಲ. ನೋಡಿರಿ 'ಮಿಷ್ಕಾತುಲ್ ಮಸಾಬೀಹ್ ಬಾಬುಲ್ ಕುನೂತ್ ಫಸಲ್ ಸಾಲಿಸ್' ನ ಮೊದಲ ಹದೀಸ್ ಅದನ್ನು ಸ್ವಾಹಿಬುಲ್ ಮಿಷ್ಕಾತ್ ಈ ರೀತಿ ನಕಲು ಮಾಡಿರುವರು:

عَنِ الْحَسَنِ، أَنَّ عُمَرَ بْنَ الْخَطَّابِ، جَمَعَ النَّاسَ عَلَى أُبَيِّ بْنِ كَعْبٍ فَكَانَ يُصَلِّي لَهُمْ عِشْرِينَ لَيْلَةً وَلاَ يَقْنُتُ بِهِمْ إِلاَّ فِي النِّصْفِ الْبَاقِي فَإِذَا كَانَتِ الْعَشْرُ الأَوَاخِرُ تَخَلَّفَ فَصَلَّى فِي بَيْتِهِ فَكَانُوا يَقُولُونَ أَبَقَ أُبَيٌّ[114]

"ಹಸನ್ ರವರ ಮುಖಾಂತರ ವಿವರ ದೊರಕಿತು "ಉಮರ್ ರ.ರವರು ಉಬಯೀ ಇಬ್ನ್ ಕಅಬರ ಇಮಾಮತ್ತಿನಲ್ಲಿ ಜನರ್‍ನು ಸೇರಿಸಿದರು ಅವರು ಜನರಿಗೆ ಇಪ್ಪತ್ತು ರಾತ್ರಿ ನಮಾಜು ಮಾಡಿಸುತ್ತಿದ್ದರು ಮತ್ತು ಕುನೂತ್ (ರಮಝಾನಿನ) ಬಾಕಿ ಇರುವ ಅರ್ಧದ ಹೊರತು ಓದುತಿರಲಿಲ್ಲ. ಕೊನೆಯ ಹತ್ತು ದಿನ ಬಂದಾಗ ಜಮಾಅತ್ ಮಾಡುವುದನ್ನು ಬಿಟ್ಟು ತನ್ನ ಮನೆಯಲ್ಲಿಯೇ ನಮಾಝ್ (ತರಾವೀಹ್) ನಿರ್ವಹಿಸುತಿದ್ದರು ಉಬಯ್ ಓಡಿಹೊದರೆಂದು ಜನರು ಹೇಳುತಿದ್ದರು"

ಅದೇ ರೀತಿ 'ನಸ್ಬುರ್ರಾಯ' ದಲ್ಲಿ ಇಮಾಮ್ ಝ್ಯುಲಯೀ ಹನಫೀ ಬರೆಯುತ್ತಾರೆ:

---

[114] ಅಬೂದಾವೂದ್.

(وللشافعية في تخصيصهم القنوت بالنصف الأخير من رمضان حديثان :

الأول : أخرجه أبو داود عن الحسن أن عمر بن الخطابجمع الناس ، على أبي بن كعب ، فكان يصلي بهم عشرين ليلة من الشهر " يعني رمضان " ،)[115]

" ಶಾಫಿ ಯರ ಬಲ್ಲಿ ರಮಝಾನಿನ ಎರಡನೇ ಅರ್ದದೊಂದಿಗೆ ಪ್ರತ್ಯೇಖಿಸಲು ಎರಡು ಪುರಾವೆಗಳಿವೆ ಮೊದಲ ಪುರಾವೆ ಅಬೂದಾವೂದ್ ನಲ್ಲ ಹಸನ್ ಬಸ್ವರೀ ರ.ರವರ ವರದಿ: ಉಮರ್ ರ.ರವರು ಉಬಯೀ ಇಬ್ನ್ ಕಅಬರ ಇಮಾಮತ್ತಿನಲ್ಲಿ ಜನರ್ನು ಸೇರಿಸಿದರು ಅವರು ಜನರಿಗೆ ಇಪ್ಪತ್ತು ರಾತ್ರಿ ನಮಾಜು ಮಾಡಿಸುತ್ತಿದ್ದರು...."

ಹಾಗೆಯೇ ಹಾಫಿಳ್ ಮುಂಝಿರಿಯವರ ಮುಕ್ತಸರ್ ಸುನನ್ ಅಬೀ ದಾವೂದ್ ನಲ್ಲಿ:

(عَنِ الْحَسَنِ، وَهُوَ الْبَصرِيُّ أَنَّ عُمَرَ بْنَ الْخَطَّابِ، جَمَعَ النَّاسَ عَلَى أُبَيِّ بْنِ كَعْبٍ فَكَانَ يُصَلِّي لَهُمْ عِشْرِينَ لَيْلَةً ...الخ)[116]

"ಹಸನ್ ಬಸರೀ ರ.ವರದಿ ಮಾಡುತ್ತಾರೆ "ಉಮರ್ ರ.ರವರು ಉಬಯೀ ಇಬ್ನ್ ಕಅಬರ ಇಮಾಮತ್ತಿನಲ್ಲಿ ಜನರ್ನು ಸೇರಿಸಿದರು ಅವರು ಜನರಿಗೆ ಇಪ್ಪತ್ತು ರಾತ್ರಿ ನಮಾಜು(ತರಾವೀಹ್) ಮಾಡಿಸುತ್ತಿದ್ದರು....."

ಇಮಾಮ್ ಮುಂಝೀರಿ ಯವರ ಗ್ರಂಥವಾಗಿದೆ ಮುಕ್ತಸರ್ ಅಬೀ ದಾವೂದ್ ಅದರಲ್ಲಿ ಸದರಿ ಇಮಾಮರು ಸಂಗ್ರಹಿಸಿರುವುದರಲ್ಲಿ ಯಾವುದೇ ವೆತ್ಯಾಸವಿಲ್ಲದೇ ನಕಲು ಮಾಡಿರುವುದುದಾಗಿದೆ. ಈ ಮೂರು ಇಮಾಮರ ಇಬಾರತ್ತಿನ ನಕಲಿನಿಂದ ವ್ಯಕ್ತವಾಗವುದೇನೆಂದರೆ ಅಸಲು ಹದೀಸಿನಲ್ಲಿ 'ಲ್ಯಲ'(ರಾತ್ರಿ) ಎನ್ನುವ ಪದ ಮಾತ್ರವಿರುವುದು ಅಲ್ಲದೇ ಬೇರೆಲ್ಲಿಯೂ 'ರಕಅ' ಎನ್ನುವ ಪದವನ್ನು ಸೂಚನೆಯೇ ಇಲ್ಲ ಇದೇ ರೀತಿಯ ಬಹಳಷ್ಟು ಉದಾಹರಣೆಗಳನ್ನು ಕೊಡಬಹುದು ಆದರೆ ಸಂಕ್ಷಿಪ್ತವಾಗಿ ಇಷ್ಟಕ್ಕೆ ನಿಲ್ಲಿಸುತ್ತೇನೆ.

---

[115] ನಸಬುರ್ರಾಯ ಭಾಗ 2 ಪುಟಃ166

[116] ಮುಕ್ತಸರ್ ಸುನನ್ ಅಬೀ ದಾವೂದ್ ಭಾಗ–2 ಪುಟ:125

ಮೂರನೇ ಪುರಾವೆ.

ಸುನನುಲ್ ಕುಬ್ರಾದಲ್ಲಿ ಇಮಾಮ್ ಬೈಹಕೀ ರಹಿಮಹುಲ್ಲಾಹ್ ಇಮಾಮ್ ಅಬೀ ದಾವೂದ್ ರಿಂದ ನಕಲು ಮಾಡಿರುವ ಪದಗಳು:

(أنبأنا أبو علي الروذباري قال أخبرنا أبو بكر بن داسة قال حدثنا أبو داود ثنا شجاع بن مَخْلد ثنا هُشيم أنا يونس بن عُبيد عن الحسن أنَّ عمر بن الخطَّاب جمع النَّاس على أُبيٍّ بن كعب، فكان يصلِّي لهم عشرين ليلة "، ولا يقنت بهم إلا في النِّصف الباقي، فإذا كانت العشر الأواخر تخلَّف فصلَّى في بيته، فكانوا يقولون: أَبَقَ أُبيٌّ)[117]

"ನಮಗೆ ಅಬೂ ಅಲೀ ರೂಝ್ಬಾರಿ ತಿಳಿಸಿದರು, ಅಬೂಬಕರ್ ಬಿನ್ ದಾಸ ರಿಂದ ನಮಗೆ ತಿಳಿಯಿತು, ನಮಗೆ ಅಬೂದಾವೂದ್ ರವರು ಹದೀಸ್ ವಿವರಿಸಿದರು, ನಮಗೆ ಶುಜಾಅ ಬಿನ್ ಮುಖಲ್ಲದ್ ರಿಂದ, ನಮಗೆ ಹುಶ್ಯಮ್ ರಿಂದ , ನಮಗೆ ಯೂನುಸ್ ಬಿನ್ ಉಬೈದ್ ರಿಂದ, ಅವರು ತಿಳಿಸಿದರು ಹಸನ್ ಬಸ್ವರಿ ವಿವರಿಸಿದರು ಉಮರ್ ರ ರವರು ಜನರಿಗೆ ಉಬಯೀ ಇಬ್ನ್ ಕಅಬರೊಂದಿಗೆ ಇಮಾಮಾಗಿ ತರಾವೀಹ್ ನಿರ್ವಹಿಸಲು ಕಲ್ಪಿಸಿದರು, ಅವರು ಜನರಿಗೆ ಇಪ್ಪತ್ತು ರಾತ್ರಿ ನಮಾಜು ತರಾವೀಹ್ ನಿರ್ವಹಿಸಿಕೊಡುತಿದ್ದರು, ಕೊನೆಯ ಅರ್ದದಲ್ಲಿ ಕುನೂತ್ ಓದುತಿದ್ದರು, ಮತು ಕೊನೆಯ ಹತ್ತು ರಾತ್ರಿಗಳಲ್ಲಿ ಜಮಾಅತ್ತಾಗಿ ನಿರ್ವಹಿಸುವುದನ್ನು ರದ್ದುಗೊಳಿಸುತಿದ್ದರು ಮತ್ತು ತಮ್ಮ ಮನೆಯಲ್ಲಿಯೇ ನಮಾಜು ತರಾವೀಹ್ ನಿರ್ವಹಿಸುತಿದ್ದರು. ಜನರು ಉಬಯೀ ಯವರು ಓಡಿಹೊದರು ಎನ್ನುತಿದ್ದರು"

ನಾಲ್ಕನೇ ಪುರಾವೆ.

[117] ಸುನನುಲ್ ಕುಬ್ರಾ ಭಾಗ-2 ಪುಟ:498

ವರದಿ ನಾಲ್ಕನೇ ವಾಕ್ಯ (فَإِذَا كَانَتِ الْعَشْرُ الأَوَاخِرُ تَخَلَّفَ) ಈ ವಾಕ್ಯ ಇನ್ನೊಂದು (فَكَانَ يُصَلِّي لَهُمْ عِشْرِينَ لَيْلَةً) ವಾಕ್ಯಕ್ಕೆ ಸಂದಿಯಾಗಿದೆ ಈ ಹೊಂದಾಣಿಕೆಯಿಂದ ವ್ಯಕ್ತವಾಗುವುದೇನೆಂದರೆ ಇಲ್ಲಿ 'ಲೈಲ' ಎನ್ನುವ ಪದವೇ ಸರಿಹೊಂದುತ್ತದೆ ಹೊರತು 'ರಕಅತ್' ಎನ್ನುವ ಪದವಲ್ಲ. ಇನ್ನು ಈ ವಾಕ್ಯದಲ್ಲಿ 'ರಕಅ' ಎಂದಾದರೆ ಇದರ ಹೊಂದಾಣಿಕೆ ಸರಿಯಾಗಲಾರದು ಅಲ್ಲದೇ ಸುಳ್ಳೆಂದು ಸ್ಪಷ್ಟವಾಗಿ ಸಾಬೀತಾಗುತ್ತದೆ. (كما لا يخفي علي من له أدني ممارسة بالعربية)

ಐದನೇ ಪುರಾವೆ.

ಮೌಲಾನಾ ಖಲೀಲ್ ಅಹ್ಮದ್ ಸಾಹಿಬ್ ಹನಫೀ ಸಾಹಾರನ್ ಪುರಿ ತನ್ನ ಪ್ರಶಸ್ತ ಗ್ರಂಥ 'ಬಝುಲುಲ್ ಮಜ್ಹೂ ಫೀ ಹಿಲ್ಲಿ ಅಬೀ ದಾವೂದ್' ನಲ್ಲಿ ಈ ಹದೀಸಿಗೆ ಟಿಪ್ಪಣಿ ಬರೆಯುತ್ತಾ 'ಲೈಲ' ಎನ್ನುವ ಪದವನ್ನೇ ಉಪಯೋಗಿಸಿಕೊಂಡು ಟಿಪ್ಪಣಿಯಲ್ಲಿ ಹೇಳುತ್ತಾರೆ:

"ಉಬಯಿ ರ. ರವರು ಇಪ್ಪತ್ತು ರಾತ್ರಿಗಳಲ್ಲಿ ನಮಾಜ್ ತರಾವೀಹ್ ಮತ್ತು ಕೊನೆಯ ಅರ್ಧದಲಲ್ಲದೇ ಕುನೂತ್ ಓದುತಿರಲಿಲ್ಲ. ಇಲ್ಲಿ ವ್ಯಕ್ತವಾಗುವುದೇನೆಂದರೆ ಕೊನೆಯ ಅರ್ಧ ಅಂದರೆ ಮದ್ಯದ ಹತ್ತು ದಿನಗಳೆಂದಾಗಿದೆ ಆ ದಿನಗಳಲ್ಲದೇ ಅವರು ಕುನೂತ್ ಓದುತಿರಲಿಲ್ಲ ಮತ್ತಿರುವುವ ಕೊನೆಯ ಹತ್ತುದಿನಗಳು ಅದರಲ್ಲವರು ಜಮಾಅತ್ತಾಗಿ ನಮಾಜು ನಿರ್ವಹಿಸುವುದನ್ನೆ ಉಪೇಕ್ಷಿಸುತ್ತಿದ್ದರು ಮತ್ತು ಜನರನ್ನು ಬಿಟ್ಟು ತಮ್ಮ ಮನೆಯಲ್ಲಿಯೇ ನಮಾಜು ಮಾಡುತಿದ್ದರು ಜನರು ಉಬಯೀ ಓಡಿಹೋದರೆಂದು ಕೊಳ್ಳುತಿದ್ದರು"[118]

ಮೌಲಾನ ಇತರ ಉಲಮಾರ ಇಪ್ಪತ್ತು ರಕಅತ್ ಎನ್ನುವುದನ್ನು ವಿರೋಧ ವ್ಯಕ್ತಪಡಿಸುತ್ತಾ ಇಪ್ಪತ್ತು ರಾತ್ರಿಗಳ ಕೊನೆಯ ಅರ್ಧ ಎನ್ನುವುದಕ್ಕೆ ಮದ್ಯದ ಹತ್ತು

---

[118] ಬಝುಲ್ ಮಜಹೂದ್ ಫೀ ಅಬೀ ದಾವೂದ್ ಸಂಗ್ರಹ: "ಅಲ್ ಇಅತಿಸಾಮ್" ಸಾಪ್ತಾಹಿಕ ಲಾಹೋರ್–23/11/1408 ಹಿಜರಿ, 8/7/1988 ಇಸವಿ ಲೇಖಕ– ಅಲ್ಲಾಮ ಮುಹದ್ದಿಸ್ ಜಲಾಲಪುರಿ.

ದಿನಗಳೆಂದು ಉದ್ದೇಶವಾಗಿದೆ ಎಂದು ವಿವರಿಸಿದ್ದಾರೆ. ಇಪ್ಪತ್ತು ರಾತ್ರಿಗಳೆಂದಾಗ ಮಾತ್ರ ಮದ್ಯದ ಹತ್ತು ದಿನಗಳೆನ್ನುವ ಉದ್ದೇಶ ಸರಿಯಾಗುವುದೇ ಹೊರತು ಇಪ್ಪತ್ತು ರಕಅತ್ ಎಂದಾಗ ಅಲ್ಲ. ಮೌಲಾನ ಪ್ರತ್ಯೇಖವಾಗಿ ಇಲ್ಲಿ ಶಾಫೀ ಪಂಗಡದವರು ರಮಝಾನಿನಲ್ಲಿ ಮದ್ಯ ರಮಝಾನಿನಂತರವೇ ನಿರ್ವಹಿಸುತ್ತಾರೆ ಅವರದಕ್ಕೆ ಇದೇ ಹದೀಸನ್ನು ಪುರಾವೆಯಾಗಿ ತೆಗೆದು ಕೊಂಡಿರುವುದು ಹೀಗಿರುವಾಗಲೂ ಈ ಹದೀಸ್ ಇಪ್ಪತ್ತು ರಕಅತನ್ನು ಸೂಚಿಸಲು ಅಶಕ್ತತೆಯನ್ನು ತೋರಿಸುತ್ತದೆ ಏನಿದ್ದರೂ ಮೌಲಾನ ಈ ಹದೀಸಿನಲ್ಲಿ ಇಪ್ಪತ್ತು ರಕಅತೆಂದಲ್ಲ ಹೊರತು ಇಪ್ಪತ್ತು ರಾತ್ರಿಯೇ ಸರಿ ಎನ್ನುವದನ್ನು ಸ್ಥಿರಗೊಳಿಸಿರುವರು.

ನೆನಪಿನಲ್ಲಡಬೇಕಾದ ವಿಷಯವೇನೆಂದರೆ ಇಮಾಮ್ ಅಬೂ ದಾವೂದ್ ರ. ರವರ ಸುನನಿನ ಆವೃತ್ತಿಯಲ್ಲಿ ಅವರ ಶಿಶ್ಯಂದಿರು ನಕಲುಮಾಡಿರುವುದರಲ್ಲಿ ಹಲವು ಆವೃತ್ತಿಗಳಿವೆ ಅವುಗಳಲ್ಲಿ ಪ್ರಖ್ಯಾತಿಗೊಂಡಿರುವುದು ಮೂರು ಪ್ರತಿಗಳಾಗಿವೆ ನಮ್ಮೂರಿನಲ್ಲಿರುವ ಅಬೂ ಅಲೀ ಲುಅ್‌ಲುಅ್, ರವರ ಪ್ರತಿಯಾಗಿದೆ ಮತ್ತು ಇಬ್ನ್ ದಾಸ. ರ. ರವರ ಹಾಗು ಇಬ್ನುಲ್ ಆರಾಬೀ ಪ್ರತಿಗಳಲ್ಲಿ ಅಭಿಪ್ರಾಯವೆತ್ಯಾಸಗಳಿವೆ ಪದಗಳ ಮತ್ತು ವಾಕ್ಯಗಳ ವೆತ್ಯಾಸ, ಅಥವಾ ವರದಿಗಳ ವ್ಯತ್ಯಾಸಗಳೂ ಕಂಡುಬಂದಿವೆ ಇವುಗಳ ವೆತ್ಯಾಸದ ಬಗ್ಗೆ ಸರಾಗವಾಗಿ ಟಿಪ್ಪಣಿಗಾರರು ಕಂಡುಕೊಂಡಿರುವರು ಪ್ರತ್ಯೇಖವಾಗಿ ಮೌಲಾನ ಅಹ್ಮದ್ ಸ್ವಾಹಿಬ್ ರವರು ಅವರು ಅಲೀ ರ.ರವರ ಹೊಕ್ಕಳಿನ ಕೆಳಗೆ ಕೈಕಟ್ಟುವ ವಿಷಯದಲ್ಲಿ ಹೇಳುತ್ತಾ:

واعلم انه كتب ههنا علي الحاشية أحاديث من رواية ابن ألأعرابيِّ فيناسب لنا ان نذكرها محمد بن محبوب البناني بنونين أبو عبد الله البصريُّ قأل ثنا حفص بن غياث عن عبد الرحمان بن اسحاق الواسطي أبو شيبة ضعيفٌ عن زياد بن زيد السوائي الأَعصم بمهملتين الكوفي مجهولٌ عن أبي جحيفة وهَب بن عبدالله

السُّوَائِيِّ بضمِّ المهملة والمدِّ يكنِّيهِ صحابيٌّ معروفٌ صحب عَلِيًّا رضي الله عنه قَالَ السُّنَّةُ وَضْعُ الْكَفِّ عَلَى الْكَفِّ تَحْتَ السُّرَّةِ[119]

ತಿಳಿದಿರಬೇಕಾದ ವಿಷಯ ಅವರು ಟಿಪ್ಪಣಿಯಲ್ಲಿ ಇಬ್ನು ಅಅರಾಬಿಯವರ ಬಹಳ ಹದೀಸುಗಳನ್ನು ಬರೆದಿರುವರು ಅವುಗಳಲ್ಲಿ ಕೆಲವನ್ನು ನಾವಿಲ್ಲಿ ಹೇಳುವುದು ಉತ್ತಮವೆಂದು ತಿಳಿಯುತ್ತೇವೆ, ವರದಿಯ ಶೃಂಖಲೆಯಲ್ಲಿರುವ ಹೇಸರುಗಳು ಮತ್ತು ಸ್ವಹೀಹ್ ಹೊಂದಾಣಿಕೆಯ ನಂತರ ಅಲೀ ರ. ಹೇಳುತ್ತಾರೆ. “ ಬಲ ಕೈಯನ್ನು ಎಡಕೈಯ್ಯಮೇಲೆ ಇಟ್ಟು ಹೊಕ್ಕಳಿನ ಮೇಲೆ ಕಟ್ಟುವುದು ಸುನ್ನತ್ ಆಗಿರುತ್ತದೆ”. ಈ ಹದೀಸನ್ನು ಇಮಾಮ್ ಅಹ್ಮದ್, ಅಬೂ ದಾವೂದ್ ರ. ರವರು ಉಲ್ಲೇಖಿಸಿರುವರು. ಇಮಾಮ್ ಶೌಕಾನೀ ರ. ಹೇಳುತ್ತಾರೆ ಇಮಾಮ್ ಅಬೂ ದಾವುದರ ಕೆಲವು ಪ್ರತಿಗಳಲ್ಲಿ ಸ್ಥಾನ ಪಡೆದುಕೊಂಡಿದೆ. ಅಂದರೆ ಇಬ್ನುಲ್ ಅಅರಾಬಿಯವರ ಪ್ರತಿಯಲ್ಲಿ ಇದನ್ನು ಕಾಣಬಹುದು ಹೊರತು ಬೇರೆ ಯಾವ ಆವೃತಿಯಲ್ಲೂ ನೋಡಲು ಸಾದ್ಯವಿಲ್ಲ.

ಯಾವ ರೀತಿಯಲ್ಲಿ ಮೌಲಾನ ಬೇರೆ ಆವೃತಿಯಲ್ಲಿರುವುದನ್ನು ವಿವರಿಸಿ ಅದರ ಟಿಪ್ಪಣಿಯನ್ನು ಬರೆದಿರುವರು ಮತ್ತು ತಹ್ತ ಸುರ್ರಃ ಎನ್ನುವ ಹದೀಸಿನ್ನು ಮುಂದಿಟ್ಟು ಪುರಾವೆಗಳನ್ನು ವಿವರಿಸಿ ಟಿಪ್ಪಣಿಯನ್ನು ಬರೆದರು. ಇನ್ನು ಉಬಯೀ ರ.ರವರ ಹದೀಸಿನಲ್ಲಿ ಆವೃತ್ತಿಗಳ ಅಭಿಪ್ರಾಯಗಳ ವ್ಯತ್ಯಾಸವಾದರೆ ಮತ್ತು ಎಲ್ಲಾದರೂ ‘ರಕಅ’ ಎಂದು ಬಂದಿದ್ದರೂ ಅವುಗಳನ್ನು ಪುರಾವೆಗೆ ತೆಗೆದುಕೊಳ್ಳುತಿದ್ದರು ಅಲ್ಲದೇ ಪ್ರಮಾಣಗಳಲ್ಲಿ ಒಂದನ್ನು ಅಧಿಕಗೊಳಿಸುತಿದ್ದರು. ವಾಸ್ತವದಲ್ಲಿ ಇಪ್ಪತ್ತು ರಕಅತ್ತನ್ನು ಸ್ಥಿರಗೊಳಿಸುವ ಬಗ್ಗೆ ಅಲ್ಲಾಮ ಶೌಕ್ ಅನ್ನಮವೀ ಯವರ ಗ್ರಂಥ ‘ಆಸಾರು ಸುನನ್’ ವರದಿಗಳನ್ನೂ ನಕಲು ಮಾಡಿಕೊಂಡಿದ್ದರು ಅವುಗಳಿಗೆ ಉತ್ತರ ಹಲುವು ಬಾರಿ ಉಲಮಾಅರು ನೀಡಿರುವರು. ಆದರೆ ಆ ವರದಿಯಬಗ್ಗೆ ಯಾವುದೇ ಸೂಚನೆಯನ್ನೂ ನೀಡಲಿಲ್ಲ ಆ ಸದರಿ ಪ್ರಸಕ್ತ ಪುರಾವಿಗಳಿಂದ ವ್ಯಕ್ತವಾಗುವುದೇನೆಂದರೆ ಅಸಲು ಪದ ‘ಇಪ್ಪತ್ತು ರಾತ್ರಿ’ ಯಾಗಿದೆ ಹೊರತು ‘ಇಪ್ಪತ್ತು ರಕಅತ್ತಲ್ಲ’ ಹಾಗಾದರೆ ಅದು ಹದೀಸಿನಲ್ಲಿ ಸಂಭವಿಸಿರುವ ವಿನಿಮಯವಾಗಿದೆ.

[119] ಬಝ್ಲುಲ್ ಮಜಹೂದ್ ಫೀ ಅಬೀ ದಾವೂದ್ ಭಾಗ 2 ಪುಟ–23.

ಈ ವಿನಿಮಯ ಯಾವಾಗ ಸಂಭವಿಸಿತು? ಯಾರು ಮಾಡಿರುವರು? ಯಾಕಾಗಿ ಮಾಡಿರುವರು?

ನಾವು ಮೊದಲು ಹೇಳಿರುವಂತೆ 1318 ಹಿಜರಿ ಯವರೆಗೆ ಭಾರತದಲ್ಲಿ ಸುನನ್ ಪ್ರಕಾಶಿತಗೊಂಡಿದ್ದರಲ್ಲಿ ಎಲ್ಲಾ ಅವೃತಿಯಲ್ಲೂ 'ಇಪ್ಪತ್ತು ರಾತ್ರಿ' ಎಂದೇ ಆಗಿತ್ತು ಅಲ್ಲದೇ ಆವೃತಿಗಳಲ್ಲಿ ಯಾವುದೇ ರೀತಿಯ ವ್ಯೆತ್ಯಾಸಗಳು ಕಂಡು ಬಂದಿಲ್ಲ ಹೊರತು ಮೌಲಾನ ಮಹಮೂದ್ ಹಸನ್ ರ ಟಿಪ್ಪಣಿಯೊಂದಿಗೆ ಸುನನ್ ಅಬೀದಾವೂದನ್ನು ಮುದ್ರಿಸಲಾದಾಗ ಪ್ರಕಾಶಕರು ಸ್ವತಃ ಅಥವಾ ಯಾರದ್ದೋ ಮಾತಿನಿಂದ ಮತನಿನಲ್ಲಿ 'ಲ್ಯಲ' ಎನ್ನುವುದರ ಮೇಲೆ 'ನೂನ್' ಎಂದು ಬರೆದು ಟಿಪ್ಪಣಿಯಲ್ಲಿ 'ರಕಅ'ತ್ತೆಂದು ಸೇರಿಸಿದರು. ಇದು ಎಲ್ಲರ ಗಮನಕ್ಕೆ ಬರಲಿ ಇಲ್ಲಿ ಆವೃತ್ತಿಯಲ್ಲಿ ವ್ಯೆತ್ಯಾಸಗಳಿವೆ ಎನ್ನುವ ಕಾರಣಕ್ಕಾಗಿ ಮಾತ್ರ. ಇದೇ ರೀತಿ **'ಬುಝುಲ್ ಮಜಹೂದ್'** ರೊಂದಿಗೆ ಸುನನ್ ಅಬೀದಾವೂದ್ ಮುದ್ರಿಸುವಾಗ ಮತನ್ ನಲ್ಲಿ 'ಲ್ಯಲ' ಎಂದೂ ಅದರ ಮೇಲೆ 'ನೂನ್' ಎಂದು ಬರೆದು ಟಿಪ್ಪಣಿಯಲ್ಲಿ **'ರಕಅ'** ಎಂದು ಬರೆದು ಅದರೊಂದಿಗೆ ' كذا في نسخةٍ مقْرُوءةٍ علي الشَّيخِ مولانا محمَّد اسحاق رحمه الله ಎಂದು ಸೇರಿಸಿದರು. ಯಾವುದೇ ರೀತಿಯ ವಿವರಣೆ ಇಲ್ಲದೆ ಈ ಪದಪುಂಜ ಯಾರದ್ದು? ಈ ಆವೃತ್ತಿಯನ್ನು ನೋಡಿದವರು ಯಾರು?. ಇದು ಶ್ಯೆಖ್ ಮೌಲಾನಾರ ಪದಪುಂಜದಲ್ಲಿಲ್ಲ ಹೊರತು ಸುನನ್ ಅಬೀದಾವೂದ್ ರ ಟಿಪ್ಪಣಿಯಲ್ಲಿ ಸೇರಿಸಿದ್ದಾಗಿದೆ ಅಲ್ಲದೇ ಈ ಪದಪುಂಜ ಅನಾಮಿಕವಾಗಿರುವುದರಿಂದ ವಿಶ್ವಾಸಕ್ಕೆ ಅನರ್ಹವಾಗಿರುವುದಾಗಿದೆ. ಸ್ಪಷ್ಟವೇನೆಂದ ಈ ಎಲ್ಲಾ ಕಾರ್ಯಗಳಿಂದ ಸುನನ್ ಅಬೀ ದಾವೂದ್ ನ ಕೆಲವು ಪ್ರತಿಗಳಲ್ಲಿ **'ಇಪ್ಪತ್ತು ರಕಅ'** ಎಂದು ಇಪ್ಪತು ರಕಅತ್ ಸ್ಥಾಪಿಸಲು ಇದನ್ನು ಪ್ರತ್ಯಕ್ಷಪಡಿಸಬಹುದು ಆದರೆ ಸಾಕ್ಷಿಗಳ ಮುಂದೆ ಇವು ತದಲೀಸ್(ಮೋಸ) ಮತ್ತು ತಲ್ಬೀಸ್(ಸುಳ್ಳಿನ ಹೊದಿಯನ್ನು ಅದರ ಮೇಲೆ ಹೊದಿಸಿರುವುದು) ಎಂದು ತಿಳಿಯದೇ ಇರಲು ಸಾದ್ಯವೇ?. ಇನ್ನು ಸಾಧಾರಣಕಾರನೊಬ್ಬ! ಹೀಗೆ ಆಗಲು ಸಾದ್ಯವೇ ಇಂತಹಾ ಉಲಮಾರ ಮೇಲೆ ಸುಳ್ಳು ಹೇಳುವುದೋ ಅಥವಾ ಅವರ ಮೇಲೆ ಇಂತಹಾ ವಿನಿಮಯಗಳನ್ನು ಹೇರುವುದೋ ಕಾರಣ ಅವರು ಮಹಾ ಪಂಡಿತರುಗಳ ಪಟ್ಟಿಯಲ್ಲಿ ಸೇರಿದವರಲ್ಲವೇ! ಇದು ಹೇಗೆ ಸಾಧ್ಯ ಇಂತಹಾ ವಿಷಯಗಳಲ್ಲಿ ನಾವು ಸುಮ್ಮನೆ ಇರುವುದಲ್ಲವೇ ಉತ್ತಮ?. ಅಂತಹ ವ್ಯೆಕ್ತಿಗಳು ತಿಳಿಯಬೇಕಾದ ವಿಷಯವೇನೆಂದರೆ ಸಾಧ್ಯ ಅಸಾಧ್ಯ ಎನ್ನುವುದ ಲಾಭವಿಲ್ಲದ

ವಿಷಯಗಳಾಗಿವೆ ಲೋಕದಲ್ಲಿ ಇದಕ್ಕಿಂತ ದೊಡ್ಡ ದೊಡ್ಡ ಆಗು ಹೋಗುಗಳು ನಡೆದು ಹೋಗಿವೆ ಅಲ್ಲದೇ ಇಂದಿನವರೆಗೂ ಆಗುತ್ತಾ ಇವೆ ಅಲ್ಲದೇ ಯಾವೊಬ್ಬನಿಗೂ ಬರೇ ಮಾತಿನಿಂದಲ್ಲದೇ ಸುಧಾರಣೆಯ ಬಾಗ್ಯ ದೊರಕಿಲ್ಲ. ಮೌಲಾನ ಮಹಮೂದ್ ಅಲ್ ಹಸನ್ ರ ಬಗ್ಗೆ ಯಾರು ಅಜ್ಞಾತರಾಗಿದ್ದಾರೆ? ಮತ್ತು ಅವರ ಗ್ರಂಥ **'ಇಳಾಹುಲ್ ಅದಿಲ್ಲಃ'** ಎನ್ನುವ ಅವರ ಗ್ರಂಥವನ್ನು ಯಾರಿಗೆ ತಾನೆ ಗೊತ್ತಿಲ್ಲ? ಅದನ್ನು ಅವರು ಒಬ್ಬ ಅಹ್ಲುಲ್ ಹದೀಸ್ ಆಲಿಮರ ವಿರುದ್ಧ ಜವಾಬಾಗಿ ಬರೆದಿರುವುದಾಗಿದೆ (ಅಹ್ಲುಲ್ ಹದೀಸಿನ ಆಲಿಂ

﴿ فَإِن تَنَازَعْتُمْ فِي شَيْءٍ فَرُدُّوهُ إِلَى اللَّهِ وَالرَّسُولِ إِن كُنتُمْ تُؤْمِنُونَ بِاللَّهِ وَالْيَوْمِ الْآخِرِ ۚ ذَٰلِكَ خَيْرٌ وَأَحْسَنُ تَأْوِيلًا﴾ (سورة النساء 59)

ಎನ್ನುವ ಆಯತ್ತನ್ನು ಪುರಾವೆಯಾಗಿ ನೀಡಿದ್ದರು.) ಅದಕ್ಕೆ ಉತ್ತರ ಕೊಡುತ್ತಾ ತನ್ನ ಅನಿಸಿಕೆಯಂತೆ ಬೇರೊಂದು ಆಯತ್ತನ್ನು ನೀಡಿರುವರು ಅಂತಹಾ ಆಯತ್ತೇ ಖುರ್ಆನಲ್ಲಿ ಎಲ್ಲೂ ಇಲ್ಲ ಅವರು ಬರೆಯುತ್ತಾರೆ:

" ಹೀಗಿರುವಾಗ ಸ್ಪಷ್ಟವಾಗುದೇನೆಂದರೆ ಆಜ್ಞೆ ಯು ಆಜ್ಞೆ ಅಲ್ಲಾಹನದ್ದಾಗಿದೆ ಆಡಳಿತಾಧಿಕಾರಿಗಳು ಅಂಬೀಯಾ ರಾಗಿದ್ದಾರೆ ಮತ್ತು ಇಮಾಮ್ , ಖಾಳೀ, ಅಯಿಮ್ಮತುಲ್ ಮುಜ್ತಹಿದೀನ್ ಅಥವಾ ಬೇರೆ ಆಜ್ಞಾಧಿಕಾರಿಗಳಾಗಿದ್ದಾರೆ. ಅಲ್ಲಾಹನು ನಿಯೋಗಿಸ್ಪಟ್ಟಂತಹವರಾಗಿದ್ದಾರೆ ಅಂದರೆ ರಾಜರ ಕೆಳಗೆ ರಾಜಾಧಿಕಾರಿಗಳು ಕಾರ್ಯದರ್ಶಿಗಳು ಅವರ ಕೆಲಗೆ ಕಾರಕೂನರು ಇರುವಂತೆ ಅವರ ಅಪ್ಪಣೆಯನ್ನು ಚಾಚು ತಪ್ಪದೇ ನಿರ್ವಹಿಸುವವರೆಂತೆ ಎಂದು ತಿಳಿದುಕೊಳ್ಳಬೇಕಾಗಿದೆ. ಇದೇ ರೀತಿ ಅಂಬೀಯಾರ ಅನುಸರಿಸುವ ಉಲುಲ್ ಅಂರ್ ಅಲ್ಲಾಹನ ಆಢಳಿತಾಧಿಕಾರಿಗಳೆಂದಾಗಿದೆ ಇದೇ ರೀತಿ ಅಂಬಿಯಾರ ಹಿಂಬಾಲಕರು ಇಮಾಮರು ಖಾಳಿಗಳು ಅಲ್ಲಾಹನನ್ನಾಗಿದೆ ಹಿಂಬಾಲಿಸುವುದು ಅದಲ್ಲವೆಂದು ಯಾರಾದರು ಭಾವಿಸಿದರೆ ಆಜ್ಞೆಕಾರಣ ಆಜ್ಞೆಯನ್ನು ಪಾಲಿಸುವವರು ಧಿಕ್ಕಾರಿಗಳೆನ್ನುವುದಕ್ಕೆ ಸಮಾನವಾಗುವುದು ಅದು ಸರಿಯಲ್ಲ ಕಾರಣ ಅಲ್ಲಾಹನ ವಚನ ಹೀಗಿದೆ:

﴿ فَإِن تَنَازَعْتُمْ فِي شَيْءٍ فَرُدُّوهُ إِلَى اللَّهِ وَالرَّسُولِ وَأُوْلِي الْأَمْرِ مِنْكُمْ﴾ سورة ؟

ಈ ಆಯತ್ತಿನಲ್ಲಿ ಅಲ್ಲಾಹನು ಉಲುಲ್ ಅಂರ್ ಎಂದರೆ ಅಂಬಿಯಾರ ಹೊರತು ಬೇರೆಯವರೂ ಇದ್ದಾರೆ. ಎಂದು ಸೂಚನೆ ಇದೆ ಈಗ ತಮಗೆ ತಿಳಿದರ ಬಹುದು ಖುರ್ಆನಿನಲ್ಲಿ ಹಿಗೂ ಆಯತ್ ಇದೆ ಎಂದು ಅದೇ ಖುರ್ಆನಿನಲ್ಲಿ ತಾವು ತೋರಿಸಿದ ಆಯತ್ ಒಂದಕ್ಕೊಂದು ಎದುರಾಗುವುದರಿಂದ ಒಂದಕ್ಕೆ ನಾಸಿಖ್ ಎಂದೂ ಇನ್ನೊಂದಕ್ಕೆ ಮನ್ಸೂಖ್ ಆದ ಫತ್ವಾ ಹೊರಡಿಸಿದ್ದೀರಿ" [120]

ಈ ಮೇಲೆ ಬರೆದ ಆಯತ್ತನ್ನು ಚೆನ್ನಾಗಿ ನೋಡಿಕೊಳ್ಳಿ ಮೌಲಾನ ಮರ್ಹೂಮ್ ಒಬ್ಬ ಅಹ್ಲುಲ್ ಹದೀಸಿನ ಆಲಿಮ್ ತೋರಿಸಿದ ಸೂರಃ ನಿಸಾಅನ ಆಯತ್ತಿ ವಿರುದ್ಧ ಬೇರೊಂದು ಆಯತ್ ತಂದಿರುವರು ಅದರ ವಾಕ್ಯ:

﴿ فَإِن تَنَازَعْتُمْ فِي شَيْءٍ فَرُدُّوهُ إِلَى اللَّهِ وَالرَّسُولِ وَأُوْلِي الْأَمْرِ مِنْكُمْ﴾

ಈ ರೀತಿ ಬರೆದು ಯಾವ ರೀತಿಯಲ್ಲಿ ಅವರ ಮೇಲೆ ಕೆಸರೆರಚಿ ಬರೆಯುತ್ತಾರೆ ನೀವು ಬರೆದ ಆಯತ್ ನೋಡಿದ್ದೀರಿ ಆದರೆ ಈ ಆಯತ್ ನಿಮಗೆ ತಿಳಿದೇ ಇಲ್ಲ ಅಲ್ಲದೇ ನಾಸಿಕ್ ಎಂದು ಕೆಳದರ್ಜೆಯಿಂದ ತಳ್ಳಿದ್ದೀರಿ ಎಂದು ಹೇಳಿದ್ದಾರೆ ಹೀಗಿರುವಾಗ ಮೌಲಾನ ತಂದಿರುವ ಈ ಎರಡನೇ ಆಯತ್ ಖುರ್ಆನಿನ ಯಾವ ಸೂರತ್ತಿನಲ್ಲಿದೇ? ಇದು ಮೌಲಾನರ ಕಾಲದಲ್ಲಿ ಮುದ್ರಿತ ಗೊಂಡಿರಬಹುದು ಅಲ್ಲದೇ ಅವರ ಶಿಶ್ಯಂದಿರಾದ ದೊಡ್ಡ ದೊಡ್ಡ ಆಲಿಮರಿದ್ದರು ಯಾರುತಾನೆ ಈ ಆಯತಿನ ಬಗ್ಗೆ ಸ್ಪಷ್ಟಡಿಸಿರುವುದು. ಇಂತಹ ದೊಡ್ಡ ದೊಡ್ಡ ಘೋರ ಅಸಾದ್ಯ ವಿನಿಮಯಗಳು ಪ್ರತ್ಯಕ್ಷಗೊಂಡ ಮೇಲೆ ಹದೀಸಿನಲ್ಲಿ ವಿನಿಮಯ ದೊಡ್ಡಮಾತೆ? ಇಂತಹಾ ದೊಡ್ಡ ದೊಡ್ಡ ತಪ್ಪುಗಳು ದೊಡ್ಡ ಉಲಮಾಅರಿಂದ ಸಂಭವಿಸುವುದಾದರೆ ಸರ್ವೇಸಾಮನ್ಯ ಯಾರೊಂದಿಗೂ ತಪ್ಪುಗಳು ಸಂಭವಿಸುತ್ತದೆ ಹಾಗೆ ಆಗಲು ಸಾಧ್ಯವೇ ಇಲ್ಲ ಎನ್ನುವುದು ಸಹಜಕ್ಕೆ ದೂರವಾದದ್ದು. ಹೊರತು (العصمة لله ولرسوله خاصة) [121]

---

[120] ಈಳಾಹುಲ್ ಅದಿಲ್ಲ ಪುಟ:97

[121] "ಅಲ್ ಇಅತಿಸಾಮ್ ಸಾಪ್ತಾಹಿಕ" 23 ಝುಲ್‌ಕ್ಯದ್ 1408 ಹಿಜರಿ, –8 ಜುಲಾಯಿ 1988 ಇಸವಿ.

ಹಕೀಂ ಮೌಲಾನ ಮೊಹಮ್ಮದ್ ಅಶ್ರಫ್ ಸ್ವಾಹಿಬ್ ಸಿಂದ್ವೀ ರ. ರವರ ತನಿಖೆಯ ಸಾರಾಂಶ.

ಹದೀಸ್ ಗ್ರಂಥಗಳಲ್ಲಿಯ ಬದಲಾವಣೆಯ ವಿಷಯದಲ್ಲಿ ಹಕೀಂ ಮೌಲಾನ ಮೊಹಮ್ಮದ್ ಅಶ್ರಫ್ ಸ್ವಾಹಿಬ್ ಸಿಂದ್ವೀ ತನ್ನ ಗ್ರಂಥ **'ನತಾಯಿಜು ತಕ್ಲೀದ್'** ನಲ್ಲಿ ಬಹಳ ವಿವರವಾಗಿ ಬರೆದಿರುವರು. ಅದರಲ್ಲವರು ಬರೆಯುತ್ತಾರೆ:

ಪ್ರಖ್ಯಾತ ಹೆಸರುವಾಸಿ ಆದ ಸಿಹಾವು ಸಿತ್ತ ಎನ್ನುವ ಗ್ರಂಥದಲ್ಲಿ ಇದರಲ್ಲಿ ನಮಾಜು ತರಾವೀಹ್ ಜಮಾತ್ತಾಗಿ ನಿರ್ವಹಿಸಬೇಕೆನ್ನುವದಕ್ಕೆ ಈ ರೀತಿ ವರದಿ ಬಂದಿದೆ:

عَنِ الْحَسَنِ، أَنَّ عُمَرَ بْنَ الْخَطَّابِ، جَمَعَ النَّاسَ عَلَى أُبَيِّ بْنِ كَعْبٍ فَكَانَ يُصَلِّي لَهُمْ عِشْرِينَ لَيْلَةً وَلاَ يَقْنُتُ بِهِمْ[122].....

"ಹಸನ್ ರವರ ಮುಖಾಂತರ ವಿವರ ದೊರಕಿತು "ಉಮರ್ ರ.ರವರು ಉಬಯೀ ಇಬ್ನ್ ಕಅಬರ ಇಮಾಮತ್ತಿನಲ್ಲಿ ಜನರ್ನು ಸೇರಿಸಿದರು ಅವರು ಜನರಿಗೆ ಇಪ್ಪತ್ತು ರಾತ್ರಿ ನಮಾಜು ಮಾಡಿಸುತ್ತಿದ್ದರು ಮತ್ತು ಕುನೂತ್ (ರಮಝಾನಿನ) ಬಾಕಿ ಇರುವ ಅರ್ಧದ ಹೊರತು ಓದುತಿರಲಿಲ್ಲ....."

ಲೋಕದ ಎಲ್ಲಾ ಮುದ್ರಣಗಳಲ್ಲೂ ಹಾಗೂ ಕೈಬರಹ ಕೃತಿಗಳಲ್ಲೂ **'ಇಪ್ಪತ್ತು ರಾತ್ರಿ'** ಎಂದೇ ಲಿಖಿತಗೊಂಡಿವೆ ಅಲ್ಲದೇ ಅಲ್ಲಾಮ ವಲೀಯುದ್ದೀನ್ ರಹಿಮಹುಲ್ಲಾಹ್ ಮುಹದ್ದಿಸ್ **'ಮಿಷ್ಕಾತುಲ್ ಮಸಾಬೀಹ್'** ನಲ್ಲಿಯೂ ಅಬೂದಾವೂದ್ ರ ಸಂಗ್ರಹೀತ ಪದಗಳಲ್ಲಿ **'ಇಪ್ಪತ್ತು ರಾತ್ರಿ'** ಎಂದೇ ನಕಲುಮಾಡಿರುವರು. ಮಿಷ್ಕಾತಿನ ಎಲ್ಲಾ ಕೈಬರಹ ಕೃತಿಗಳಲ್ಲಿಯೂ ಮತ್ತು ಮುದ್ರಣಗಳಲ್ಲೂ ಈ ಹದೀಸ್ ಇದೆ **'ಇಪ್ಪತ್ತು ರಾತ್ರಿ'** ಪದಗಳಿಂದ ಲಭ್ಯ. ನೋಡಿರಿ **'ಮಿಷ್ಕಾತ್'** ಮುದ್ರಣ ನೂರ್ ಮೊಹಮ್ಮದ್ ನಖ್ಷಬಂದೀ ಪುಟ: 115 ಅದ್ಯಾಯ ಕುನೂತ್ ಫಿಲ್‌ವಿತ್ರ್ ಫಸಲ್ ಸಾಲಿಸ್,. ಮುಲ್ಲಾ ಅಲೀ

[122] ಸುನನ್ ಅಬೂ ದಾವೂದ್, ಈಜ್ಪಿತಿನ ಮುದ್ರಣ ಅಬೂದಾವೂದ್ ಕಾದಿರಿ ದೆಹಲಿ 1276 ಇಸವಿ ಭಾಗ 1 ಪುಟ: 201, ಅಬೂದಾವೂದ ಮುದ್ರಣ ದೆಹಲಿ ಮೊಹಮ್ಮದೀ 1264 ಇಸವಿ ಭಾಗ 1 ಪುಟ: 203

ಖಾರಿಯವರ ಮುದ್ರಣ ಈಜಿಪ್ತ್ **'ಮಿರ್ಖಾತುಲ್ ಮಫಾತೀಹ್ ಶರಹ್ ಮಿಷ್ಕಾತುಲ್ ಮಸಾಬೀಹ್'** ಪುಟ: 167 ಫಸಲ್ ಸಾಲಿಸ್,. ಶೈಖ್ ಅಬ್ದುಲ್ ಹಕ್ ರವರ **'ಇಶಅತುಲ್ಲಮ್‌ಆತ್ ಶರಹುಲ್ ಮಿಷ್ಕಾತ್'** ಬಾಬು ಕುನೂತ್ ಫಿಲ್ ವಿತ್ರ್ ಫಸಲ್ ಸಾಲಿಸ್.

ಮೊದಲ ಆಕ್ರಮಣ:

ಶೈಖುಲ್ ಹಿಂದ್ ಮೌಲವಿ ಮಹಮೂದ್ ಅಲ ಹಸನ್ ಸುನನ್ ಅಬೀದಾವೂದ್ ಮುದ್ರಣ ದೆಹಲಿ ಯನ್ನು ಸ್ವೀಕೃತ (ಸ್ವಹೀಹ್) ಮಾಡುತ್ತಿರುವಾಗ ಈ ಹದೀಸಿನ ಮತನ್ ನ (ಅಸಲು ಬರಹದ) ಲ್ಲಿ **'ಇಪ್ಪತ್ತು ರಕಅತ್'** ಅದೇ ರೀತಿ ಬಿಟ್ಟು ಅದಕ್ಕೆ ಟಿಪ್ಪಣಿ ಬರೆಯುವಾಗ (**ركعة** كذا في نسخةٍ مقْرُوءةٍ علي الشَّيخِ مولانا محمَّد اسحاق رحمه الله) ಎನ್ನುವುದನ್ನು ಸೇರಿಸಿರುವುದು ಕಾಣಬಹುದು.[123]

ಎರಡನೇ ಆಕ್ರಮಣ:

ಮೌಲವಿ ಖಲೀಲ್ ಅಹ್ಮದ್ ಸಾಹರನ್‌ಪುರಿ ಯವರು ಶೈಖುಲ್ ಹಿಂದರ ಸ್ವಹೀಹ್ ಗೊಳಿಸಿದ ಅಬೂದಾವುದನ್ನು ಇಷ್ಟಪಡುತ್ತಾ **'ಬಝ್ಲುಲ್ ಮಜ್‌ಹೂದ್‌ಫೀ ಹಿಲ್ಲಿ ಅಬೂ ದಾವೂದ್'** ನಲ್ಲಿ ಬಾಬುಲ್ ಕುನೂತ್ ಫಿಲ್ ವಿತ್ರಿ ನ ಹದೀಸಿನ ಅಸಲನ್ನು **'ಇಪ್ಪತ್ತು ರಾತ್ರಿ'** ಎಂದು ಯಥಾಸ್ಥಿತಿಯನ್ನು ಕಾಪಾಡಿ ಟಿಪ್ಪಣಿಯಲ್ಲಿ (**ركعة** كذا في نسخةٍ مقْرُوءةٍ علي الشَّيخِ مولانا محمَّد اسحاق رحمه الله) ಎಂದು ಸೇರಿಸಿ ಬರೆದಿರುವುದನ್ನು ನೋಡಬಹುದು.[124]

ಅಂದರೆ ಅಬೂದಾವೂದ ನಲ್ಲಿ ಇಪ್ಪತ್ತು ರಾತ್ರಿ ಮತ್ತು ಇಪ್ಪತ್ತು ರಕಅತ್ ಎಂದೂ ಬಂದಿದೆ ಎಂದು ಮುಂದಿನ ಜನಾಂಗಕ್ಕೆ ಮೊಸಗೊಳಿಸಿರುವರು. ಶೈಖ್ ಮುಹಮ್ಮದ್ ಇಸ್ಹಾಕ್ ಮುಹದ್ದಿಸ್ ದಹಲವೀ ಯವರ ದರ್ಸ್ ನ ವಾಸ್ತವ ತಿಳಿಯಲಿಕ್ಕಾಗಿ ಪ್ರತ್ಯೇಖವಾಗಿ ಶೈಖರ ದರ್ಸಿನ ವಿಷಯವನ್ನು ವಿವರಿಸುವ ಅಬ್ಯಾಸ ಇರುವ ಶೈಖ್ ರ ಹನಫೀ ಶಿಶ್ಯರಿಂದ ಮೌಲಾನ ಅಹ್ಮದ್ ಅಲೀ ಸ್ವಾಹಿಬ್ ಸಹಾರಂಪುರೀ ರಹಿಮಹುಲ್ಲಾಹ್ ರವರ ಟಿಪ್ಪಣಿ ಪ್ರತ್ಯೇಖವಾಗಿ ನೋಡಬೇಕಾಗಿದೆ. ಸ್ವಹೀಹ್ ಬುಖಾರಿ

---

[123] ಅಬೂ ದಾವೂದ್ ಭಾಗ 1 ಪುಟ:219

[124] ಬಝುಲುಲ್ ಮಜ್ ಹೂದ್ ಪುಟ:368

ಅದ್ಯಾಯ **'ಇರ್ಝಾ ಉಖೀಮತಿಸ್ಸಲಾತು ಫಲಾ ಸ್ವಲಾತ ಇಲ್ಲಾ ಅಲ್ ಮಕ್ತೂಬತ'** ಎನ್ನುವ ಟಿಪ್ಪಣಿಯ ಬದಲು ಸ್ವತಃ ತನ್ನ ತನಿಖಾ ಶಕ್ತಿಯಿಂದ ಮಾಡಿರುವ ಅವರ ಮಾತಿನಿಂದ **'ಇಲ್ಲಾ ರಕಅತ್ಯಇಲ್ ಫಜ್ರ್'** ಬ್ಯಹಕೀ ಯ ವತಿಯಿಂದ ಬರೆದಿರುವರು. ಒಂದು ವೇಳೆ ಸಹಾರಂಪುರೀ ರಹಿಮಹುಲ್ಲಾಹ್ **'ರಕಅ'** ಉದ್ಧರಣಿಯ ಮಂಡನೆಯನ್ನು ಶ್ಯೇಖರ ದರ್ಸಿನಿಂದ ಕೇಳಿರುತಿದ್ದರೆ ತನ್ನ **'ಮಿಷ್ಕಾತ್'** ಅಥವಾ **'ಬುಖಾರಿ'** ಯ ಟಪ್ಪಣಿಯಲ್ಲಿ ಕಂಡಿತಾ ವಿವರಿಸುತಿದ್ದರು. ಇದೇ ರೀತಿ ಶ್ಯೇಖರ ಇನ್ನೊಬ್ಬ ಶಿಶ್ಯ ನವಾಬ್ ಖುತುಬುದ್ದೀನ್ ಸ್ವಾಹಿಬ್ **'ಮಳಾಹಿರುಲ್ ಹಕ್'** ನಲ್ಲಿ ಇದರ ಬಗ್ಗೆ ಸುಳಿವು ಕೊಡಲಿಲ್ಲ. ಅಲ್ಲದೇ ಶ್ಯೇಖರ ಹತ್ತಿರದ ಕಾಲದವರಾದ ಒಬ್ಬರು ಖಾದಿರಿ ದಹಲವೀ ಮತ್ತೊಬ್ಬರು ಮುಹಮ್ಮದೀ ದಹಲವೀ ಇವರಿಬ್ಬರಿಂದಲೂ ಹನಫೀ ಗೌರವಾನ್ವಿತರು **'ರಕಅತ್'** ಎನ್ನುವದನ್ನು ಉಲ್ಲೇಖಿಸಲೇ ಇಲ್ಲವೆನ್ನುವುದ ಗಮನಾರ್ಹ ಇವುಗಳು ಈ ವಿಷಯದ ಪ್ರತ್ಯಕ್ಷ ಸಾಕ್ಷಿಗಳಾಗಿವೆ ಆದುದರಿಂದ ಸತ್ಯವನ್ನು ಮರೆಮಾಚಲು ಸುಳ್ಳಿನಹೊದಿಕೆಯನ್ನು ಹೊದಿಸಿರುವುದಾಗದೆ.

ಮೂರನೇ ಆಕ್ರಮಣ:

ಮೌಲವೀ ಫಕುರುಲ್ ಹುಸ್ಯನ್ ಮತ್ತು ಅಲ್ ಹಸನ್ ಸ್ವಾಹಿಬರು ಗಂಗೋಹೀ ಸದಸ್ಯ ದಿಯೊಬಂದ್ ಇಬ್ಬರು ತಂತೆ ಮತ್ತು ಮಗ ಅಬೂದಾವೂದ್ ಮುದ್ರಣ ಮಜದೀ ಕಾನ್ಪುರ,1345 ಹಿಜರಿ ಯ ವಿವರಣಾ ಟಿಪ್ಪಣಿ ಬರೆಯುತ್ತಾ ಅಸಲಿನಲ್ಲಿ ಟಿಪ್ಪಣಿಯ ಸಂಕೇತಕೊಡುತ್ತಾ ಟಿಪ್ಪಣಿಯಲ್ಲಿ 'ಲ್ಯಲ' ಕ್ಕೆ ನಕಲು ಪ್ರತಿಯೆಂದು ಹೇಳಿದರು[125]

ನಾಲ್ಕನೇ ಆಕ್ರಮಣ:

ನಾಲ್ಕನೇ ಶಹಸುವಾರ್ ರು ಅಬೂದಾವುದಿನ ಮುದ್ರಣ ನೌಲಕ್ಷೋರ್ ರ ಪರಿಷೀಲನೆಯ ನಂತರ 'ಇಪ್ಪತ್ತು ರಾತ್ರಿ' ಯನ್ನು ಅಸಲಿನಲ್ಲೆ 'ಇಪ್ಪತ್ತು ರಕಅತ' ಎಂದು ಮಾಡಿರುವರು.[126]

---

[125] ಅಬೂ ದಾವೂದ್ ಪುಟ:202 ಟಿಪ್ಪಣಿಯೊಂದಿಗೆ ಮಹಮೂದ್, ಮುದ್ರಣ ಮಜ್ದೀ ಕಾನ್ಪುರ.

[126] ಅಬೂ ದಾವೂದ್ ಪುಟ:203 ಮುದ್ರಣ ನೌಲಕ್ಷೋರ್

ಇಪ್ಪತ್ತು ರಕಅತ್ ತರಾವೀಹ್ ನ ವಾದ ಮತ್ತು ಇಜ್ಮಾಅ ಹಾಗೂ ಅದರ ವಾಸ್ತವ

ಕೆಲವರ ವಾದ ಉಮರ್ ರ. ರವರ ಕಾಲದಲ್ಲೇ ತರಾವೀಹ್ ಇಪ್ಪತ್ತು ರಕಅತ್ ಎಂದು ಇಜ್ಮಾಅ ಆಗಿರುತ್ತದೆ ನಂತರ ಎಲ್ಲಾ ಸ್ಥಳಗಳಲ್ಲಿಯೂ ಇದನ್ನು ಕಾರ್ಯರೂಪಕ್ಕೆ ತಂದಿರುವರು ಇದನ್ನು ಅಲ್ಲಾಮ ಮುಲ್ಲಾ ಅಲೀ ಖಾರಿ ಉಮ್ದತುಲ್ ಖಾರಿ–3/175. ಮತ್ತು ಅಲ್ಲಾಮ ಹ್ಯತಮೀ ಮಜ್ಮಅ ಅಝ್ಝವಾಯಿದ್–3/172 ರಲ್ಲೂ ಹಾಗೂ ಮುಲ್ಲಾ ಅಲೀ ಖಾರಿ 'ಮಿರ್ಕಾತ್ ಶರಹ್ ಮಿಷ್ಕಾತ್–2/175 ರಲ್ಲಿ ವಿವರಿಸಿರುವರು ಎಂದಾಗಿದೆ.

ಅಲ್ಲಾಮ ಮುಬಾರಕ್‌ಪುರಿಯವರ ಇದರ ಬಗ್ಗೆ ತನಿಖೆ

ಅಲ್ಲಾಮ ಮುಬಾರಕ್ ಪುರಿಯವರು ಈ ವಾದ ಸರಾಸರಿ ತಪ್ಪು ಮತ್ತು ಬಾತಿಲ್ ಎಂದು ಬರೆಯುತ್ತಾರೆ " ಅಲ್ಲಾಮ ಐನೀ ರ. ಉಂದತುಲ್ ಖಾರಿಯಲ್ಲಿ ಹೇಳಿರುವುದೇನೆಂದರೆ ತರಾವೀಹ್ ರಕಅತ್ತಿನ ಗಣನೆಯಲ್ಲಿ ಬಹಳಷ್ಟು ಬರಹಗಳು ಬಂದಿವೆ ಇಮಾಮ್ ರಹಿಮಹುಲ್ಲಾಹ್ ಹುರ್‍ರದ ನಂತರ ಅಂದರೆ ನೂರು ಅಥವಾ ಸ್ವಲ್ಪ ಜಾಸ್ತಿಕಾಲದಿಂದ ಹಿಡಿದು ಇಂದಿನವರೆಗೂ ಮದೀನ ಮುನವ್ವರದಲ್ಲಿ ಮುವ್ವತೆಂಟು ರಕಅತ್ ತರಾವೀಹ್ ಮತ್ತು ಒಂದು ರಕಅತ್ ವಿತ್ರ್ ನೊಂದಿಗೆ ಅರಾಧನೆ ನಡೆಯುತಿತ್ತು ಆದರೆ ಸ್ವತಃ ದಾರುಲ್ ಹಿಜರಾ ಇಮಾಮ್ ಮಾಲಿಕ್ ರ. ರವರು ಹನ್ನೊಂದು ರಕಅತ್ ಹಿಡಿದುಕೊಂಡಿದ್ದರು. ಮತ್ತು ಪ್ರಖ್ಯಾತ ಕರ್ಮಶಾಸ್ತ್ರ ಪಂಡಿತ ಅಸ್ವದ್ ಇಬ್ನ್ ಯಝೀದ್ ನಲವತ್ತು ರಕಆತ್ ತರಾವೀಹ್ ಮತ್ತು ಏಳು ರಕಆತ್ ವಿತ್ರ್ ನಿರ್ವಹಿಸುತಿದ್ದರು. ಇವುಗಳ ಹೊರತಿರುವ ಮಾತುಗಳೂ ಅಲ್ಲಾಮ ಐನೀ ರ. ರವರು ಹೇಳಿದಂತೆ(ಈ ಗ್ರಂಥದ ಆರಂಭದಲ್ಲಿ ನಾವು ತಿಳಿಸಿರುವ ಹಾಗೆ)

ಈ ಎಲ್ಲಾ ವಿವರಗಳನ್ನು ಮುಂದಿಟ್ಟು ಯಾರಾದರೂ ಬರೇ ಇಪ್ಪತ್ತು ರಕಆತ್ ಮಾತ್ರ ಇಜ್ಮಾಅ ಎಲ್ಲಿಂದ ಉಂಟಾಯಿತೆಂದು ತಿಳಿಸಲಿ? ಅಲ್ಲದೇ ಎಲ್ಲಾ ಕಡೆಯಲ್ಲು ಇದು ಕಾರ್ಯರೂಪಕ್ಕೆ ಹೇಗೆ ಬಂದಿದೆ ಎಂದು ತಿಳೀಸುವಿರಾ!?[127]

ಅಲ್ಲಾಮ ನಾಸಿರುದ್ದೀನ್ ಅಲ್ಬಾನಿಯವರ ದೃಷ್ಟಿಯಲ್ಲಿ

[127] ತುಹ್ಫತುಲ್ ಅಹ್ವಝಿ–3/531–532

ಅಲ್ಲಾಮ ಮುಬಾರಕ್‌ಪುರಿ ರ.ರವರು ಈ ವಿಷಯವನ್ನು ಬಾತಿಲ್ ಎಂದು ಹೇಳಿದ ನಂತರ ಅಲ್ಬಾನಿ ರ. ಬರೆಯುತ್ತಾರೆ. ವಾಸ್ತವದಲ್ಲಿ ತರಾವೀಹ್ ನ ಬಗ್ಗೆ ಎಂಟಕ್ಕಿಂತ ಕಡಿಮೆ ಮತು ಹೆಚ್ಚು ಎನ್ನುವ ಎರಡೂ ಅಭಿಪ್ರಾಯಗಳು ಬಹಲಷ್ಟು ಸಿಗುತ್ತಿರುವಾಗ ಇಜ್ಮಾಅ ನ ಈ ವಾದ ಸರಿಯಾಗಿದ್ದರೆ ಮುತಅಖ್ಖಿರೀನ್ ಸಲಫ್‌ನ ಕರ್ಮ ಶಾಸ್ತ್ರ ಉಲಮಾ ಇವುಗಳನ್ನು ವಿರೋದಿಸುತಿಲ್ಲವಾಗಿತ್ತೆನ್ನುವುದು ಈ ಮಾತಿನ ಬಗ್ಗೆ ಹೆಚ್ಚು ಶಕ್ತಿಯನ್ನು ನೀಡುತ್ತದೆ ಅಲ್ಲದೇ ಯಾವುದಾದರೊಂದು ಗ್ರಂಥದಲ್ಲಿ ಇಜ್ಮಾಅನ ಮಾತು ಬಂದಲ್ಲಿ ಆ ಇಜ್ಮಾಅ ಸಾಬೀತಾಗಲಾರದು ಮತ್ತು ಇಂತಹಾ ಇಜ್ಮಾಅನ್ನು ತಿಳಿಯಲು ಆಗ್ರಹವಿದ್ದರೆ ನಾವು ಇಂತಹಾ ಬಹಳಷ್ಟು ಇಜ್ಮಾಅನ್ನು ತಪ್ಪೆಂದು ಹೇಳುವೆವು ಉಧಾಹರಣೆಗೆ ಕೆಲವರು ಮೂರು ರಕಅತ್ ವಿತ್ರ್ ನ ಬಗ್ಗೆ ಇಜ್ಮಾಅ ಎಂದು ಹೇಳಿರುವರು ವಾಸ್ತವದಲ್ಲಿ ಬಹಳಷ್ಟು ಸ್ವಹಾಬರು ಒಂದು ರಕಅತ್ ವಿತ್ರ್ ನಿರ್ವಹಿಸಿರುವುದಾಗಿ ಸಾಬೀತಾಗಿದೆ.[128]

ನವಾಬ್ ಸಿದ್ದೀಕ್ ಹಸನ್ ಖಾನ್ ರವರ ಮಾತು

ಸ್ವಹೀಹುಲ್ ಬುಖಾರಿಯ ಶರಹ್ ಅಸ್ಸಿರಾಜುಲ್ ವಹ್ಹಾಜ್ ನ ಮುನ್ನುಡಿಯಲ್ಲಿ ಅಲ್ಲಾಮ ನವಾಬ್ ಹಸನ್ ಖಾನ್ ಬೋಪಾಲೀ ಬರೆಯುತ್ತಾರೆ. " ಇಜ್ಮಾಅನ ಮಾತನಾಡುವಲ್ಲಿ ಜನರು ಬಹಳಷ್ಟು ಸರಳವಾಗಿ ಕಾರ್ಯವನ್ನು ಕೈಗೊಂಡಿರುವುದಾಗಿ ತೋರುತಿದೆ. ಒಬ್ಬ ಕರ್ಮಶಾಸ್ತ್ರ ದ ಬಗ್ಗೆ ಕೇವಲ ಜ್ಞಾನವನ್ನಿಟ್ಟಕೊಂಡು ಯಾವೊಂದು ಸಮೂಹವೂ ಒಂದು ವಿಷಯದಬಗ್ಗೆ ಸೇರಿಕೊಂಡಿದ್ದರೆ ಆ ಸೇರುವಿಕೆ ಇಜ್ಮಾಅ ಆಗಿದೆ ಎನ್ನುವಂತಹಾ ವಾದ ನನ್ನ ಬಳಿ ಫಾಸಿದ್ ಆಗಿದೆ. ಮೊತ್ತದಲ್ಲಿ ಸಾದಾರಣ ತಿಳುವಳಿಕೆ ಇರುವ ಒಬ್ಬ ವ್ಯಕ್ತಿ ಬಹುಪಕ್ಷ ಜನಸಾಮಾನ್ಯರಲ್ಲಿ ನಡೆಯುತ್ತಿರುವ ಸಾಂಪ್ರಾದಾಯಿಕವನ್ನು ನೋಡಿ ಅದಕ್ಕೆ ಇಜ್ಮಾಅನ ಹೆಸರು ಕೊಡುವ ಪ್ರಯತ್ನಮಾಡುತ್ತಿರುವುದು ನಾವು ನೋಡುತ್ತಿರುವುದಾಗಿದೆ ಅಂತಹಾ ಕಾರ್ಯಗಳಲ್ಲಿ ಜನಸಾಮಾನ್ಯರು ಸಿಲುಕಿದರೂ ಪರಿವೆಯೇ ಇಲ್ಲದಂತೆ ಯಾಗಿದೆ. ಅಲ್ಲದೇ ಯಾವುದಾದರೂ ಪುರಾವೆಗಳನ್ನು ಮುಂದಿಟ್ಟು ಇಜ್ಮಾಅ ಎಂದು ಜನರಮೇಲೆ ಹೇರುವರು.

[128] ಸ್ವಲಾತುತರಾವೀಹ್ (ಅಲ್ಬಾನಿ) ಪುಟ:79 ಉರ್ದು, ಪುಟ:76 ಅರಬಿ.

ಹೆಚ್ಚಾಗಿ ನೋಡಲು ಸಾಧ್ಯವಾಗುವ ವಿಷಯವೇನೆಂದರೆ ಬಹುಪಕ್ಷ ಜನರ ಅಭಿಪ್ರಾಯ ಮುನ್ನೆಚ್ಚರಿಯ ವಿಷವನ್ನು ಗಮನಿಸುವಲ್ಲಿ ಇಜ್ಮಾಅ ಎನ್ನುವ ಪರಿವೆಗೆ ಹೊಗಲಾಗದು ಆದರೆ ಹೇಚ್ಚಾಗಿ ನಾಲ್ಕು ಕರ್ಮಶಾಸ್ತ್ರ ಪಂಡಿತ ಏಕ ಅಭಿಪ್ರಾಯಗಳನ್ನು ಇಜ್ಮಾಅ ಎಂದು ಘೋಷಿಸಲಾಗಿರುವಂತಹ ವಿಷಯಗಳನ್ನು ಇಲ್ಲಿ ಇಜ್ಮಾಅ ಎಂದು ಪರಿಗಣಿಸಿರುವುದನ್ನು ನೋಡಲು ಸಾಧ್ಯವಾಗಿರುವುದು. ಸಲಫ್ ಉಲಮಾಅರಲ್ಲಿ ಇಮಾಮ್ ನವವಿ ಅದೇ ರೀತಿ ಇತರ ಉಲಮಾಅರು ಬಹುಪಕ್ಷ ಜನರ ಅಭಿಪ್ರಾಯಗಳನ್ನು ಇಜ್ಮಾಅ ಎನ್ನುವ ಗೋಜಿಗೆ ಹೋಗದೇ ಆ ವಿಷಯದಲ್ಲಿ ಜಾಗ್ರತೆವಹಿಸಿರುವುದು ಸ್ವಹೀಹ್ ಮುಸ್ಲಿಂ ನಲ್ಲಿ ಅವರು ಬರೆದಿರುವ ಶರಹ್(ಟಿಪ್ಪಣಿ) ನಲ್ಲಿ ಇದರ ಉಧಾಹರಣೆ ನೋಡಬಹುದಾಗಿದೆ.

ಒಂದು ಮಾತು ನೆನಪಿಡಬೇಕಾಗಿರುವುದೇನೆಂದರೆ ಪರಿಷೀಲಣಾ ಖ್ಯಾತ ಉಲಮಾಅರು ಇಂತಹಾ ಇಜ್ಮಾಅನ್ನು ಪ್ರಮಾಣವಾಗಿ ಪರಿಗಣಿಸುವುದಿಲ್ಲ ಯಾಕೆಂದರೆ ಮುಜ್ತಹಿದೀನ್ ಆದ ಇಮಾಮರು ಬರುವ ಮೊದಲು ಖ್ಯರುಲ್ ಕುರೂನ್ (ಮೂರು ಉತ್ತಮ ಸಂವಸ್ತ್ರಗಳೆಂದು) ಕರಾರು ಮಾಡಲಾಗಿದೆ ಮತ್ತು ನಾಲ್ಕು ಇಮಾಮರ ಕಾಲ ಖ್ಯರುಲ್ ಖುರೂನ್ ನಲ್ಲಾಗಲಿಲ್ಲ. ಅಲ್ಲದೆ ಅವರ ಕಾಲಘಟ್ಟಗಳಲ್ಲಿ ಎಷ್ಟೋ ಇಜ್ತಿಹಾದ್ ನ ವಿಷಯದಲ್ಲಿ ಪಳಗಿದ ಇವರಿಗಿಂತ ಶ್ರೇಷ್ಟ ಪಂಡಿತ ವರೇಣ್ಯರಿದ್ದರು ಹಾಗೂ ಅಯಿಮ್ಮ ಅರ್ಬ ರ ಕಾಲದಲ್ಲಿಂದ ಹಿಡಿದು ಇಂದಿನ ವರೆಗೆ ಹಲವಾರು ಇಜ್ತಿಹಾದಿನ ಸಾರ್ಮತ್ಯದಲ್ಲಿ ಶ್ರೇಷ್ಟ ಪರಿಣಿತ ಪಂಡಿತ ಮಹಾಶಯರಿದ್ದರು ಅವುಗಳನ್ನು ಯಾವೊಬ್ಬ ಪಂಡಿತರೂ ಅಲ್ಲಗಳೆಯಲು ಸಾಧ್ಯವಿಲ್ಲ. ಹೀಗಿರುವ ಈ ಕಾಲದಲ್ಲಿ ನೈಜ್ಯಮಾರ್ಗ ಅವಲಂಬಿಸುವುದು ನೀತಿಯ ಮಾತನಾಡುವುದು ಸತ್ಯಕ್ಕೆ ದೂರವಲ್ಲ.

ಹೀಗಿರುವಾಗ ಯಾವುದೇ ವಿಷಯಗಳಲ್ಲಿ ಬರೆ ಅಯಿಮ್ಮ ಅರ್ಬ ರವರ ಮಾತೆ ಇಜ್ಮಾಅ ಎಂದು ಹೇಳುವುದು ಸರಿಯಾಲ್ಲ ಅವರ ಕಾಲಘಟ್ಟಗಳಲ್ಲಿ ಬಹಳಷ್ಟು ಇತರ ಮುಜ್ತಹಿದ್ ಆದ ಪಂಡಿತ ಶಿರೋಮಣಿಗಳಿರುವಾಗ.[129]

ಇಮಾಮ್ ಶೌಖಾನಿ ಯವರ ಅಭಿಪ್ರಾಯ

[129] ಮುನ್ನುಡಿ ಸಿರಾಜುಲ್ ವಹ್ಹಾಜ್ ಫೀ ಕಶಫಿಲ್ ಮತಾಲಿಬ್ ಸ್ವಹೀಹ್ ಮುಸ್ಲಿಂ –ಇಬ್ನುಲ್ ಹಜ್ಜಾಜ– 1/3/79–80 ಉರ್ದು, 72–73 ಅರಬಿ.

ಸಧಾರಣವಾಗಿ ಕೆಲವು ಗ್ರಂಥಗಳಲ್ಲಿ 'ಇಜ್ಮಾಅ' ನ ಚರ್ಚೆ ನೋಡಬಹುದಾಗಿದೆ. ಓದುವವನು ಈ ಹಂತಕ್ಕೆ ತಲುಪುತ್ತಾನೆ ಅಂದರೆ ಯಾರು ಇಜ್ಮಾಅನ್ನು ನಕಲು ಮಾಡಿರುವನೋ ಆತನಿಗೆ ಈ ವಿಷಯದ ಬಗ್ಗೆ ಅಭಿಪ್ರಾಯಗಳ ಅರಿವೆ ಅಗುವುದಿಲ್ಲ, ಅರ್ಹನಲ್ಲದ ಅರಿವಿನ ಕೊರೆತೆಯಿಂದ ಅಭಿಪ್ರಾಯಗಳು ಇಲ್ಲದಿರುವುದು ಕಂಡಿತವಾಗಿಯು ಕಡ್ಡಾಯವಾಗಲಾರದು. ಹೆಚುಹೆಚ್ಚಾಗಿ ಅಂತಹಾ ಇಜ್ಮಾಅನ್ನು ಭಾವನೆಯೊಂದಿಗೆ ಹೊಂದಿಸಬಹುದು ಮತ್ತು ಭಾವನೆಗಳಿಗೆ ಇಜ್ಮಾಅ ಎಂದು ಕಾರಾರು ಕೊಡುವುದು ಸರಿಯಲ್ಲ ಕಾರಣ ಭಾವನೆ ಪ್ರಮಾಣವಲ್ಲ ಹೊರತು ಇಜ್ಮಾಅ ಪ್ರಮಾಣವಾಗಿದೆ, ಆದುದರಿಂದ ಒಬ್ಬನ ಭಾವನೆಗೆ ಅನುಗುಣವಾಗಿ ಎಲ್ಲಾ ಜನರನ್ನು ಒಂದು ಕಾರ್ಯಕ್ಕೆ ನಿರ್ಭಂದಿಸುವುದು ಹೇಗೆತಾನೆ ಸಾಧ್ಯ?. ಮೊತ್ತದಲ್ಲಿ ಯಾವ ಇಜ್ಮಾಅನ ಬುನಾದಿ ಭಾವನೆಗಳಿಂದ ಕೂಡಿದೆಯೋ ಅವುಗಳನ್ನು ತಳ್ಳುವುದರಿಂದ ಯಾವುದೆ ರೀತಿಯ ಸಂಕೋಚವನ್ನಿಟ್ಟುಕೊಳ್ಳಬಾರದು.[130]

ಈ ವಿಷಯಗಳ ಹೆಚ್ಚಿನ ವಿವರಗಳನ್ನು ಖಾಳೀ ಯವರ 'ಅತ್ತಕ್ರೀಬ್' 'ಹುಸೂಲುಲ್ ಮಾಮೂಲ್' ಶೌಖಾನೀ, 'ದಲೀಲುಲ್ ಅತ್ವಾಲಿಬ್ ಲಿನ್ನವಾಬ್' ಮತ್ತು 'ಅಹ್ಕಾಮುಲ್ ಅಹ್ಕಾಮ್' ಇಬ್ನ್ ಹಝ್ಮ್ ಹಾಗೂ ಇತರ ಗ್ರಂಥಗಳಲ್ಲಿ ನೋಡಬಹುದಾಗಿದೆ.

ಸಾರಾಂಶ

ಮೇಲೆ ವಿವರಿಸಲಾದ ಎಲ್ಲಾ ಪುರಾವೆಗಳಿಂದ ಸಾಬೀತಾವುದೇನೆಂದರೆ ಇಪ್ಪತ್ತು ರಕಅತ್ತಿನ ಬಗ್ಗೆ ಇರುವ ಇಜ್ಮಾಅ ಬಾತಿಲಾಗಿದೆ ಅಲ್ಲದೇ ಇಪ್ಪತ್ತು ರಕಅತ್ತಿನ ಗಣನೆಯಲ್ಲಿರುವ ಎಲ್ಲಾವಿವರಗಳೂ ಸಹಾ ಇದೇ ರೀತಿಯಾಗಿದೆ. ಉಮರ್ ರ.ರವರಿಂದ ಸ್ವಹೀಹ್ (ಉತ್ತಮ) ಶೃಂಖಲೆಯಿಂದ ಬಂದಿರು ಎಂಟು ತರಾವೀಹ್ ಮೂರು ವಿತ್ರ್ ನೊಂದಿಗೆ (ಅಥವಾ ಸ್ವಹೀಹ್ ಮುಸ್ಲಿಂ ಉಲ್ಲೇಖಿಸುರವ ಎಂಟು ರಕಅತ್ ತರಾವೀಹ್ ಮತ್ತು ಐದು ವಿತ್ರ್ ನೊಂದಿಗೆ) ಇರುವುದೇ ಸಾಬೀತಾಗಿದೆ ಅಲ್ಲದೇ ಇಪ್ಪತ್ತರ ಎಲ್ಲಾ ಪ್ರಮಾಣಗಳು ಳ್ವಯೀಫ್ ಮತ್ತು ಸ್ವೀಕಾರ ಅರ್ಹವಲ್ಲದ್ದಾಗಿದೆ ಮತ್ತು ಇಜ್ಮಾಅನ ಮಸಾಯಿಲ್(ವಿಷಯ)ಗಳನ್ನು ಶೇಖರಿಸಿರುವ ಸಲಫ್ ಆಲಿಮ್

---

[130] ಹಾಷಿಯತು ಶಿಫಾವುಲ್ ಅವಾಮ್- ಶೌಕಾನಿ, ನಾಸಿರುದ್ದೀನ್ ಅಲ್ಬಾನಿ ಸ್ವಲಾತುತರಾವೀಹ್ ಪುಟ: 80-81 ಉರ್ದು, 73-74 ಅರಬಿ,

ಇಮಾಮ್ ಇಬ್ನುಲ್ ಮುಂಝಿರಿ (ಮರಣ ಹಿಜರಿ318) ರವರು ತನ್ನ ಗ್ರಂಥ 'ಅಲ್ ಇಜ್ಜಮಾಅ' ಇದರ ಬಗ್ಗೆ ಯಾವುದೇ ರೀತಿಯ ಕುರುಹುಗಳನ್ನೂ ಕೊಟ್ಟಿಲ್ಲ.[131]

ಇಷ್ಟುಮಾತ್ರವಲ್ಲದೇ 'ಮೌಸೂಅ ಅಲ್ ಇಜ್ಮಾಅ ಫೀ ಅಲ್ ಫಿಕ್ಹುಲ್ ಇಸ್ಲಾಮೀ' ಯ ಸಯೀದ್ ಅಬೂ ಹಬೀಬ್ ಈ ಕಾಲದ ಕೊನೆಯಲ್ಲಿ ಹಿಜರಿ1394 ಇಸವಿ 1974 ರಲ್ಲಿ ರಚಿಸಿರುವ ಗ್ರಂಥ ಇದರಲ್ಲಿ ಮುಗ್ನೀ –2/139 ಮತ್ತು 'ಅಲ್ ಬಿದಾಯತುಲ್ ಮುಜ್ತಹಿದ್'–1/202 ರ ವತಿಯಿಂದ ನಮಾಜ್ ತರಾವೀಹ್ ಇಪ್ಪತ್ತು ರಕಅತ್ತಾಗಿರುತ್ತದೆ ಮತ್ತು ಉಮರ್ ರ. ರವರ ಕರ್ಮವು (ಅಮಲ್) ಹಾಗೂ ಅವರ ಕಾಲಘಟ್ಟದಲ್ಲಿಯ ಸ್ವಹಾಬ ರ. ರವರ ಇದೇ ಗಣನೆಯು ಇಜ್ಮಾಅ ಆಗಿರುತ್ತದೆ ಎಂದು ಬರೆದಿರುತ್ತಾರೆ[132]

ಈ ವಾದ ತಪ್ಪೆಂದು ನಿಶ್ಚಯಿಸಿರುವುದಕ್ಕೆ ನಾವು ಈ ಮುಂಚೆ ತಿಳಿಸಿದ ಸವಿಸ್ತಾರವಾದ ವಿಷಯಗಳ ಬೆಳಕಿನ ಅಡಿಯಲ್ಲಿ ಈ ವಾದದ ಸಮಯದಲ್ಲಿ ಅವರು ಬಹಳ ಶೀರ್ಘಗತಿಯಲ್ಲೂ ವಿಶ್ಲೇಷಣೆ ನಡಸದೇ ಕೈಗೊಂಡ ತೀರ್ಮಾನವಾಗಿದೆ ಎಂದು ಬಹಳ ಸುಲಭಾಗಿ ನಿರ್ಧರಿಸಬಹುದು. ಮತ್ತು ಸ್ವಹೀಹುಲ್ ಇಸ್ನಾದ್ ಅಲ್ ಆಸಾರ್ ನಿಂದ ಉಮರ್ ರ. ರವರ ಕಾಲ ಘಟ್ಟದಲ್ಲಿ ಪ್ರತ್ಯೇಕವಾಗಿ ಉಮರ್ ರ.ರವರ ಆಜ್ಞೆ ಹನ್ನೊಂದು ರಕಅತ್ತಾಗಿತ್ತೆಂದು ಪುರಾವೆ ಗಳಿವೆ ಮತ್ತು ಮರ್ಫೂಅ ಹದೀಸ್ ಇದಕ್ಕೆ ಇನ್ನು ಬಲಪಡಿಸುತ್ತದೆ ಅದರಲ್ಲಿ ಹನ್ನೊಂದು ರಕಅತ್ತಿನ ಪುರಾವೆಯೇ ಸಿಗುತ್ತವೆ ಹೀಗಿರುವಾಗ ಇಪ್ಪತ್ತು ರಕಅತ್ತಿನ ಇಜ್ಮಾಅ ಸ್ವೀಕಾರ ಅರ್ಹವಲ್ಲವಲ್ಲವೇ?

ಮೌಸೂಅ ದ ಲೇಖಕರು ಇಜ್ಮಾಅನ್ನು ನಕಲು ಮಾಡಿದರೂ ಅದಕ್ಕೆ ಅವರು ಬೇರೆ ವಿಷಯಗಳನ್ನು ನಕಲು ಮಾಡಿದಲ್ಲಿ ನಡೆದ ರೀತಿಯಲ್ಲಿ ನಡೆಯಬೇಕಾಗಿತ್ತು ಅಂದರೆ ಟಿಪ್ಪಣಿ ಕೊಡಬೇಕಿತ್ತು ಅವರು ಇದೇ ಗ್ರಂಥದ ಪುಟ:669 ರಲ್ಲಿ ರುಕೂಅ ನಲ್ಲಿ ಸೇರಿದವರಿಗೆ ರಕಅತ್ ಸಿಗಲಾರದು ಎಂದು ಬರದಲ್ಲಿ ಎಷ್ಟು ದೊಡ್ಡ ಉಲಮಾಅ ರಾದರೂ (ಅದರಲ್ಲಿ ಅವರು ಕೆಲವರ ಹೆಸರು ಬರೆದಿರುವರು ಕೆಲವರ ಹೆಸರುಗಳ ಸೂಚನೆ ನೀಡಿರುವರು) ರುಕೂಅ ನಲ್ಲಿ ಸೇರಿದವರಿಗೆ ರಕಅತ್ ಸಿಗಲಾರದು ಎಂದಿರುವಾಗ ರುಕೂಅ ನಲ್ಲಿ ಸೇರಿದವನಿಗೆ ರಕಅತ್ ಸಿಗುತ್ತದೆ ಎಂದು ಟಿಪ್ಪಣಿ ಬರೆದು ಇಜ್ಮಾಅ ಸ್ಥಿರಗೊಳಿಸುವವರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಬೇಕಾಗಿದೆ!. ಇದೇ ರೀತಿ

[131] ನೋಡಿರಿ 'ಅಲ್ ಇಜ್ಮಾಅ' ಡಾ॥ ಸಫೀರ್ ಅಹ್ಮದ್.

[132] ಮೌಸೂಅ ಅಲ್ ಇಜ್ಮಾಅ ಬಾಗ:1 ಪುಟ:655

ತಳ್ಳಿಹಾಕುವ ಜವಾಬ್ದಾರಿತನ ಮತು ವಿಧ್ಯೆಯ ಅಮಾನತು ತಲುಪುಸುವುದಾಗಿರುತ್ತದೇ ಹಾಗೆಯೇ ಇಪ್ಪತ್ತು ರಕಅತ್ತಿನ ಬಗ್ಗೆ ಇರುವ ಇಜ್ಮಾಅ ನಿಜಸ್ಥಿತಿ ಬಯಲಾಗುತ್ತದೆ. ಮತ್ತು ಪುಟ: 656,658,660,665 ಗಳಲ್ಲಿ ಮಾತ್ರವಲ್ಲ ಅದರ 1250 ಪುಟಗಳಲ್ಲಿಯ ಮೊದಲಿಂದ ಹಿಡಿದು ಕೊನೆಯವರೆಗೆ ಇಂತಹ ಟಿಪ್ಪಣಿಗಳನ್ನು ನೋಡಲು ಸಾದ್ಯವಾಗುವುದು. ಆದರೆ ಯಾರಾದರು ಇಂತಹಾ ಸ್ವತಃ ಹೃದಯಂತರಾಳದಲ್ಲಿರು ತರಾವೀಹ್ ನ ವಿಷಯಗಳ ಬಗ್ಗೆ ಇರುವ ಟಿಪ್ಪಣಿ ಬರೆಯುವುದರಿಂದ ದೂರವಿದ್ದಿರಬಹುದು.

ರಹಸ್ಯಗಳ ಹಿಂದಿರುವ ಉದ್ದೇಶಗಳನ್ನು ತಿಳಿಯುವವನು ಅಲ್ಲಾಹನಾಗಿದ್ದಾನೆ

ಇಂತಹಾ ಇಜ್ಮಾಅಗಳನ್ನು ಹೊರಡಿಸುವವರ ಬಗ್ಗೆ ಇಮಾಮ್ ಅಹ್ಮದ್ ಇಬ್ನ್ ಹಂಬಲ್ ರಹಿಮಹುಲ್ಲಾಹ್ ಅಹ್ಲುಸುನ್ನ ರವರು ಹೇಳುತ್ತಾರೆ:

من ادعى الإجماع فقد كذب،وما يدريه الناس قد اختلفوا،[133]

'ಯಾರಾದರೂ ಯಾವುದಾದರೂ ವಿಚಾರ(ಮಸ್‌ಅಲ)ಗಳಲ್ಲಿ ಇಜ್ಮಾಅನ ವಾದ ಮುಂದಿಟ್ಟರೆ, ಅವನು ಸುಳ್ಳು ಹಣೆದನು. ಅವನಿಗೇನು ಗೊತ್ತು ಅಹ್ಲುಲ್ ಇಲ್ಮಿನ ವಕ್ತಾರರು ಕೆಲವೊಮ್ಮೆ ಇದರ ಬಗ್ಗೆ ಅಭಿಪ್ರಾಯ ವೆತ್ಯಾಸ ಹೊಂದಿಲ್ಲವೆಂದು'

ಅಲ್ಲದೇ ಇಮಾಮ್ ಶಾಫಿಯೀ ರ. ರವರದ್ದು ಸಹ ಇದೇ ರೀತಿಯ ಅಭಿಪ್ರಾಯ ವಾಗಿದೆ

ತರಾವೀಹ್ ಮತ್ತು ಸೌದೀ ಉಲಮಾಅ ಮತ್ತು ಮಷಾಯಿಖ್.

ಕೆಲವರು ಸೌದಿ ಪಂಡಿತರ ಮಾತು ಮತ್ತು ಕರ್ಮಗಳನ್ನು ನೋಡಿ ಅದನ್ನು ಬುನಾದಿಯಾಗಿಸಿ ಸೌದಿ ಪಂಡಿತರೂ ಇಪ್ಪತ್ತು ರಕಅತ್ ನಮಾಝ್ ನಿರ್ವಹಿಸುರೂ ಅವುಗಳನ್ನು ಒಪ್ಪಿಕೊಂಡವರೂ ಎಂದು ಹೇಳುವುದನ್ನು ನೋಡಬಹುದು ಯತಾರ್ಥದಲ್ಲಿ 'ಸೌದಿ ಪಂಡಿತರ' ಮೇಲೆ ಹೇಳುವ ಈ ಮಾತು ಸತ್ಯಕ್ಕೆ ದೂರವಾಗಿದ್ದಾಗಿದೆ ಯಾಕೆಂದರೆ ಸೌದಿ ಅರಬೀಯಾದಲ್ಲಿ ಸಹಸ್ರಾರು

---

[133] ನೋಡಿರಿ ಮುನ್ನುಡಿ 'ಅಲ್ ಇಜ್ಮಾಅ' ಪುಟ:29 ಡಾ॥ ಸಫೀರ್ ಅಹ್ಮದ್.

ಉಲಮಾಅರಿದ್ದಾರೆ ಅವರಲ್ಲಿ ಕೆಲವು ಉಲಮಾಅರು ಮಾತ್ರ ಅವರು ಹೇಳುವ ಅಭಿಪ್ರಾಯಕಾರರೆಂದು ತೋರಿಸಲು ಸಾಧ್ಯ ಅದರಲ್ಲಿ ' ಶೈಖ್ ಅತೀಯಃ ಮಹಮ್ಮದ್ ಸಾಲಿಮ್, ಶೈಖ್ ಅಬ್ದುಲ್ ಅಝೀಝ್ ಅಸ್ಸಲ್ಮಾನ್ ರಹಿಮಹುಮುಲ್ಲಾಹ್ ಮತ್ತು ಇತರ ಕೆಲವರು'. ಹೀಗಿರುವಾಗ ಬರೆ ಬೆರೆಳೆಣಿಕೆಯ ಉಲಮಾಅರ ಹೆಸರುಗಳನ್ನು ಹೇಳಿ ಇವರು ಇಪ್ಪತ್ತು ರಕಅತ್ ತರಾವೀಹ್ ಯಬಗ್ಗೆ ಹೇಳುವವರೂ ನಿರ್ವಹಿಸುವವರೂ ಅಂದರೆ ಅದು ಸರಾಸರಿ ತಪ್ಪಾಗಿದೆ. ತಪ್ಪೇನೆಂದರೆ ಸೌದಿ ಅರಬೀಯದಲ್ಲಿರುವ ಪ್ರತೀಯೊಬ್ಬರೂ ತಿಳಿದಿರುವಂತಹಾ ಸಂಗತಿ ಕೆಲವರ ಹೊರತು ರಾಷ್ಟ್ರದ ಸಂಪೂರ್ಣ ಸ್ಥಳಗಲ್ಲಿ ಎಲ್ಲಾ ಮಸೀದಿಗಳಲ್ಲಿಯೂ ತರಾವೀಹ್ ನಿರ್ವಹಿಸುವ ಎಲ್ಲಾ ಇಮಾಮರುಗಳು ಹನ್ನೊಂದು ರಕಅತ್ ತರಾವೀಹ್ ನಿರ್ವಹಿಸುವವರಾಗಿದ್ದಾರೆ ಮತ್ತು ಇದುವೇ ಸರ್ವೇಸಾಮಾನ್ಯವಾಗಿ ಕಾಣಲು ಸಾಧ್ಯವಾಗುವುದು ಅಲ್ಲದೇ ಸೌದಿ ಉಲಮಾಅರು ಎಂಟು ರಕಅತ್ ತರಾವೀಹ್ ಮಾತ್ರವೇ ಸುನ್ನತ್ತಾಗಿರುವುದೂ ಶ್ರೇಷ್ಟವೂ ಆಗಿರುವುದೆನ್ನುವುದಕ್ಕೆ ಪುರಾವೆಯೂ ಆಗಿರುತ್ತದೆ. ಇನ್ನು ಎಂಟಕ್ಕಿಂತ ಹೆಚ್ಚು ನಫಿಲಿನ ರೀತಿಯಲ್ಲಿ ನಿರ್ವಹಿಸುವುದು ತಪ್ಪೆಂದು ಹೇಳಲಾಗದು ಇದರಿಂದ ಹೆಚ್ಚು ರಕಅತ್ ನಿರ್ವಹಿಸುವವರನ್ನು ವಿರೊಧಿಸ ಬಾರದು ಹಾಗೆಯೇ ಎಂಟಕ್ಕಿಂತ ಹೇಚ್ಚು ನಿರ್ವಹಿಸುವವರನ್ನು ಸುನ್ನತ್ತಿನ ಆಧಾರದಲ್ಲಿ ಕರ್ಮನಿರ್ವಹಿಸುವವರೆಂದು ಹೇಳಲಾಗದು. ಬಾಕಿ ಇರುವ ರಕಅತ್ತನ್ನು ನಫಿಲಾಗಿ ಪರಿಗಣಿಸಬೇಕಾಗಿದೆ.

ಇಮಾಮ್ ಇಬ್ನ್ ಬಾಝ್ ರಹಿಮಹುಲ್ಲಾಹ್

ಸೌದಿ ಉಲಮಾಅರಲ್ಲಿ ನಕ್ಷತ್ರದಂತೆ ಮಿನುಗುವ ಇಮಾಮ್ ಅಲ್ಲಾಮ ಅಬ್ದುಲ್ ಅಝೀಝ್ ಬಿನ್ ಅಬ್ದುಲ್ಲಾ ಬಿನ್ ಬಾಝ್. ಇವರನ್ನು ಪರಿಚಯಿಸುವ ಅಗತ್ಯವಿಲ್ಲ ಇವರ ನಿಗಾದಲ್ಲಿ ನಡೆಯುತದ್ದ ಲಜ್ನತುದ್ದಾಯಿಮ ಫತ್ವಾ ಕಮೀಟಿ ಯ ಫತಾವಗಳಲ್ಲಿ ಇವರ ಫತ್ವಾಗಳು ಬಗಳಷ್ಟಿವೆ ಅವುಗಳಲ್ಲಿ ಈ ವಿಷಯದ ಬಗ್ಗೆ ಬಂದಿರುವುದರಲ್ಲಿ ಈ ರೀತಿ ಬರೆದಿದೆ:

والأفضل ما كان النبي صلى الله عليه وسلم يفعله غالبًا وهو أن يقوم بثمان ركعات يسلم من كل ركعتين ويوتر بثلاث، مع الخشوع والطمأنينة وترتيل القراءة، لما ثبت في الصحيحين عن عائشة رضي الله عنها[134]

"ಶ್ರೇಷ್ಟವಾಗಿರುವು ಪ್ರವಾದಿ ಸಲ್ಲಲ್ಲಾಹು ಅಲ್ಯಹಿವಸಲ್ಲಮರ ಹೆಚ್ಚಿನ ಸಮಯಗಳಲ್ಲಿ ಬಹಳವಾಗಿ ಮಾಡಿರುವಂತಹಾ ಅಮಲ್ ಪ್ರತೀಯೊಬ್ಬರೂ ನಿರ್ವಹಿಸಬೇಕಾಗಿರುವುದು ಎಂಟುರಕಅತ್ ಆಗಿರುತ್ತದೆ. ಎಲ್ಲಾ ಎರಡು ರಕಅತ್ತಿನ ನಂತರ ಸಲಾಮ್ ಹೇಳಬೇಕು ನಂತರ ಮೂರು ರಕಅತ್ ವಿತ್ರ್ ನಿರ್ವಹಿಸಬೇಕು' ಸಂಪೂರ್ಣ ನಮಾಜಿನಲ್ಲಿ ಏಕಾಗ್ರತೆ, ಮನಸ್ಸಿನ ತಲ್ಲೀನತೆ, ಸಮಾಧಾನ, ಮತ್ತು ಕ್ರಮವಾಗಿ ಖುರ್ಆನ್ ಪಠಿಸುವುದಾಗಿದೆ ಉಮ್ಮುಲ್ ಮೂಮಿನೀನ್ ಮಾತೆ ಆಯಿಷಾ ರ. ರವರಿಂದ ನಿವೇದನೆ: ಸ್ವಹೀಹ್ ಬುಖಾರಿ ಮತ್ತು ಸ್ವಹೀಹುಲ್ ಮುಸ್ಲಿಂ ನಲ್ಲಿಯ ಹನ್ನೊಂದು ರಕಅತ್ತನ್ನು ಸ್ಥಿರಪಡಿಸುವ ಹದೀಸ್.........ಸಾಬೀತು ಪಡಿಸುತ್ತದೆ". ಅವರು ಮುಂದುವರಿಯುತ್ತಾ ಸ್ವಹೀಹುಲ್ ಬುಖಾರಿ ಮತ್ತು ಸ್ವಹೀಹುಲ್ ಮುಸ್ಲಿಂನ ಹದೀಸನ್ನೂ ವಿವರಿಸಿರುವರು ನಾವು ಪ್ರಾರಂಭದಲ್ಲಿ ಅವುಗಳನ್ನು ಹದೀಸಿನ ರೂಪದಲ್ಲಿ ವಿವರಿಸಿರುವೆವು.

ಅಲ್ಲಾಮ ಇಬ್ನು ಉಸ್ಯಮೀನ್ ರಹಿಮಹುಲ್ಲಾಹ್

ಸೌದೀ ಉಲಮಾಅರ ಪಟ್ಟಯಲ್ಲಿ ಕರ್ಮಶಾಸ್ತ್ರ ಪಂಡಿತರ ಸಾಲಿನಲ್ಲಿ ಅಲ್ಲಾಮ ಮುಹಮ್ಮದ್ ಸ್ವಾಲಿಹ್ ಇಬ್ನ್ ಉಸೈಮೀನ್.ರಹಿಮಹುಲ್ಲಾಹ್ ಸೇರಿರುವ ಒಬ್ಬ ಪ್ರಖ್ಯಾತ ಪಂಡಿತರಾಗಿದ್ದಾರೆ ಅವರು ತನ್ನ ಗ್ರಂಥವಾದ **'ಮಜಾಲಿಸು ಶಹರು ರಮಝಾನ್'** ನಲ್ಲಿ ಬರೆಯುತ್ತಾರೆ:

"ಸಲಫುಸ್ವಾಲಿಹೀನ್ ಉಮ್ಮತ್ ಮುಹಮ್ಮದ್ ರಲ್ಲಿ ತರಾವೀಹ್ ನಮಾಝಿನ್ ಗಣನೆಯಲ್ಲಿ ಹಲವು ಅಭಿಪ್ರಾಯ ವೆತ್ಯಾಸಗಳು ಹೊಂದಿರುವರು ಕೆಲವರು 41 ರಕಅತ್, ಕೆಲವರು 39 ರಕಅತ್, ಕೆಲವರು 29 ರಕಅತ್ ಕೆಲವರು 23 ರಕಅತ್, ಕೆಲವರು 19

[134] ಮಜ್ಮೂಅ ಫತಾವಃ ಲಜ್ನತುದ್ದಾಯಿಮ

ರಕಅತ್, ಕೆಲವರು 13 ರಕಅತ್, ಕೆಲವರು11 ರಕಅತ್, ಇನ್ನು ಕೆಲವರು ಬೇರೆಯೇ ಹೇಳಿರುವರು. ಆದರೆ ಅವರು ಸ್ವತಃ ಅಭಿಪ್ರಾಯವನ್ನು ಬರೆಯುತ್ತಾ ಹೀಗೆ ಹೇಳಿದರು:

وأرجح هذه الأقوال أنها إحدى عشرة أو ثلاث عشرة لما فى الصحيحين عن عائشة رضى الله عنها.....) [135]

"ಈ ಎಲ್ಲಾ ಮಾತುಗಳಲ್ಲಿ ಸ್ವೀಕಾರರ್ಹವಾದ ಮಾತು ಹನ್ನೊಂದು ಅಥವಾ ಹದಿಮೂರು ಆಗಿರುತ್ತದೆ ಅವುಗಳನ್ನು ಸ್ವಹೀಹುಲ್ ಬುಖಾರಿ ಮತ್ತು ಮುಸ್ಲಿಂ ನಲ್ಲಿ ಆಯಿಷಾ ರ.ರವರಿಂದ ಉಲ್ಲೇಖವಿದೆ."

ಶೈಖ್ ಇಬ್ನ್ ಉಸ್ಯಮೀನ್ ನಾವು ಪ್ರಾರಂಭದಲ್ಲಿ ವಿವರಿಸಿರುವ ಸ್ವಹೀಹುಲ್ ಬುಖಾರಿಯ ಹದೀಸ್ ಮತ್ತು ಇಬ್ನ್ ಅಬ್ಬಾಸ ರ.ರವರು ವರದಿ ಮಾಡಿದ ಹದೀಸನ್ನು ಸಹ ವಿವರಿಸಿರುವರು ಅದರಲ್ಲಿ ಹದಿಮೂರು ರಕಅತ್ ನ ಬಗ್ಗೆ ತಿಳಿಸಿರುವರು. ಹಾಗೂ ಉಮರ್ ರ.ರವರ ಉಬಯೀ ಇಬ್ನ್ ಕಅಬ ಮತ್ತು ತಮೀಮದ್ದಾರಿ ರ. ರವರಿಗೆ ಜನರಿಗೆ ಇಪ್ಪತ್ತು ರಕಅತ್ ನಿರ್ವಹಿಸಿಕೊಡಲು (ನಾವು ಈ ವಿಷಯದ ಆರಂಭದಲ್ಲಿ ನಾಲ್ಕನೇ ಅಸರಿನ ಬಗ್ಗೆ ವಿವರಿಸಿದಲ್ಲಿ ನೋಡಬಹುದು)ಆಜ್ಞಾಪಿಸಿರುವ ಅಸರನ್ನು ಇವೆಲ್ಲವನ್ನೂ ತನ್ನ ಗ್ರಂಥವಾದ 'ಫುಸೂಲು ಫಿ ಸ್ಸಿಯಾಮ್ ವತ್ತರಾವೀಹ್ ವಝ್ಝಕಾತ್' ನಲ್ಲಿ ವಿವರಿಸಿರುವುದಾಗಿ ನೋಡಬಹುದು.

والسنة أَنْ يُقْتصَرَ عَلي اِحدي عَشر ركعة[136]

"ಹನ್ನೊಂದು ರಕಅತ್ತಾಗಿ ನಿರ್ವಹಿಸುದೇ ಸುನ್ನತ್ ಆಗಿರುತ್ತದೆ."

ನಂತರ ಅದಕ್ಕನುಸಾರವಾದ ಹದೀಸನ್ನು ಹೇಳಿ ಮುಂದುವರಿಯುತ್ತಾ ಹನ್ನೊಂದು ರಕಅತ್ತಿಗಿಂತ ಹೆಚ್ಚು ನಿರ್ವಹಿಸುವುದರೂ ಪರವಾಗಿಲ್ಲ ಎಂದು ಹೇಳಿದ ನಂತರ ಬರೆಯುತ್ತಾರೆ:

---

[135] ಮಜಾಲೀಸು ಶಹರು ರಮಝಾನ್ ಪುಟ:19

[136] ಮಜಾಲೀಸು ಶಹರು ರಮಝಾನ್(ಪುಸೂಲು ಫಿ ಸ್ಸಿಯಾಮಿ ವಝ್ಝಕಾತ್) ಪುಟ:14

لكن المحافظة على العدد الذي جاءت به السنة مع التأني والتطويل الذي لا يشق على الناس أفضل وأكمل[137]

“ಆದರೆ ಹದೀಸ್ ನಲ್ಲಿ ಬಂದಂತಹ ಸುನ್ನತ್ತಿನ (ಹನ್ನೊಂದು ರಕಅತ್) ಗಣನೆಯನ್ನೇ ನಿರ್ವಹಿಸಿ ಕೊಂಡು ಬರುದೇ ಅತೀ ಶ್ರೇಷ್ಟವೂ ಪರಿಪೂರ್ಣವೂ ಆಗಿದೆ ಅಲ್ಲದೇ ಸಮಾದಾನ, ಶಾಂತಿಯಿಂದಲೂ, ನೀಳವಾದ ಖುರ್ಆನ್ ಪಾರಯಣದೊಂದಿಗೆ ಮಾಡ ಬೇಕಾಗಿದೆ.”

ಒಂದು ಸಂಶಯ ನಿವಾರಣೆ

ಕೆಲವು ಅಹಾದೀಸುಗಳಲ್ಲಿ ಹದಿಮೂರು ರಕಅತ್ತಿನ ವರದಿ ಬಂದಿದೆ ಆ ಹದಿಮೂರು ರಕಅತ್ತಿನ ಉದ್ದೇಶ ಹನ್ನೊಂದು ರಕಅತ್ ಆದ ಮೇಲೆ ಎರಡೆರಡು ರಕಅತ್ತಾಗಿದೆ ಅದನ್ನು ಪ್ರವಾದಿ ಸ. ನಮಾಝ್ ತಹಜ್ಜುದಿನೊಂದಿಗೆ ವಿತರಿನ ನಂತರ ಎರಡು ರಕಅತ್ತಾಗಿದೆ ಅವು ವಿತರಿನ ನಂತರವೂ ಲಘುವಾದ ಎರಡು ರಕಅತ್ ನಮಾಝ್ ನಿರ್ವಹಿಸಬಹುದೆನ್ನುವುದನ್ನು ವಿವರಿಸಲಾಗಿದೆ. ಆಥವಾ ಫಜರ್ ನಮಾಜಿನ ಮೊದಲಿರುವ ಎರಡು ರಕಅತ್ತಾಗಿದೆ ಅದನ್ನು ಇಬ್ನ್ ಅಬ್ಬಾಸ ರ.ರವರು ಪ್ರವಾದಿ ಸ.ರವರ ಖಿಯಾಮುಲ್ಲೈಲ್ ಅಂದು ತಿಳಿದದ್ದಾಗಿರಲೂ ಬಹುದು. ಇಮಾಮ್ ನವವೀ ಅಲ್ಲಾಮ ಐನೀ ರ. ಮತ್ತು ಮುಬಾರಕ್ ಪುರಿ ಹಾಗೆಯೇ ಬೇರೆ ಬಹಳಷ್ಟು ಟಿಪ್ಪಣಿಕಾರರು ಇದನ್ನು ವಿವರಿಸಿದ ಹಾಗೆ.[138]

ಪ್ರವಾದಿ ಸ.ರವರ ರಾತ್ರಿಯ ನಮಾಜುಗಳನ್ನು ವಿವರಿಸುವಲ್ಲಿ ಮಾತೆ ಆಯಿಷಾ ರ.ರವರು ಉಲ್ಲೇಖಿಸುವುದೇನೆಂದರೆ:

---

137 ಮಜಾಲೀಸು ಶಹರು ರಮಝಾನ್(ಪುಸೂಲು ಫಿ ಸ್ಸಿಯಾಮಿ ವಝ್ಝುಕಾತ್) ಪುಟ:16–17

138 ಶರಹು ನವವೀ–3/6/16–21, ಉಂದತುಲ್ ಖಾರಿ–7/178,204,205,–11/126–127, ತುಹ್ಫತುಲ್ ಅಹ್ವಝ್–3/522–532

عَنْ عَبْدِ اللَّهِ بْنِ أَبِي قَيْسٍ، قَالَ: قُلْتُ لِعَائِشَةَ رَضِيَ اللَّهُ عَنْهَا: بِكَمْ كَانَ رَسُولُ اللَّهِ صَلَّى اللهُ عَلَيْهِ وَسَلَّمَ يُوتِرُ؟ قَالَتْ: «كَانَ يُوتِرُ بِأَرْبَعٍ وَثَلَاثٍ، وَسِتٍّ وَثَلَاثٍ، وَثَمَانٍ وَثَلَاثٍ، وَعَشْرٍ وَثَلَاثٍ، .[139]

"ಅಬ್ದುಲ್ಲಾ ಇಬ್ನ್ ಅಬೀ ಕ್ವಸ್ ರಿಂದ: ಅವರು ಹೇಳುತ್ತಾರೆ ನಾನು ಮಾತೆ ಆಯಿಷಾ ರ. ರವರೊಂದಿಗೆ ಕೇಳಿದೆ ಪ್ರವಾದಿ ಸ.ರವರ ಎಷ್ಟು ರಕಅತ್ ವಿತ್ರ್ ನಿರ್ವಹಿಸುತಿದ್ದರು? ಆಯಿಷಾ ರ. ರವರು ಹೇಳಿದರು ಕೆಲವೊಮ್ಮೆ ನಾಲ್ಕು ಮತ್ತು ಮೂರು ವಿತ್ರ್, ಮತ್ತು ಆರು ಮತ್ತು ಮೂರು ವಿತ್ರ್, ಮತ್ತು ಎಂಟು ಮತ್ತು ಮೂರು ವಿತ್ರ್, ಮತ್ತು ಹತ್ತು ಮತ್ತು ಮೂರು ವಿತ್ರ್, ಅಲ್ಲದೇ ಒಮ್ಮೆಯೂ ಏಳಕ್ಕಿಂತ ಕಡಿಮೆ ಹದಿಮೂರಕ್ಕಿಂತ ಜಾಸ್ತಿ ನಿರ್ವಹಿಸಲಿಲ್ಲ"

ಈ ಹದೀಸಿನಿಂದ ಏಳರಿಂದ ಹದಿಮೂರು ರಕಅತ್ ನ ವರೆಗೆ ನಿರ್ವಹಿಸುವುದು ಅನುವದನಿಯವಾಗದೆ ಎಂದು ತಿಳಿಯ ಬಹುದು.

عَنْ عَائِشَةَ، قَالَتْ: «كَانَ رَسُولُ اللهِ صَلَّى اللهُ عَلَيْهِ وَسَلَّمَ يُصَلِّي مِنَ اللَّيْلِ ثَلَاثَ عَشْرَةَ رَكْعَةً، يُوتِرُ مِنْ ذَلِكَ بِخَمْسٍ، لَا يَجْلِسُ فِي شَيْءٍ إِلَّا فِي آخِرِهَا».[140]

ಆಯಿಷಾ ರ.ರವರಿಂದ ಅವರು ಹೇಳಿದರು: "ಪ್ರವಾದಿ ಸ.ರವರು ರಾತ್ರಿ ಯಲ್ಲಿ ಹದಿಮೂರು ರಕಅತ್ ನಮಾಝ್ ನಿರ್ವಹಿಸುತ್ತಿದ್ದರು. ಅದರಲ್ಲಿ ಐದು ವಿತ್ರ್ ಆಗಿತ್ತು (ಐದು ವಿತರಿನ)ಕೊನೆಯ ರಕಅತ್ತಿನಲಲ್ಲದೇ(ತಷಹ್ಹುದಿಗೆ) ಕುಳಿತುಕೊಳ್ಳುತ್ತಿರಲಿಲ್ಲ."

---

[139] ಸುನನ್ ಅಬೀ ದಾವೂದ ಸ್ವಹೀಹ್

[140] ಸ್ವಹೀಹುಲ್ ಮುಸ್ಲಿಂ–2/166(737)(13), ಅಹ್ಮದ್ –6/50, ದಾರಿಮಿ–1581, ಅಬೂದಾವೂದ್–1338, ತುರ್ಮುಝೀ–459, ನಸಾಯೀ ಕುಬ್ರಾ–1424, ಇಬ್ನ್ ಖುಝೈಮಾ–1077, ಇಬ್ನ್ ಹಿಬ್ಬಾನ್ 2437, ಎರಡು ರಕಅತ್ ಪಜರಿನೊಂದಿಗೆ ಸೇರಿಸಿಯಲ್ಲದೇ ಬುಖಾರಿಯಲ್ಲಿ ಈ ಹದೀಸ್ ವರದಿ ಯಾಗಿಲ್ಲ. ನೋಡಿರಿ ಅಲ್ ಇಲ್ಮಾಮ್–423 , ಅಲ್ ಮುಹರ್ರಿರ್–341

ಈ ಹದೀಸನ್ನು ವಿವರಿಸುತ್ತಾ ಇಮಾಮ್ ನವವಿ ರಹಿಮಹುಲ್ಲಾಹ್ 'ಅಲ್ ಮಿನ್ಹಾಜ್ ಶರಹು ಸ್ವಹೀಹುಲ್ ಮುಸ್ಲಿಂ ಇಬ್ನುಲ್ ಹಜ್ಜಾಜ್' ನಲ್ಲಿ ಹೇಳುತ್ತಾರೆ:

قَوْلُهَا يُصَلِّي مَنَ اللَّيْلِ ثَلَاثَ عَشْرَةَ رَكْعَةً يُوتِرُ مِنْ ذَلِكَ بِخَمْسٍ لَا يَجْلِسُ فِي شَيْءٍ إِلَّا فِي آخِرِهَا وَفِي رِوَايَةٍ أُخْرَى يُسَلِّمُ مِنْ كُلِّ رَكْعَتَيْنِ وَفِي رِوَايَةٍ يُصَلِّي أَرْبَعًا ثُمَّ أَرْبَعًا ثُمَّ ثَلَاثًا وَفِي رِوَايَةٍ ثَمَانِ رَكَعَاتٍ ثُمَّ يُوتِرُ بِرَكْعَةٍ وَفِي رِوَايَةٍ عَشْرَ رَكَعَاتٍ وَيُوتِرُ بسجدة وفي حديث بن عَبَّاسٍ فَصَلَّى رَكْعَتَيْنِ إِلَى آخِرِهِ وَفِي حَدِيثِ بن عُمَرَ صَلَاةُ اللَّيْلِ مَثْنَى مَثْنَى هَذَا كُلُّهُ دَلِيلٌ عَلَى أَنَّ الْوِتْرَ لَيْسَ مُخْتَصًّا بِرَكْعَةٍ وَلَا بِإِحْدَى عَشْرَةَ وَلَا بِثَلَاث عَشْرَةَ بَلْ يَجُوزُ ذَلِكَ وَمَا بَيْنَهُ وَأَنَّهُ يَجُوزُ جَمْعُ رَكَعَاتٍ بِتَسْلِيمَةٍ وَاحِدَةٍ وَهَذَا لِبَيَانِ الْجَوَازِ وَإِلَّا فَالْأَفْضَلُ التَّسْلِيمُ مِنْ كُلِّ رَكْعَتَيْنِ وَهُوَ الْمَشْهُورُ مِنْ فِعْلِ رَسُولِ اللَّهِ صَلَّى اللَّهُ عَلَيْهِ وَسَلَّمَ وَأَمْرِهِ بِصَلَاةِ اللَّيْلِ مَثْنَى مَثْنَى [141]

"ಹದಿಮೂರು ಹೇಳಿರುವಂತಹ ಈ ಹದೀಸ್ ಅಲ್ಲದೇ ಬೇರೊಂದು ವರದಿಯ ಪ್ರಕಾರ ಎಲ್ಲಾ ಎರಡು ರಕಅತ್ತಿನಲ್ಲಿ ಸಲಾಮ್ ಹೇಳುತಿದ್ದರು. ಇನ್ನೊಂದು ವರದಿಯ ಪ್ರಕಾರ ನಾಲ್ಕು ರಕಅತ್ ನಿರ್ವಹಿಸುತಿದ್ದರು ಮತು ನಾಲ್ಕು ಮತ್ತು ಮೂರು ರಕಅತ್, ಮತ್ತೊಂದು ವರದಿಯಂತೆ ಎಂಟು ರಕಅತೆಂದು ನಂತರ ಒಂದು ರಕಅತನ್ನು ವಿತ್ರ್ ಮಾಡುತಿದ್ದರು ಮತ್ತೆ ಬಂದ ವರದಿಯಂತೆ ಹತ್ತು ರಕಅತ್ ಒಂದು ಸುಜೂದಿನಿಂದ ವಿತ್ರ್ ಮಾಡುತಿದ್ದರೆಂದು, ಇಬ್ನ್ ಅಬ್ಬಾಸ್ ರವರ ಹದೀಸಿನಲ್ಲಿ ಕೊನೆಯಲ್ಲಿ ಎರಡು ರಕಅತ್ ನಿರ್ವಹಿಸಿದರೆಂದು, ಇಬ್ನ್ ಉಮರ್ ರ. ರವರ ಹದೀಸಿನಿಂದ ರಾತ್ರಿ ನಮಾಝು ಎರಡೆರಡು ಎಂದು, ಇವುಗಳೆಲ್ಲವೂ ವಿತ್ರ್ ಒಂದು ರಕಅತ್ತೆಂದೋ

[141] ಶರಹು ನವವೀ –6/20(737)

ಹನ್ನೊಂದು ರಕಅತೆಂದೊ,ಅಥವಾ ಹದಿಮೂರು ರಕಅತೆಂದೋ ಪ್ರತ್ಯೇಖವಾಗಿಲ್ಲ ಹೊರತು ಇವುಗಳೆಡೆಯಲ್ಲಿ ಎಷ್ಟೂ ಮಾಡಬಹುದು ಎಲ್ಲಾ ರಕಅತ್ ಗಳನ್ನು ಸೇರಿಸಿ ಒಂದು ಸಲಾಮಿನಿಂದ ಮಾಡಲು ಅನುವದನೀಯವಾಗಿದೆ. ಇನ್ನು ಹಾಗಲ್ಲದಿದ್ದರೆ ಎಲ್ಲಾ ಎರಡು ರಕಅತಿನಲ್ಲಿ ಸಲಾಂ ಹೇಳುವುದು ಉತ್ತಮವಾಗಿದೆ ಅಲ್ಲದೆ ಪ್ರವಾದಿ ಸ.ರವರ ಚೆರ್ಯೆ ಮತು ಕಲ್ಪನೆ ಕೂಡ ರಾತ್ರಿಯ ನಮಾಝು ಎರಡೆರಡೆಂದು."

ಇಲ್ಲೊಂದು ಸಂಶಯ ಬರುವುದೆಂದರೆ ತರಾವೀಹ್ ಹನ್ನೊಂದು ರಕಅತ್ತೋ? ಅಲ್ಲ ಹದಿಮೂರೋ? ಅಲ್ಲ ಇಪ್ಪತ್ತೋ ಎಂದಾಗಿದೆ. ಆದರೆ ಇಪ್ಪತ್ತು ರಕಅತ್ತೆನ್ನುದರ ಬಗ್ಗೆ ನಾಮು ಮುಂಚೆಯೇ ಅದು ಸುನ್ನತಲ್ಲವೆಂದೂ ಅಲ್ಲದೇ ಆ ಅಸರಿನಲ್ಲಿರುವ ಗೊಂದಲಮಯ ವಿಷಯಗಳನ್ನೂ ಅಲ್ಲದೇ ಇಜ್ಮಾಅ ಅಲ್ಲವೆಂದೂ ಇಪ್ಪತ್ತಕ್ಕೆ ಪ್ರಾಧಾನ್ಯತೆ ಇಲ್ಲವೆಂದು ಪುರಾವೆ ಸಹಿತ ವಿವರಿಸಿದ್ದೇವೆ. ಇನ್ನಿರುವುದು ಹನ್ನೊಂದು ಮತ್ತು ಹದಿಮೂರು ಈ ಎರಡು ರಕಆತ್ ಗಳ ಬಗ್ಗೆ ಆಗಿರುತ್ತದೆ ಇಮಾಮ್ ನವವಿ ರಹಿಮಹುಲ್ಲಾಹ್ ಹೇಳಿದ ಪ್ರಾಕರವೆ ಮುಸ್ಲಿಂ ಉಮ್ಮತ್ ಅಹ್ಲುಸುನ್ನಃ ನಡೆದು ಕೊಂಡುಬಂದಿರವ ಹಾದಿಯಾಗಿದೆ ಏನೆಂದರೆ ತರಾವೀಹ್ ನಮಾಝಿನ ಗಣನೆಯ ವಿಷಯದಲ್ಲಿ ಈ ಮೇಲೆ ಹೇಳಿದ ಹದೀಸುಗಳಿಂದ ಪ್ರವಾದಿ ಸ. ರವರ ಏಳು ರಕಅತಿನಿಂದ ಹಿಡಿದು ಹದಿಮೂರು ರಕಅತ್ತಿನವರಗಿರುವ ಎಲ್ಲಾ ಹದೀಸುಗಳನ್ನಿಟ್ಟು ನೋಡಿದರೆ ಬಹು ಪಕ್ಷ ಅಹ್ಲುಲ್ ಇಲ್ಮಿನವರ ಮತ್ತು ಸಲಫ್ ಹಾಗೂ ಅಯಿಮ್ಮತುಲ್ ಅರ್ಬ ರವರ ಅಭಿಪ್ರಾಯಗಳನ್ನು ನೋಡುವಾಗ ನಾವು ಈ ದಿನಗಳಲ್ಲಿ ಹಿಂಬಾಲಿಸುತ್ತಿರುವ ಹನ್ನೊಂದು ರಕಅತ್ ಪ್ರಖ್ಯಾತವೂ ಶ್ರೇಷ್ಟವೂ ಅತ್ಯಧಿಕವಾಗಿ ಹೆಸರುವಾಸಿಯಾಗಿರುವುದು ಸನ್ನತ್ತಾಗಿರುವುದೂ ಆಗಿರುತ್ತದೆ. ಹದಿಮೂರು ರಕಆತ್ ಒಬ್ಬ ನಿರ್ವಹಿಸಿದರೆ ಅದಕ್ಕೆ ಆಧಾರ ವಿರುವುದೂ ಪ್ರವಾದಿ ಸ. ರವರು ನಿರ್ವಹಿಸಿರುವುದೂ ಅನುವದನೀಯವೂ ಆಗಿದೆ. ಇಪ್ಪತ್ತು ರಕಆತ್ತಿನ ಹೊರತು. ಎನ್ನುವ ಸುನ್ನತ್ತಿನ ಮಾರ್ಗವಾಗಿದೆ ಸರಿಯಾದ ಮಾರ್ಗ.

ತರಾವೀಹ್ ಮತ್ತು ಸೌದಿ ಫತ್ವಾ ಕಮೀಟಿ

ಸೌದಿ ಅರಬೀಯಾದ ಫತ್ವಾ ಕಮೀಟಿಯಿಂದ ಹೊರಡಿಸಿರುವ ಫತ್ವಾ **'ಮಜ್ಮೂಅ ಫತಾವಾ ಅಲ್ಲಜನತ್ತುದಾಯಿಮ'** ಸಹಾ ಜನಪ್ರಿಯವಾದ ಹನ್ನೊಂದು ರಕಅತನ್ನೇ ತೆಗೆದು ಕೊಂಡಿರುವುದು:

صلواة التراويح سنة سنها رسول الله صلي الله عليه وسلم وقد دلت الادلة علي انه صلي الله عليه وسلم ما كان يزيد في رمضان ولا في غيره علي احدي عسرة ركعة(دستخط شيخ عبدالله بن قعود شيخ عبد الله بن غديان شيخ عبد الرزاق عفيفي علاّمه ابن باز)[142]

"ನಮಾಝ್ ತರಾವೀಹ್ ಸುನ್ನತ್ತಾಗಿದೆ, ಪ್ರವಾದಿ ಸ.ರವರು ಸುನ್ನತ್ ಮಾಡಿರು ಸುನ್ನತ್ ಆಗಿರುತ್ತದೆ ಮತ್ತು ಪುರಾವೆಗಳು ಸಾಕ್ಷಿಯಾಗಿವೆ ರಮಝಾನೋ ಅಥವಾ ಇತರ ಯಾವುದೇ ತಿಂಗಳಲ್ಲಿ ಹನ್ನೊಂದಕ್ಕಿಂತ ಹೆಚ್ಚು ನಮಾಝ್ ನಿರ್ವಹಿಸಲ್ಲಿ"

ತರಾವೀಹ್ ಮತ್ತು ಉಲಮಾವುಲ್ ಹರಮ್ಯನ್ ಷರೀಫ್ಯನ್

ಹರಮ್ಯನ್ ಷರೀಫ್ಯನ್ ನ ಬಾಂಗ್, ಇಖಾಮತ್, ಐದು ಹೊತ್ತಿನ ನಮಾಝ್, ಖುತುಬಾ ಜುಮಾ, ಈದ್ಯನ್ ಮತ್ತು ತರಾವೀಹ್ ನ ಜಮಾಅತ್ ಸೌದಿ ಟೀವಿಯಿಂದ ವೀಕ್ಷಣೆಗೆ ನೇರಪ್ರಸಾರ ಲಭ್ಯವಿದೆ. ಅಲ್ಲದೇ ನಮಾಝಿನಲ್ಲಿ ಎದೆಯ ಮೇಲೆ ಕೈಕಟ್ಟುವುದೂ ನಾಭಿಯ ಮೇಲೆ ಎದೆಯ ಮಧ್ಯಭಾಗ ದಲ್ಲಾದರೂ ಕಟ್ಟುವುದನ್ನೂ ಮತ್ತು ಘನವಾದ ಸ್ವರದಿಂದ ಆಮೀನ್ ಹೇಳುವುದು, ರುಕೂವಿಗೆ ಹೋಗುವಾಗ ಮತ್ತು ಅಲ್ಲಿಂದ ಮರಳುವಾಗ ಕೈಎತ್ತುವುದನ್ನು ನೋಡುತ್ತಿರುತ್ತಾರೆ ಅದೇ ರೀತಿ ಜುಮಾ, ಮತ್ತು ಈದ್ಯನ್ ಗಳಲ್ಲಿ ಮಾಡುವಂತಹಾ ಖುತುಬಾಗಳಲ್ಲಿ ತೌಹೀದಿನ ಬಗ್ಗೆ ವಿವರಿಸುವುದನ್ನೂ ಕೇಳುತ್ತಿರುತ್ತಾರೆ, ಇಸ್ತಘಾಸಃ ಮತ್ತು ಇಸ್ತಿಆನಃ ಅಲ್ಲಾಹನ ಹೊರೆತು ಮಾಡಬಾರದೆನ್ನುವುದನ್ನೂ ಕಬರನ್ನು ಚುಂಬಿಸುವುದೋ ಪ್ರದಕ್ಷಿಣೆಮಾಡುವುದೋ, ಅವುಗಳ ಮೇಲೆ ಹೊದಿಕೆ ದೊದಿಸುವದೋ ಸೂಫಿ ಸಂತರು ಕಬರಿನ ಶಿಫಾರುಸ್ಸುಗಾರರೆಂದು ಜನರಿಂದ ಹಣ ಕೊಳ್ಳೆಹೊಡೆಯುವುದನ್ನು ಸಹಕರಿಸುವುದೋ ಅವರಿಗೆ ಹಣನೀಡುವುದೋ ವಿರೊದಿಸುವಂತಹ ಮಾತುಗಳನ್ನಾಡುವುದೂ ಕೇಳುತ್ತಿರುತ್ತಾರೆ. ಪ್ರವಾದಿ ಸ.ರವರ ಸುನ್ನತ್ತನ್ನು ಜೀವನದಲ್ಲಿ ಅಳವಡಿಸುವುದು ಬಿದ್ಅತ್ ಗಳಿಂದ ದೂರುವಿರಲು ಕರೆ ಕೊಡೂವುದನ್ನೂ ಕೇಳುತ್ತಿರುತ್ತಾರೆ. ಆದರೆ ಈ

[142] ಫತಾವಾ ಲಜನತುದಾಯಿಮ –7/194

ಎಲ್ಲಾ ಮಾತುಗಳನ್ನು ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ಹೊರಗಟ್ಟುತ್ತಾರೆ. ಇಷ್ಟಾದರೂ ವರ್ಷವಿಡೀ ಇಂತಹವುಗಳನ್ನು ಕೇಳಿದಮೇಲೂ ಅವರ ಕಿವಿಯ ತಮಟೆಗೆ ಹೊಡೆಯುವುದೊಂದೇ ಮಾತು ಇಪ್ಪತ್ತು ರಕಅತ್ ತರಾವೀಹ್ ಆಗಿರುತ್ತದೆ.

ಬಹಳಷ್ಟು ಎಲ್ಲಾ ವಿಷಯಗಳಲ್ಲಿ ಜನರು ಜಾಗ್ರತೆ ಮತ್ತು ಸೂಕ್ಷ್ಮತೆಯಿಂದ ಚರ್ಚಿವಾಗ ತರಾವೀಹ್ ನ ವಿಷಯ ಬಂದಾಗ ಯಾತಾರ್ಥವನ್ನು ಬೆಳಕಿಗೆ ತರುವುದನ್ನು ಬಿಟ್ಟು ಬಹಳ ರೋಷದಿಂದ ಸುತ್ತಿ ಬಳಸಿ ಪುರಾವೆಗಳನ್ನು ಕೊಟ್ಟು ತರ್ಕಕುತರ್ಕಗಳಿಗೆ ಸೈಎನ್ನುತ್ತಾರೆ. ಹರಮ್ಯನ್ ಷರೀಫ್ಯನ್ ನಲ್ಲಿ ಪ್ರತ್ಯಕ್ಷವಾಗಿಯೂ ನೇರಪ್ರಸಾರದಿಂದಲೂ ನೋಡುತ್ತಾರೆ ಸಾಧಾರಣವಾಗಿ ನಿರ್ವಹಿಸುವಂತೆ ಒಬ್ಬ ಇಮಾಮ್ ಬರೆ ಹತ್ತು ರಕಆತ್ ಮಾತ್ರ ನಿರ್ವಹಿಸುತ್ತಾರೆ ಹೊರತು ಇಪ್ಪತ್ತಲ್ಲ. ಮೊದಲು ಒಬ್ಬ ಇಮಾಮ್ ಹತ್ತು ರಕಆತ್ ನಿರ್ವಹಿಸಿದರೆ ಇನ್ನೊಬ್ಬ ಇಮಾಮ್ ಹತ್ತು ನಿರ್ವಹಿಸಿ ನಂತರ ಮೂರು ವಿತ್ರ್ ನೊಂದಿಗೆ ಹದಿಮೂರು ರಕಆತ್ ನಿರ್ವಹಿಸುತ್ತಾರೆ.

ಈ ಎರಡು ಮಸೀದಿ(ಹರಮ್ಯನ್ ಷರೀಫ್ಯನ್) ಗಳು ಪ್ರತ್ಯೇಖ ಮಕ್ಕಾ ಮತು ಮದೀನ ಮುನವ್ವರ ಸೇರಿ ಎಲ್ಲಾ ಸೌದಿ ಅರೇಬಿಯಾ ಮತ್ತು ಇತರ ಅರಬಿ ರಾಷ್ಟ್ರಗಳ ಬೇರೆ ಲಕ್ಷಗಟ್ಟಲೆ ಮಸೀದಿಗಳಲ್ಲಿ ಹನ್ನೊಂದು ರಕಆತ್ ನಿರ್ವಹಿಸುವ ಬಗ್ಗೆ ಆಲೋಚಿಸಿದರೂ ಒಂದು ವಾಸ್ತವ ಹೊರಹೊಮ್ಮುದೇನೆಂದರೆ ಶ್ರೇಷ್ಟವೂ ಉತ್ತಮವೂ ಸುನ್ನತ್ತೂ ಆಗಿರುವುದು ಬರೇ ಹನ್ನೊಂದು ರಕಆತ್ತೆ ಸರಿಯಾಗಿರುವುದಾಗಿದೆ. ಇನ್ನು ಯಾರಾದರೂ ನಫಿಲ್ ನಮಾಝ್ ಅಧಿಕಗೊಳಿಸುವ ಉದ್ಧೇಶದಿಂದ ಹೆಚ್ಚು ನಿರ್ವಹಿಸಿದ್ದಲ್ಲಿ ಅವನ್ನು ವಿರೋಧಿಸಲಾಗದು. ಅಲ್ಲದೇ ಶರೀಆತ್ತಿನ ಕೇಂದ್ರ ಮತ್ತು ಪ್ರಮಾಣ ಖುರ್ಆನ್ ಸುನ್ನತ್ ಮತ್ತು ಇಜ್ಮಾವು ಸ್ವಹಾಬ ಆಗಿರುತ್ತದೆ ಹೊರತು ಯಾವೊಂದು ದೇಶ ಮತ್ತು ಊರಿನ ನಿರಂತರವಾಗಿ ನಿರ್ವಹಿಸುವ ಕರ್ಮಗಳಿಂದಲ್ಲ.

ಆಲ್ ಸವೂದ್ ರ ಕಾಲದ ಮೊದಲು ಹರಮ್ಯನ್ ಷರೀಫ್ಯನ್ ನಲ್ಲಿ ನಾಲ್ಕು ಇಮಾಮರ ನಾಲ್ಕು ಮುಸಲ್ಲಾಗಳಿಂದ ಜಮಾಅತ್ ನಡೆಯುತಿತ್ತು ಈ ವಿಷಯದ ಬಗ್ಗೆ ಏನು ಹೇಳುತ್ತೀರಿ?

ಮತ್ತು ಒಂದು ವೇಳೆ ಇದಕ್ಕೆ ವಿರುದ್ದವಾಗಿ ನಡೆಯುವವರ ವಿಷಯವು ನೋಡುವ ಇತರ ಎಲ್ಲಾ ಮಸಾಯಿಲ್ ಮತ್ತು ಹುಕುಂ (ಉಸೂಲ್ ಮತ್ತು ವಿಭಾಗಿಯ) ಗಳಲ್ಲಿ

ಹರಮ್ಯನ್ ಷರೀಪ್ಯನ್ ನ ಇಮಾಮರು ಸ್ವೀಕಾರರ್ಹರಾಗುವವಾಗ ಅವರ ಬಳಿ ತರಾವೀಹ್ ನ ವಿಷಯವು ಹೇಗೆ ಸ್ವೀಕಾರ ಅರ್ಹವಾಗುವುದು. ಎಲ್ಲೋ ಎನೋ ಹೆಚ್ಚು ಕಡಿಮೆ ತೋರುತ್ತಿಲ್ಲವೇ?.

ಸ್ವತಃ ಉಸೂಲ್ ಅಖಾಯಿದ್ ಗಳಲ್ಲಿ ಮಾತುರಿದೀ, ಅಷಾಯಿರೀ, ಕರ್ಮ ಶಾಸ್ತ್ರಗಳಲ್ಲಿ ಹನಫಿ, ಶಾಫಿಯೀ ಮತ್ತು ತಸವ್ವುಫ್ ಗಳಲ್ಲಿ ಖಾದಿರಿ, ನಕ್ಷಬಂದೀ ಚಿಶ್ತೀ ಸುಹರವರ್ದಿ, ಸಿಲ್‌ಸಿಲಾಗಳಲ್ಲಿ ವಿಶ್ವಾಸ ವಿರುಸುವವರು “ವಹ್ಹಾಬಿ” ಗಳ ಹಿಂಬಾಲಕರಾಗಿದ್ದಾದರೂ ಹೇಗೆ? ಅಲ್ಲದೇ ಅವರ ಹಿಂದೆ ನಿರ್ವಹಿಸಿದ ನಮಾಜನ್ನು ಪುನಃ ನಿರ್ವಹಿಸಬೇನ್ನುವ ಫತ್ವಾಗಳನ್ನೂ ಜಾರಿ ಮಾಡಿರುವರು.

ಇನ್ನು ಹಳೇಯ ಸಿಟ್ಟನ್ನು ಬದಿಗಿಟ್ಟು ಅಲ್ಲಾಹನ ನಾಮದಿಂದ ಯಾವ ರೀತಿ ಹರಮ್ಯನ್ ಷರೀಪ್ಯನ್ ನ ತರಾವೀಹನ್ನು ಸ್ವೀಕರಿಸುತ್ತೀರೋ ಅದೇ ರೀತಿ ಬಾಕಿ ಇರುವ ಆಖೀದ ಮತ್ತು ಕರ್ಮಶಾಸ್ತ್ರಗಳ ವಿಷಯದಲ್ಲೂ ಅಲ್ಲಾಹನ ಕಿತಾಬ್ ಮತ್ತ ಸುನ್ನತ್ತಿಗೆ ಮರಳಿರಿ ಯಾಕೆಂದರೆ ಇದರಲ್ಲೇ ನಮ್ಮೆಲ್ಲರ ವಿಜಯವಿರುವುದು.